ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 8 ಸಂಚಿಕೆ 47

ನವೆಂಬರ್ 23, 2014

ಪುಟ 16 ರೂ. 10/-

Blog :janashakthi.wordpress.com e-mail : js_weekly@yahoo.com



'ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಉಳಿಸಿ'



ನವೆಂಬರ್ 26 - ರಾಷ್ಟ್ರವ್ಯಾಪಿ ಚಲುವಳಿ



ಉದ್ದೇಶಿತ ಕಾರ್ಮಿಕ ಕಾಯ್ದೆ ತಿದ್ದುಪಡಿ 'ಕಾರ್ಮಿಕರನ್ನು ಜೀತದಾಳುಗಳನ್ನಾಗಿ ಮಾಡುವ ಯತ್ನ'

–ಬೆಂಗಳೂರಿನ 'ವಿಚಾರ ಸಂಕಿರಣ'ದಲ್ಲಿ ಎಚ್ಚರಿಕೆ



ಸಿರುಗುಪ್ಪ: ಮೋಹರಂ ಹಬ್ಬದಲ್ಲಿ ಹಲಗೆ ಬಡಿದದ್ದಕ್ಕೆ ದಲಿತರಿಗೆ ಬಡಿತ

ಮೋದಿ ಸಂಪುಟ ಪುನರ ರಚನ: ಎಲ್ಲಿ ಜನತೆಗೆ ಕೊಟ್ಟ ವಚನ



ಕ್ಷತ್ರಿಯ– ಬ್ರಾಹ್ಮಣರ ಡುಯೆಟ್ ಸಾಂಗ್ ಆದ ಅನೇಕ ಉಪನಿಷತ್ತುಗಳು

‘ಎಲೈ ಶಿಷ್ಯನೇ, ಇಲ್ಲಿ ಜನಕ ರಾಜನು ನೆರೆಸಿರುವ, ಒಂದೊಂದರ ಕೊಂಬುಗಳಿಗೂ ಹತ್ತು ಚಿನ್ನದ ಪಡಗಳನ್ನು ಕಟ್ಟಿರುವ ಸಾವಿರ ಹಸುಗಳನ್ನು ನಮ್ಮ ಆಶ್ರಮಕ್ಕೆ ಹೊಡೆದುಕೊಂಡು ನಡೆ.’

‘ಪವಿತ್ರ ವೇದವಿದ ವಿದ್ವಾಂಸರನ್ನು ಅಪಾರವಾಗಿ ಗೌರವಿಸುತ್ತೇನೆ. ಆದರೆ ನಾವು ಈಗ ಗೋ ಸಂಪತ್ತಿನ ಬಯಕೆಯುಳ್ಳವರು.’

ಜನಕ ರಾಜನು ಯಜ್ಞಾಂತ್ಯದಲ್ಲಿ ಅಲ್ಲಿ ನೆರೆದಿದ್ದ ಸಾವಿರಾರು ಬ್ರಾಹ್ಮಣರಿಗೆ ಒಂದು ಸವಾಲೊಡ್ಡಿದನು: ಈ ಮಂದೆಯಲ್ಲಿ ಸಾವಿರ ಶ್ರೇಷ್ಠ ತಳಿಯ ಗೋವುಗಳನ್ನು ಕೂಡಲಾಗಿದೆ. ಅದರಲ್ಲಿ ಪ್ರತಿ ಗೋವಿನ ಕೊಂಬುಗಳನ್ನೂ ಹತ್ತು ಚಿನ್ನದ ತುಣುಕುಗಳಿಂದ ಅಲಂಕರಿಸಲಾಗಿದೆ. ಅವುಗಳು ಇಲ್ಲಿರುವ ಬ್ರಾಹ್ಮಣರಲ್ಲಿ ಅತಿ ದೊಡ್ಡ ವಿದ್ವಾಂಸರು ಯಾರೋ ಅವರಿಗೆ ಬಹುಮಾನವಾಗಿ ಕೊಡಲ್ಪಡುತ್ತವೆ. ಅಂತಹ ವಿದ್ವಾಂಸರು ಅದನ್ನು ಕೊಂಡೊಯ್ಯಬಹುದು ಎಂದು.

ಆಗ ಅಲ್ಲಿರುವ ಬ್ರಾಹ್ಮಣ ಶ್ರೇಷ್ಠರು ಒಬ್ಬರ ಮುಖ ಒಬ್ಬರು ನೋಡಿಕೊಳ್ಳುತ್ತಾ ಸುಮ್ಮನಿದ್ದರು. ಆಗ ಮಹರ್ಷಿ ಯಾಜ್ಞವಲ್ಕ್ಯರು ತಾವೇ ಅಲ್ಲಿರುವ ಬ್ರಾಹ್ಮಣರಲ್ಲೆಲ್ಲಾ ಶ್ರೇಷ್ಠರು ಎಂದು ಸಾಬೀತು ಮಾಡುವ ಸವಾಲನ್ನು ಸ್ವೀಕರಿಸಿ ಅಲ್ಲಿದ್ದ ಅಲಂಕೃತ ದನಗಳನ್ನು ತಮ್ಮ ಆಶ್ರಮಕ್ಕೊಯ್ಯಲು ಹೇಳಿದ ಮಾತಿದು.

ಭಾಗ – 43



ಚೋಮನ ದುಡಿ

ಜಿ. ಎನ್. ನಾಗರಾಜ್

ಯಾಜ್ಞವಲ್ಕ್ಯ ಮಹರ್ಷಿಗಳು ಉಪನಿಷತ್ ಋಷಿಗಳಲ್ಲೇ ಬಹಳ ಪ್ರಸಿದ್ಧರಾದವರು. ಬೃಹದಾರಣ್ಯಕೋಪನಿಷತ್ ಉಪನಿಷತ್ತುಗಳಲ್ಲಿಯೇ ಬಹಳ ದೊಡ್ಡದು ಮತ್ತು ಬಹಳ ಮಹತ್ವದ್ದು ಎಂದು ಹೆಸರಾದದ್ದು. ಈ ಉಪನಿಷತ್ತಿನಲ್ಲಿ ಯಾಜ್ಞವಲ್ಕ್ಯರ ವಿಚಾರಗಳು ತುಂಬಿ ತುಳುಕಿವೆ. ಆತ್ಮ ಮತ್ತು ಬ್ರಹ್ಮನ್ ಬಗ್ಗೆ ಜನಕ ರಾಜನಿಗೆ ಹಲವು ಬಾರಿ ವಿವರಿಸುತ್ತಾರೆ. ಎಲ್ಲ ಆಸೆಗಳನ್ನೂ ಬಿಟ್ಟವರು ಮಾತ್ರ ಬ್ರಹ್ಮನ್ ಅನ್ನು ಸೇರುತ್ತಾರೆ ಎಂದು ಜನಕನಿಗೆ, ತಮ್ಮ ಪತ್ನಿ ಮೈತ್ರೇಯಿಗೆ ಮನವರಿಕೆ ಮಾಡಿಕೊಡುತ್ತಾರೆ.

ಯೋ ಕಾಮೋ ನಿಷ್ಕಾಮ ಆಪ್ತಕಾಮ ಆತ್ಮಕಾಮೋ ನ ತಸ್ಯ ಪ್ರಾಣಾ ಉತ್ಕ್ರಾಮಂತಿ, ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ 4–4–6

ಯಾವನು ಕಾಮಗಳನ್ನು(ಆಸೆ) ಹೊಂದಿಲ್ಲವೋ, ಯಾವನು ಎಲ್ಲ ಕಾಮಗಳನ್ನು ತ್ಯಜಿಸಿದ್ದಾನೋ, ಯಾವನು ಆತ್ಮನನ್ನುಳಿದು ಮತ್ತೇನನ್ನೂ ಬಯಸುವುದಿಲ್ಲವೋ ಅವನ ಪ್ರಾಣ ಮತ್ತೆ ಜನಿಸುವುದಿಲ್ಲ. ಅವನು ಬ್ರಹ್ಮವೇ ಆಗಿದ್ದು ಬ್ರಹ್ಮವನ್ನೇ ಸೇರುತ್ತಾನೆ.

ಯದಾ ಸರ್ವೇ ಪ್ರಮುಚ್ಯಂತೇ ಕಾಮಾ ಯೇಸ್ಯ ಹೃದಿ ಶ್ರಿತಾಃ /

ಅಥ ಮರ್ತ್ಯೋಮೃತೋ ಭವತ್ಯತ್ರ ಬ್ರಹ್ಮ ಸಮಶ್ನುತ ಇತಿ //4–4–7

ಹೃದಯದಲ್ಲಿ ಆಶ್ರಯ ಪಡೆದಿರುವ ಆಸೆಗಳೆಲ್ಲಾ ಬಿಟ್ಟು ಹೋಗುವವೋ ಆಗ ಮರ್ತ್ಯನು ಅಮೃತನಾಗುತ್ತಾನೆ. ಇಲ್ಲಿಯೇ ಬ್ರಹ್ಮವನ್ನು ಪಡೆದುಕೊಳ್ಳುತ್ತಾನೆ.

ಎಲ್ಲಾ ಆಸೆಗಳನ್ನು ಬಿಟ್ಟು ಬ್ರಹ್ಮನನ್ನು ಪಡೆದುಕೊಳ್ಳಬೇಕೆಂದು ಎಲ್ಲ ಭೋಗಭಾಗ್ಯಗಳನ್ನು ಅನುಭವಿಸುತ್ತಿದ್ದ ಮಹಾರಾಜ ಜನಕನಿಗೆ ಮಹರ್ಷಿ ಯಾಜ್ಞವಲ್ಕ್ಯರು ಸಾವಿರ ಹಸುಗಳ ಆಸೆಗಾಗಿ ಉಪದೇಶ ಮಾಡುತ್ತಾರೆ. ಈ ಭವ್ಯ ಉಪದೇಶವನ್ನು ಕೇಳಿದ ಜನಕ ಮಹಾರಾಜ ಎಲ್ಲಾ ಆಸೆಗಳನ್ನು ಬಿಡಬೇಕೆಂದು ಹೇಳಿದವರಿಗೆ ಸಾವಿರ ಹಸುಗಳನ್ನು ದಾನ ಮಾಡುತ್ತಾನೆ. ಈ ವ್ಯಂಗ್ಯಕ್ಕೆ, ವೈರುಧ್ಯಕ್ಕೆ ಏನೆನ್ನಬೇಕು?

ಇದು ಒಂದು ಸ್ಪರ್ಧೆ. ಆದ್ದರಿಂದ ಇದು ಆಸೆಯ ಪ್ರಶ್ನೆಯಲ್ಲ. ಸವಾಲನ್ನು ಸ್ವೀಕರಿಸಿದ್ದಷ್ಟೇ ಎಂದು ಹೇಳಬಹುದು. ಆದರೆ ಇಂತಹ ದಾನವನ್ನು ಯಾಜ್ಞವಲ್ಕ್ಯರು ಬಯಸಿದ್ದು ಮತ್ತು ಜನಕರಾಜ ಉದಾರವಾಗಿ ನೀಡಿದ್ದು ಒಂದೇ ಬಾರಿಯೇನಿಲ್ಲ. ಹಲ ಹಲವು ಬಾರಿ.

ಒಮ್ಮೆ ಜನಕರಾಜ ಸಿಂಹಾಸನದಲ್ಲಿ ಆಸೀನನಾಗಿದ್ದಾನೆ. ಯಾಜ್ಞವಲ್ಕ್ಯರು ಅವನ ಭೇಟಿ ಬಯಸಿ ಬರುತ್ತಾರೆ. ಆಗ ಜನಕ, ‘ಯಾಜ್ಞವಲ್ಕ್ಯರೇ, ತಮ್ಮ ಆಗಮನದ ಕಾರಣವೇನು? ಮತ್ತಷ್ಟು ಗೋವುಗಳನ್ನು ಬಯಸಿ ಬಂದಿದ್ದೀರೋ ಅಥವಾ ಕೂದಲು ಸೀಳುವ ವಾದವನ್ನು ಬಯಸುತ್ತಿದ್ದೀರೋ’ ಎಂದು ಹಾಸ್ಯ ಮಾಡುತ್ತಾನೆ.

ಅವರ ನಡುವೆ ಚರ್ಚೆ ನಡೆಯುತ್ತದೆ. ಎಲ್ಲವೂ ಬ್ರಹ್ಮವೇ, ಈ ಜಗತ್ತಿನೆಲ್ಲಾ ಭೋಗಭಾಗ್ಯಗಳನ್ನೂ ತ್ಯಜಿಸಿ ಕೇವಲ ಆತ್ಮನನ್ನು ಮಾತ್ರ ಧ್ಯಾನಿಸುವ ಬಗ್ಗೆ ಯಾಜ್ಞವಲ್ಕ್ಯ ಉಪದೇಶ ಮಾಡುತ್ತಾನೆ. ಒಂದೊಂದು ಬಾರಿ ಜನಕನಿಗೆ ಖುಷಿಯಾದಾಗಲೂ ಜನಕ ಒಂದೊಂದು ಸಾವಿರ ಹಸುಗಳನ್ನು ಅವುಗಳ ಜೊತೆಗೆ ಆನೆ ಗಾತ್ರದ ಒಂದು ಹೋರಿಯನ್ನೂ ದಾನ ಮಾಡುತ್ತಾ ಹೋಗುತ್ತಾನೆ. ಹೀಗೆ ನಾಲ್ಕು ಬಾರಿ ದಾನ ಕಾರ್ಯ ನಡೆಯುತ್ತದೆ. ಅಂದರೆ ನಾಲ್ಕು ಸಾವಿರ ಹಸುಗಳು ಯಾಜ್ಞವಲ್ಕ್ಯರ ಸಂಪತ್ತಿಗೆ ಸೇರ್ಪಡೆಯಾಗುತ್ತವೆ. ಹೀಗೆ ಮತ್ತೊಂದು ಬಾರಿ ಕೂಡ ಯಾಜ್ಞವಲ್ಕ್ಯರು ರಾಜಾಸ್ಥಾನಕ್ಕೆ ಬರುತ್ತಾರೆ. ಮತ್ತೆ ಐದು ಕಂತುಗಳಾಗಿ ಐದು ಸಾವಿರ ಹಸುಗಳು ಯಾಜ್ಞವಲ್ಕ್ಯರ ವಶವಾಗುತ್ತವೆ.


ಅಂದು ಗೋವುಗಳೇ ಜನರ ಸಂಪತ್ತಿನ ಪ್ರಧಾನ ರೂಪವಾಗಿತ್ತು. ಇಂತಹ ಸಂದರ್ಭದಲ್ಲಿ ಹತ್ತಾರು ಸಾವಿರ ಹಸುಗಳು ಯಾಜ್ಞವಲ್ಕ್ಯರ ಸಂಪತ್ತಾದುವು ಎಂಬ ಉಲ್ಲೇಖ ಕೇವಲ ಬೃಹದಾರಣ್ಯಕ ಉಪನಿಷತ್ ಒಂದರಲ್ಲಿಯೇ ನೀಡಲಾಗಿದೆ.

ಎಲ್ಲ ಸಂಪತ್ತು, ಭೋಗಭಾಗ್ಯಗಳ ಆಸೆಯನ್ನು ಬಿಡಬೇಕೆಂಬ ಉಪದೇಶವನ್ನು ನೀಡಿ ಗೋಸಂಪತ್ತು ಮಾತ್ರವಲ್ಲ ಚಿನ್ನವನ್ನೂ ಪಡೆದುಕೊಂಡ ಯಾಜ್ಞವಲ್ಕ್ಯ ಮಹರ್ಷಿಗಳು ಒಂದು ಕಡೆ, ಈ ಉಪದೇಶವನ್ನು ಪಡೆದುಕೊಂಡ ಮಹಾರಾಜ ಜನಕ ಇಂತಹ ಅನೇಕರಿಗೆ ಮಹಾದಾನಗಳನ್ನು ನೀಡುವಷ್ಟು ಸಂಪತ್ತನ್ನು ಹೊಂದಿದ್ದವನು.

ವೇದಾಂತವನ್ನು, ಭವ್ಯ ಭಾರತದ ತತ್ವಶಾಸ್ತ್ರವನ್ನು ವೈಭವೀಕರಿಸುವವರು ಜನಕನನ್ನು ರಾಜರ್ಷಿಯೆಂದೂ ಯಾಜ್ಞವಲ್ಕ್ಯರನ್ನು ಅವರಿಗೆ ಸಮಾನರಿಲ್ಲದ ಮಹರ್ಷಿಗಳೆಂದೂ ವರ್ಣಿಸುತ್ತಾರೆ.

ಇಂತಹ ರಾಜ–ಮಹರ್ಷಿಗಳ ಯುಗಳ ಗೀತೆ ಉಪನಿಷತ್ತುಗಳಲ್ಲಿ ಅನೇಕ ಕಡೆ ದೊರಕುತ್ತವೆ, ವಿವಿಧ ರೂಪಗಳಲ್ಲಿ. ಅನೇಕ ಉಪನಿಷತ್ತುಗಳಲ್ಲಿ ಇಂತಹ ಉಪದೇಶಗಳನ್ನು ಬೋಧಿಸಿದವರೇ ರಾಜರುಗಳು. ಬ್ರಾಹ್ಮಣರು, ಮುನಿಗಳು ರಾಜರ ಶಿಷ್ಯತ್ವ ಸ್ವೀಕರಿಸಿ ಅವರಿಂದ ಉಪದೇಶ ಪಡೆದುಕೊಂಡಿರುವುದನ್ನು ಕಾಣುತ್ತೇವೆ. ಭಾರತದ ಇತಿಹಾಸದಲ್ಲಿ ಇಂತಹ ಉದಾಹರಣೆಗಳು ಮೊದಲ ಬಾರಿಗೆಂಬಂತೆ ಉಪನಿಷತ್ತುಗಳಲ್ಲಿ ದಾಖಲಾಗಿವೆ. ಆ ನಂತರವೂ ವೈದಿಕ ಪರಂಪರೆಯೆಂದು ಗುರುತಿಸಲ್ಪಟ್ಟ ಧಾರ್ಮಿಕ ಪರಂಪರೆಯಲ್ಲಿ ಕೇವಲ ಕೆಲವು ಬಾರಿ ಮಾತ್ರ ದಾಖಲಾಗಿವೆ.

ಬೃಹದಾರಣ್ಯಕ ಉಪನಿಷತ್ತು ಮತ್ತು ಕೌಶೀತಕಿ ಉಪನಿಷತ್ತುಗಳೆರಡರಲ್ಲಿಯೂ ಉಲ್ಲೇಖಿತವಾದ ಒಂದು ಉದಾಹರಣೆಯನ್ನು ನೋಡೋಣ. ಗಾರ್ಗ್ಯ ಎಂಬ ಒಬ್ಬ ಋಷಿಯು ಕಾಶಿಯ ರಾಜ ಅಜಾತಶತ್ರುವಿಗೆ ಬ್ರಹ್ಮನ್ ಎಂದರೇನೆಂದು ವಿವರಿಸಿದ. ಅದೆಲ್ಲವನ್ನೂ ಅತೃಪ್ತಿಕರವೆಂದು ಅಜಾತ ಶತ್ರು ತಳ್ಳಿಹಾಕಿದ. ಆಗ ಗಾರ್ಗ್ಯನು ರಾಜನ್ ನಾನೇ ಶಿಷ್ಯನಾಗುತ್ತೇನೆ ನನಗೆ ಉಪದೇಶ ಮಾಡು ಎಂದು ಕೇಳಿಕೊಂಡ. ಆಗ ಅಜಾತಶತ್ರುವು ‘ನಿಜವಾಗಿ ಒಬ್ಬ ಬ್ರಾಹ್ಮಣನು ಕ್ಷತ್ರಿಯನೊಬ್ಬನಿಂದ ಬ್ರಹ್ಮನ್ ಕುರಿತು ತಿಳಿದುಕೊಳ್ಳಬಯಸುವುದು ಸಾಧಾರಣ ರೀತಿಗೆ ವ್ಯತಿರಿಕ್ತವಾಗಿದೆ. ಆದರೆ ಬ್ರಹ್ಮನ್ ಎಂದರೇನೆಂದು ನಿನಗೆ ತಿಳಿಸಿಕೊಡುತ್ತೇನೆ.’ ಎಂದು ಹೇಳಿ ನಿದ್ರಾ, ಸ್ವಪ್ನ, ಸುಷುಪ್ತಿಯ ಉದಾಹರಣೆ ನೀಡಿ ವಿವರಿಸುತ್ತಾನೆ. ಯಾಜ್ಞವಲ್ಕ್ಯರಂತೆಯೇ ಆತ್ಮವೇ



‘ಸತ್ಯಸ್ಯ ಸತ್ಯ’ ಎಂದು ಹೇಳುತ್ತಾನೆ.

ಛಾಂದೋಗ್ಯ ಉಪನಿಷತ್ತು ಗೌತಮ ಎಂಬ ಬ್ರಾಹ್ಮಣನೊಬ್ಬ ಪಾಂಚಾಲ ರಾಜನ ಬಳಿ ಹೋಗಿ ತತ್ವಜ್ಞಾನವನ್ನು ಉಪದೇಶ ಮಾಡಬೇಕೆಂದು ವಿನಂತಿಸುತ್ತಾನೆ. ಆಗ ಆ ರಾಜ ಹೇಳುತ್ತಾನೆ “ಓ ಗೌತಮ, ಈ ಜ್ಞಾನವು ನಿನಗಿಂತ ಮೊದಲು ಈವರೆಗೆ ಬ್ರಾಹ್ಮಣರಿಗೆ ದೊರೆತಿಲ್ಲ. ಆ ಕಾರಣದಿಂದ ಸಕಲ ಲೋಕಗಳಲ್ಲಿಯೂ ಅಧಿಕಾರ ಕೇವಲ ಕ್ಷತ್ರಿಯರದ್ದಾಗಿ ಉಳಿದಿದೆ.” ಎಂದು. ಇದೇ ಛಾಂದೋಗ್ಯ ಉಪನಿಷತ್ತಿನಲ್ಲಿಯೇ ಮತ್ತೊಂದು ಉದಾಹರಣೆಯಲ್ಲಿ ಉದ್ದಾಲಕ ಅರುಣಿ ಮತ್ತು ಇತರ ಐದು ಜನ ಬ್ರಾಹ್ಮಣ ವಿದ್ವಾಂಸರು ಅಶ್ವಪತಿ ಕೈಕೇಯನೆಂಬ ರಾಜನಿಂದ ಉಪದೇಶ ಪಡೆದು ಆತ್ಮದ ಬಗ್ಗೆ ತಿಳಿದುಕೊಳ್ಳುತ್ತಾರೆ. ಮತ್ತೊಂದು ಕಥೆಯಲ್ಲಿ ಪ್ರವಾಣ ಜವಲಿ ಎಂಬ ರಾಜ ಬ್ರಾಹ್ಮಣರಿಗೆ ಉಪದೇಶ ನೀಡುತ್ತ ಈ ಜ್ಞಾನ ಇಲ್ಲಿಯವರೆಗೆ ಕ್ಷತ್ರಿಯರ ಏಕಸ್ವಾಮ್ಯದಲ್ಲಿತ್ತು. ಮೊದಲ ಬಾರಿಗೆ ನಿಮ್ಮ ಮೂಲಕ ಬ್ರಾಹ್ಮಣರಿಗೆ ಉಪದೇಶಿಸಲ್ಪಡುತ್ತಿದೆ ಎನ್ನುತ್ತಾನೆ.

ಇಂತಹ ಉದಾಹರಣೆಗಳನ್ನಾಧರಿಸಿ ಕೆಲವು ಸಂಶೋಧಕರು ಇಡೀ ಉಪನಿಷತ್ತುಗಳ ಜ್ಞಾನವೆಲ್ಲ ಕ್ಷತ್ರಿಯರ ಚಿಂತನೆಯೆಂದು ವಾದಮಾಡಿದ್ದಾರೆ. ಕೆಲವರು ಆ ಸಮಯದಲ್ಲಿ ಬ್ರಾಹ್ಮಣ ಹಾಗೂ ಕ್ಷತ್ರಿಯರ ನಡುವೆ ತಿಕ್ಕಾಟವಿತ್ತೆಂದು ಕೂಡ ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಉಪನಿಷತ್ತುಗಳ ಒಟ್ಟು ಚಿಂತನೆಗಳ ಸ್ವರೂಪವನ್ನು ನೋಡುವುದಾದರೆ ಇದರಲ್ಲಿ ಅನೇಕ ಚಿಂತನಾ ಧಾರೆಗಳಿವೆ. ಅದರಲ್ಲಿ ಆತ್ಮ ಮತ್ತು ಬ್ರಹ್ಮನ್ ಎಂಬ ಕಲ್ಪನೆ–ಯಾವ ಕಲ್ಪನೆ ಇಡೀ ಭಾರತ ದೇಶದ ಸಾಮಾಜಿಕ ವ್ಯವಸ್ಥೆಯನ್ನು ನಿರ್ದೇಶಿಸಿದೆಯೋ ಆ ಚಿಂತನೆ ಕ್ಷತ್ರಿಯ ರಾಜರ ಹಾಗೂ ಬ್ರಾಹ್ಮಣ ಮಹರ್ಷಿಗಳ ಜೋಡಿ ಪ್ರಯತ್ನವೆಂದು ಕಾಣುತ್ತದೆ. ಯಾವ ವಿಷಯವನ್ನು ಯಾಜ್ಞವಲ್ಕ್ಯ ವಿವರಿಸುತ್ತಾರೋ ಅದೇ ವಿಷಯವನ್ನು ಅದೇ ರೀತಿ ಅಜಾತಶತ್ರು ರಾಜನೂ ವಿವರಿಸುತ್ತಾನೆ. ಕೊನೆಗೆ ಬೃಹದಾರಣ್ಯಕೋಪನಿಷತ್ತಿನಲ್ಲಿ ಯಾಜ್ಞವಲ್ಕ್ಯರು ಹೇಳುತ್ತಾರೆ:

“ನಿಜವಾಗಿ, ಆರಂಭದಲ್ಲಿ ಈ ಜಗತ್ತು ಒಂದೇ ಆಗಿತ್ತು. ಅದೆ ಬ್ರಹ್ಮನ್. ಒಬ್ಬಂಟಿಯಾಗಿದ್ದುದರಿಂದ ಅದು ವೃದ್ಧಿ ಹೊಂದಲಿಲ್ಲ. ಅದು ಇನ್ನೊಂದು ಶ್ರೇಷ್ಠತರ ರೂಪದ ಕ್ಷತ್ರಿಯತ್ವವನ್ನು ಸೃಷ್ಟಿಸಿತು. ದೇವರುಗಳೊಳಗಿನ ಕ್ಷತ್ರಿಯರಾದ ಇಂದ್ರ, ವರುಣ, ಸೋಮ, ರುದ್ರ, ಪರ್ಜನ್ಯ, ಯಮ, ಮೃತ್ಯು, ಈಶಾನರನ್ನು ಸಹ ಸೃಷ್ಟಿಸಿತು. ಆದ್ದರಿಂದಲೆ ಕ್ಷತ್ರಿಯನಿಗಿಂತ ಉನ್ನತವಾದುದು ಏನೂ ಇಲ್ಲ. ಆದುದರಿಂದ ರಾಜಸೂಯ ಯಾಗದಲ್ಲಿ ಬ್ರಾಹ್ಮಣನು ಕ್ಷತ್ರಿಯನಿಗಿಂತ ಕೆಳಗಡೆ ಕುಳಿತುಕೊಳ್ಳುತ್ತಾನೆ. ಈ ಗೌರವವನ್ನು ಅವನು ಕ್ಷಾತ್ರತ್ವಕ್ಕೆ ಮಾತ್ರ ನೀಡುತ್ತಾನೆ. ಆದರೆ ಬ್ರಾಹ್ಮಣತ್ವವೇ ಕ್ಷತ್ರಿಯತ್ವದ ಮೂಲವಾಗಿದೆ. ಆದುದರಿಂದ ಕ್ಷತ್ರಿಯನು ಶ್ರೇಷ್ಠತೆಯನ್ನು ಪಡೆದರೂ ಸಹ ಅವನು ಅದಕ್ಕಾಗಿ ತನ್ನ ಮೂಲಾಧಾರವಾದ ಬ್ರಾಹ್ಮಣತ್ವದ ಮೇಲೆ ಅವಲಂಬಿಸಿರುತ್ತಾನೆ. ಆದುದರಿಂದ ಯಾವನು ಬ್ರಾಹ್ಮಣತ್ವವನ್ನು ಹಾನಿಗೊಳಿಸುತ್ತಾನೋ ಅವನು ತನ್ನ ಮೂಲಾಧಾರವನ್ನೇ ಹಾನಿಗೊಳಿಸುತ್ತಾನೆ.”

ಈ ಎಲ್ಲಾ ಸಂಗತಿಗಳು ಉಪನಿಷತ್ತುಗಳ ಕಾಲಕ್ಕೆ ಬಲಗೊಂಡಿದ್ದ ರಾಜರ ಅಧಿಕಾರದ ಹಿಡಿತವನ್ನೂ ಮತ್ತು ಅದು ಬ್ರಾಹ್ಮಣರ ಹಿಡಿತದಲ್ಲಿದ್ದ ಧಾರ್ಮಿಕ ಆಧಾರದ ಮೇಲೆ ಅವಲಂಬಿಸಿದ್ದನ್ನೂ ಸ್ಪಷ್ಟವಾಗಿ ಹೇಳುತ್ತವೆ. ಇವೆರಡೂ ವರ್ಣಗಳು ಒಂದಾಗಿ ಪರಸ್ಪರ ಅವಲಂಬನೆಯಿಂದ ದೇಶವನ್ನು ಆಳುತ್ತಾ ಬಂದಿದ್ದರೆಂಬುದು ಇದರಿಂದ ಶ್ರುತವಾಗುತ್ತದೆ. ಈ ವರ್ಣಗಳೇ ವರ್ಣ ವ್ಯವಸ್ಥೆಯನ್ನೂ ಅದಕ್ಕೆ ಆಧಾರವಾದ ತತ್ವಶಾಸ್ತ್ರದ ವಾದಗಳನ್ನೂ ಬೆಳೆಸಿವೆ. ಈ ಧಾರ್ಮಿಕ ಹಾಗೂ ತತ್ವಜ್ಞಾನದ ಆಧಾರವೇ ಎಲ್ಲಾ ಕೆಳ ವರ್ಣಗಳ ಜನರು ಈ ಮೇಲು ಕೀಳಿನ ವ್ಯವಸ್ಥೆಗೆ ಬಲಿಯಾದರೆಂಬುದು ಇತಿಹಾಸ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ



▌ನಿತ್ಯಾನಂದಸ್ವಾಮಿ

ಹೆಣ್ಣೆಂದು ಹೀಗಳೆಯುವುದು ಬೇಡ

ಮೂರು ಹೆಣ್ಣು ಮಕ್ಕಳ ನಂತರ ನಾಲ್ಕನೆಯದ್ದೂ ಹೆಣ್ಣೇ ಎಂಬುದನ್ನು ಖಚಿತ ಪಡಿಸಿಕೊಂಡು ಜುಗುಪ್ಸೆಗೊಂಡ 6 ತಿಂಗಳ ಗರ್ಭಿಣಿ ಗರ್ಭಪಾತ ಮಾಡಿಸಿಕೊಳ್ಳಲು ಮುಂದಾಗಿ ಮೃತಪಟ್ಟಿರುವ ಹೃದಯವಿದ್ರಾವಕ ಘಟನೆ ಬಾಗೇಪಲ್ಲಿ ತಾಲೂಕಿನ ವೆಂಕಟಾಪುರದಿಂದ ವರದಿಯಾಗಿದೆ. ಕೆಲವು ಕನ್ನಡ ದಿನಪತ್ರಿಕೆಗಳು ಪ್ರಕರಣದ ಕುರಿತ ವರದಿಯನ್ನು ಮುಖಪುಟದಲ್ಲಿ ಪ್ರಕಟಿಸಿ ಸಾರ್ವಜನಿಕರ ಗಮನ ಸೆಳೆದಿವೆ.

ದಾರುಣವಾಗಿ ಸಾವನ್ನಪ್ಪಿದ ಮಹಿಳೆ ರಾಧಮ್ಮ. ವಯಸ್ಸು 26 ಎನ್ನಲಾಗಿದೆ. ನಾಲ್ಕನೇ ಮಗು ಗಂಡು ಮಗು ಆಗಬೇಕು ಎಂದು ಸದಾ ಹಂಬಲಿಸುತ್ತಿದ್ದ ರಾಧಮ್ಮ ಇನ್ನು ಮೂರು ತಿಂಗಳ ನಂತರ ಹುಟ್ಟುವ ಮಗುವೂ ಹೆಣ್ಣೆಂದು ಅರಿತುಕೊಂಡು ಯಾರಿಗೂ ಯಾವುದೇ ಸುಳಿವು ನೀಡದೆ ಗರ್ಭಪಾತ ಮಾಡಿಸಿಕೊಳ್ಳಲು ಹೊರಟಿದ್ದಾರೆ. ನಿವೃತ್ತ ಆರೋಗ್ಯ ಸಹಾಯಕಿಯೊಬ್ಬಳು ಗರ್ಭಪಾತಕ್ಕೆ ಯತ್ನಿಸಿದ್ದಾರೆ. ಆದರೆ, ತೀವ್ರ ರಕ್ತಸ್ರಾವವಾಗುತ್ತಿದ್ದ ಕಾರಣ ಬಾಗೇಪಲ್ಲಿ ಆಸ್ಪತ್ರೆಗೆ ಕಳುಹಿಸಿದ್ದಾರೆ. ಅಲ್ಲಿ ಚಿಕಿತ್ಸೆ ನೀಡಲು ಅಗತ್ಯ ಸ್ತ್ರೀರೋಗ ತಜ್ಞರಿಲ್ಲದ ಕಾರಣ ಚಿಕ್ಕಬಳ್ಳಾಪುರ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿ ಕೊಡಲಾಗಿದೆ. ಆದರೆ ರಾಧಮ್ಮ ಮಾರ್ಗ ಮಧ್ಯದಲ್ಲೇ ಮೃತಪಟ್ಟಿದ್ದಾರೆ.

ಭ್ರೂಣ ಲಿಂಗ ಪತ್ತೆ ಮಾಡುವುದು ಮತ್ತು ಮಾಡಿಸಿಕೊಳ್ಳುವುದು ಎರಡೂ ಶಿಕ್ಷಾರ್ಹ ಅಪರಾಧ ಆಗಿದ್ದರೂ ನಮ್ಮ ಸಮಾಜದಲ್ಲಿ ಭ್ರೂಣ ಲಿಂಗ ಪತ್ತೆ ಹಾಗೂ ಸ್ತ್ರೀ ಭ್ರೂಣ ಹತ್ಯೆ ನಡೆಯುತ್ತಲೇ ಇವೆ. ಇಂತಹ ಸಮಾಜದ ಬಗ್ಗೆ ನಮಗೆ ಹೆಮ್ಮೆ ಪಟ್ಟುಕೊಳ್ಳಲು ಏನಾದರೂ ಉಳಿದಿದೆಯಾ?

ರಾಧಮ್ಮಳಂತಹ ಮಹಿಳೆಯರನ್ನು ದೂಷಿಸಿ ಪ್ರಯೋಜನವಿಲ್ಲ. ಅವಳಿಗೆಲ್ಲಿದೆ ಸ್ವಾತಂತ್ರ್ಯ? ತನಗೆ ಎಷ್ಟು ಮಕ್ಕಳಿರಬೇಕು ಎಂದು ನಿರ್ಧರಿಸುವ ಹಕ್ಕು ಅವಳಿಗಿದೆಯಾ? ಹೆಣ್ಣಿರಲಿ, ಗಂಡಿರಲಿ, ಒಂದು ಅಥವ ಎರಡು ಮಕ್ಕಳಾದ ನಂತರ ಸಂತಾನ ನಿಯಂತ್ರಣಕ್ಕೆ ಮುಂದಾಗುವ ಸಲಹೆ ನೀಡುವ ಸ್ವಾತಂತ್ರ್ಯ ನಮ್ಮ ಮನೆಗಳಲ್ಲಿ ನಮ್ಮ ಮಹಿಳೆಯರಿಗೆ ಇದೆಯಾ? ರಾಧಮ್ಮಳ ವಿಷಯಕ್ಕೇ ಬರುವುದಾದರೆ, ಅವಳಿಗೆ ನಾಲ್ಕನೇ ಮಗು ಬೇಕಿತ್ತಾ?

ಇನ್ನೂ ಪುರುಷ ಪ್ರಧಾನ ಮೌಲ್ಯಗಳನ್ನು ಹೊತ್ತು ಸಾಗುತ್ತಿರುವ ನಮ್ಮ ಈ ಸಮಾಜದಲ್ಲಿ ಮಹಿಳೆಯರು ಬಲಿಪಶುಗಳು. ರಾಧಮ್ಮ ಮನೆಯಲ್ಲಿ ಗಂಡು ಮಗುವಿಗಾಗಿ ಚಡಪಡಿಸುತ್ತಿದ್ದಾಗ ಅವಳು ಹತಾಶಳಾಗುವುದನ್ನು ತಡೆಯುವ ಶಕ್ತಿ ಅವಳ ಗಂಡನಲ್ಲಿ ಇತ್ತು. ಮಗು ಗಂಡಾಗಲಿ 'ಅಥವ ಹೆಣ್ಣೇ ಆಗಲಿ' ನಾವು ಅವರನ್ನು ಚೆನ್ನಾಗಿ ಸಾಕೋಣ. 5ನೇ ಮಗು ಅಂತೂ ನಮಗೆ ಬೇಡ. ಎಂದು ಧೈರ್ಯ ಹೇಳಬೇಕಾದದ್ದು ಗಂಡನ ಜವಾಬ್ದಾರಿಯಾಗಿತ್ತು. ಗಂಡ ಗಂಡು ಮಗುವನ್ನು ಬಯಸುತ್ತಿರುವುದರಿಂದಲೇ ಮಹಿಳೆ ಗಾಬರಿಯಾಗುತ್ತಾಳೆ. ಗಂಡು ಮಗುವಿಗಾಗಿ ಚಡಪಡಿಸುತ್ತಾಳೆ. ಅದೇನಾದರೂ ನಿರೀಕ್ಷೆಯಂತೆ ಆಗದಿದ್ದರೆ ಅವಳು ಆತ್ಮಹತ್ಯೆಗೆ ಶರಣಾಗಲೂ ಹಿಂಜರಿಯುವುದಿಲ್ಲ. ಹೆಣ್ಣು ಹಡೆದಿರುವುದನ್ನು ಸಹಿಸದ ಗಂಡ ಹೆಂಡತಿಯನ್ನು ಸಾಯಿಸಿದ ಕ್ರೂರ ಘಟನೆಗಳು ಸಹ ಆಗಾಗ ಸಂಭವಿಸುತ್ತಿರುತ್ತವೆ.

ಹೆಣ್ಣು ಇಂದು ಅನೇಕ ರೀತಿಯಿಂದ ಹಿಂಸೆಗೆ ಒಳಗಾಗುತ್ತಿದ್ದಾಳೆ. ಹೆಣ್ಣನ್ನು ನಾವು ನೋಡುವ ದೃಷ್ಟಿಯೇ ಅದಕ್ಕೆ ಕಾರಣವಾಗಿದೆ. ಹೆಣ್ಣು ಯಾವಾಗಲೂ ವಿಧೇಯಳಾಗಿರಬೇಕು ಎಲ್ಲವನ್ನು ಸಹಿಸಿಕೊಂಡಿರಬೇಕು. ಅದುವೇ ಅವಳ ಆದರ್ಶ ಎಂದು ತಲೆತುಂಬಲಾಗಿದೆ. ವರದಕ್ಷಿಣೆಯ ಪದ್ಧತಿಯೂ ಸಹ ಮಹಿಳೆ ಪುರುಷನಿಗೆ ಸಮಾನಳಲ್ಲ ಎಂಬುದನ್ನೇ ಪ್ರತಿಪಾದಿಸುತ್ತದೆ. ಹೆಣ್ಣು ಮಗುವನ್ನು ಬಯಸದಿರುವುದಕ್ಕೆ ಅಮಾನವೀಯ ವರದಕ್ಷಿಣೆ ಪದ್ಧತಿಯೂ ಒಂದು ಕಾರಣವಾಗಿದೆ.

ಇಂದು ಲಿಂಗಾನುಪಾತದಲ್ಲಿ ಆತಂಕಕಾರಿ ವೆತ್ಯಾಸಗಳಾಗುತ್ತಿದ್ದರೂ ತಿಳಿದವರೂ ಸಹ ಆ ಬಗ್ಗೆ ಜಾಗೃತಿಯನ್ನು ಮೂಡಿಸಲು ಮುಂದಾಗದಿರುವುದು. ಮನೆಯವರನ್ನೇ ಎಚ್ಚರಿಸದಿರುವುದು ದೊಡ್ಡ ದುರಂತವೇ ಆಗಿದೆ.

ರಾಧಮ್ಮಳ ದುರಂತ ಸಾವು ಎಲ್ಲರಿಗೂ ಪಾಠ ಆಗಬೇಕು. ಅವಧಿ ಮೀರಿದ ಕ್ರೂರ ಗರ್ಭಪಾತಕ್ಕೆ ಯಾರೂ ಸಹಕರಿಸಬಾರದು. ತಾಯಿ ಪ್ರೀತಿ ವಾತ್ಸಲ್ಯದಿಂದ ವಂಚಿತರಾದ ರಾಧಮ್ಮನ ಮಕ್ಕಳ ಪೋಷಣೆ, ಶಿಕ್ಷಣ ಮೊದಲಾದವುಗಳ ಹೊಣೆಯನ್ನು ರಾಜ್ಯ ಸರ್ಕಾರ ವಹಿಸಿಕೊಳ್ಳಲಿ ಎಂದು ಒತ್ತಾಯಿಸೋಣ. ■

ಅತ್ಯಾಚಾರ–ಲೈಂಗಿಕ ದೌರ್ಜನ್ಯ ವಿರೋಧಿಸಿ, ಮಹಿಳೆಯರ ರಕ್ಷಣೆಗೆ ಒತ್ತಾಯಿಸಿ ಪ್ರತಿಭಟನೆ

ಅತ್ಯಾಚಾರ, ಲೈಂಗಿಕ ದೌರ್ಜನ್ಯದಂತಹ ಅಮಾನವೀಯ ಪ್ರಕರಣಗಳಲ್ಲಿ ಜಾತಿ, ಧರ್ಮದ ಆಧಾರದಲ್ಲಿ ಕೀಳುಮಟ್ಟದ ರಾಜಕೀಯ ಮಾಡುತ್ತಿರುವವರ ವಿರುದ್ಧ ಮತ್ತು ಹೆಚ್ಚುತ್ತಿರುವ ಲೈಂಗಿಕ ದೌರ್ಜನ್ಯಗಳು ಮತ್ತು ಅತ್ಯಾಚಾರಗಳ ನಿಯಂತ್ರಣಕ್ಕೆ ಒತ್ತಾಯಿಸಿ ಎಸ್‌ಎಫ್‌ಐ, ಡಿವೈಎಫ್‌ಐ, ಜೆಎಂಎಸ್ ಸಂಘಟನೆಗಳು ಇದೇ ನವೆಂಬರ್ 11, 2014 ರಂದು ಬೆಂಗಳೂರಿನ ಕಾರ್ಪೋರೇಷನ್ ವೃತ್ತದಲ್ಲಿ ಬೃಹತ್ ಪ್ರತಿಭಟನೆ ನಡೆಸಿದವು.

ಈ ಸಂದರ್ಭದಲ್ಲಿ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷರಾಧ್ಯ ಗೌರಮ್ಮ ಮಾತನಾಡಿ ಹಿಂದೆ ರಾಜ್ಯದ ಸರ್ಕಾರದ ಚುಕ್ಕಾಣಿ ಹಿಡಿದಿದ್ದ ಬಿಜೆಪಿ ಪಕ್ಷದ ಅಧಿಕಾರಾವಧಿಯಲ್ಲಿ 47,800 ಲೈಂಗಿಕ ದೌರ್ಜನ್ಯಗಳು, 2,700 ಕ್ಕೂ ಹೆಚ್ಚು ಅತ್ಯಾಚಾರಗಳು ನಡೆದಿವೆ. ಧರ್ಮಸ್ಥಳದ ಸೌಜನ್ಯ ಆತ್ಯಾಚಾರ ಕೊಲೆಯ ಸಂದರ್ಭದಲ್ಲಿ, ಇವರ ಮಂತ್ರಿ ಮಂಡಲದ ಸಚಿವರ ಅನಾಚಾರಗಳ ಸಂದರ್ಭದಲ್ಲಿ ಕಣ್ಣುಚ್ಚಿ ಕುಳಿತ ಬಿಜೆಪಿಗೆ ಈಗ ಮಾತನಾಡುವ ನೈತಿಕತೆ ಇದೆಯೇ ಎಂದು ಅವರೇ ಪ್ರಶ್ನಿಸಿಕೊಳ್ಳಬೇಕು. ರಾಜ್ಯದ ತುಂಬೆಲ್ಲ ನಡೆಯುತ್ತಿರುವ ಅತ್ಯಾಚಾರಗಳ ವಿರುದ್ಧ ಸೊಲ್ಲೆತ್ತದೇ ಇರುವ ಬಿಜೆಪಿ ತೀರ್ಥಹಳ್ಳಿಯ ನಂದಿತಾ ಪ್ರಕರಣದ ಬಗ್ಗೆ ತೋರಿಸುತ್ತಿರುವ ವಿಶೇಷ ಕಾಳಜಿಯ ಹಿಂದಿನ ಕೀಳುಮಟ್ಟದ ರಾಜಕೀಯ ಅಸಹ್ಯ ಹುಟ್ಟಿಸುತ್ತಿದೆ ಎಂದರು.

ಪ್ರತಿಭಟನೆಯನ್ನುದ್ದೇಶಿಸಿ ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ ಮಾತನಾಡಿ ವಿಬ್ಗಯಾರ್‌ಶಾಲೆ, ಆರ್ಕಿಡ್ ಶಾಲೆ, ಕೇಂಬ್ರಿಡ್ಜ್ ಶಾಲೆಯಂತಹ ಖಾಸಗಿ ಶಾಲೆಗಳು ಹೆಣ್ಣುಮಕ್ಕಳ ಸುರಕ್ಷತೆಗೆ ಸಂಬಂಧಿಸಿದ ಮಾರ್ಗಸೂಚಿಯನ್ನು ಉಲ್ಲಂಘಿಸಿ ಉದ್ಧಟತನ ತೋರಿ ಸರ್ಕಾರಕ್ಕೇ ಸವಾಲೆಸೆದಿವೆ. ಇವುಗಳ ವಿರುದ್ಧ ಕ್ರಮಕೈಗೊಳ್ಳುವ ಸರ್ಕಾರದ ಹೇಳಿಕೆಯನ್ನು ಸ್ವಾಗತಿಸುತ್ತೇವೆ ಮತ್ತು ಅದು ಅಕ್ಷರಶಃ ಎಲ್ಲ ವಿದ್ಯಾಸಂಸ್ಥೆಗಳನ್ನೂ ಕಟ್ಟುನಿಟ್ಟಿನ ಕ್ರಮದಡಿ ತರುವ ತುರ್ತಿನ ಕೆಲಸವಾಗಬೇಕೆಂದು ಒತ್ತಾಯಿಸಿದರು. ರಾಮಚಂದ್ರಾಪುರ ಮಠದ ಗಾಯಕಿಯಾಗಿದ್ದೂ ತಮ್ಮ ಮೇಲೆ ನಡೆದ ಅತ್ಯಾಚಾರದ ವಿರುದ್ಧ ದೂರು ನೀಡಿರುವ ಪ್ರೇಮಲತಾ ಪ್ರಕರಣ, ಕೇಂದ್ರ ಸಚಿವ ಸದಾನಂದಗೌಡರ ಮಗನಿಂದ ಪ್ರೀತಿಯ ವಂಚನೆಗೊಳಗಾಗಿ ದೂರು ನೀಡಿರುವ ಮೈತ್ರಿ ಪ್ರಕರಣಗಳಲ್ಲಿ ಪೋಲೀಸರು ಪ್ರಭಾವಕ್ಕೆ ಮಣಿದಿರುವುದು ಕಂಡುಬಂದಿದೆ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ನಂದಿತಾ ಪ್ರಕರಣದಲ್ಲಿ ಮುಕ್ತ ಮತ್ತು ನಿಸ್ಪಕ್ಷಪಾತ ತನಿಖೆ ಆಗುವ ಮುನ್ನವೇ ರಾಜಕೀಯ ಕೆಸರೆರಚಾಟ ನಡೆಯುತ್ತಿದೆ. ಮಹಿಳೆಯರ ಸುರಕ್ಷತೆಯೆಂಬುದು ಎಲ್ಲ ರಾಜಕೀಯ ಪಕ್ಷಗಳ ರಾಜಕೀಯ ಕರ್ತವ್ಯವಾಗುವ ಬದಲು ರಾಜಕೀಯ ಲಾಭ ಪಡೆಯುವ ದಾಳವಾಗಿಸುತ್ತಿರುವುದು ರಾಜ್ಯದ ಮಹಿಳೆಯರಿಗೆ ಮಾಡುವ ಅಪಮಾನವಾಗಿದೆ ಎಂದರು.

ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಕೆ.ಎಸ್.ಲಕ್ಷ್ಮಿ ಮಾತನಾಡಿ ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ರಾಷ್ಟ್ರೀಯ ಪಕ್ಷವಾಗಿರುವ ಬಿಜೆಪಿಯು ಕೀಳು ಮಟ್ಟದ ರಾಜಕೀಯ ಕೈಬಿಟ್ಟು ದೌರ್ಜನ್ಯಗಳ ತಡೆಗಾಗಿ ರಚನಾತ್ಮಕ ಸಲಹೆಗಳನ್ನು ನೀಡಬೇಕೆಂದು ಒತ್ತಾಯಿಸುತ್ತೇವೆ. ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯಗಳು ರಾಷ್ಟ್ರೀಯ ಸಮಸ್ಯೆಯಾಗಿದ್ದು ಮಹಿಳೆಯರ ವಿರುದ್ಧದ ಹಿಂಸೆ ಮುಕ್ತ ಭಾರತಕ್ಕಾಗಿ ಕ್ರಮಗಳನ್ನು ಕೈಗೊಳ್ಳಿ ಎಂದು ಆಗ್ರಹಿಸುತ್ತೇವೆ ಎಂದರು.

ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ರಾಜಶೇಖರ ಮೂರ್ತಿ ಮಾತನಾಡಿ ರಾಜ್ಯ ಕಾಂಗ್ರೆಸ್ ಸರ್ಕಾರ ತಕ್ಷಣದ ಸುಧಾರಣಾ ಕ್ರಮಗಳೊಂದಿಗೆ, ಬಹುಮುಖೀ ಧೀರ್ಘಾವಧಿ ಕ್ರಮ ಕೈಗೊಳ್ಳಬೇಕು. ಪ್ರಭಾವ ಮುಕ್ತ ತನಿಖೆ, ನಿರ್ದಾಕ್ಷಿಣ್ಯ ಕ್ರಮಗಳ ಮೂಲಕ ಸುರಕ್ಷತೆಯನ್ನು ಖಾತ್ರಿಗೊಳಿಸಬೇಕು. ದೌರ್ಜನ್ಯಗಳ ತಡೆಗಾಗಿ ನಡೆಯುತ್ತಿರುವ ಸರ್ಕಾರದ ಎಲ್ಲ ಪ್ರಕ್ರಿಯೆಗಳನ್ನು ಪ್ರಜಾಸತ್ತಾತ್ಮಕಗೊಳಿಸಬೇಕು. ಸರ್ಕಾರದ ಎಲ್ಲ ನೀತಿಗಳನ್ನು ಲಿಂಗ ಸಂವೇದನಾಶೀಲಗೊಳಿಸಲು ಸಮರೋಪಾದಿಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇವೆ. ನ್ಯಾಯಮೂರ್ತಿ ವರ್ಮಾ ಕಮಿಟಿಯ ಶಿಫಾರಸ್ಸುಗಳನ್ನು ನಿರ್ಧಿಷ್ಟ ಕಾಲಮಿತಿಯ ಒಳಗೆ ಜಾರಿಗೊಳಿಸಲು ಒತ್ತಾಯಿಸಲಾಯಿತು. ಪ್ರತಿಭಟನೆಯಲ್ಲಿ ಎಸ್‌ಎಫ್‌ಐ ಮುಖಂಡರಾದ ಹರಿಪ್ರಸಾದ್, ಮಹೇಶ್, ಡಿವೈಎಫ್‌ಐನ ಪ್ರಸಾದ್, ಜೆಎಮ್‌ಎಸ್‌ನ ಕೆ.ಎಸ್. ವಿಮಲಾ, ಶಾರದಾ ಸೇರಿದಂತೆ ಸಾವಿರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು. ■



–ಈ ದೇಶದಲ್ಲಿ ದಲಿತರು ಹಲಗೆ ಬಡಿದರೂ ಬಡಿತ–ಬಡಿಯದಿದ್ದರೂ ಬಡಿತ–





ಇತ್ತೀಚೆಗೆ ಮೊಹರಂ ಹಬ್ಬದ ದಿನ ಹಾಗು ಮರುದಿನ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕಿನ ಕರೂರು ಹಾಗು ಕೂರಿಗನೂರು ಗ್ರಾಮಗಳಲ್ಲಿ ದಲಿತರ ಮೇಲೆ ಹಲ್ಲೆ, ಜಾತಿ ತಾರತಮ್ಯ ಹಾಗೂ ದೌರ್ಜನ್ಯ ನಡೆದಿದೆ. ಅಪಮಾನಿಸಲಾಗಿದೆ. ಹಲವರ ಮೇಲೆ ಹಲ್ಲೆ ಎಸಗಿ ಆಸ್ತಿಪಾಸ್ತಿಗೂ ಹಾನಿ ಮಾಡಲಾಗಿದೆ. 6 ನವೆಂಬರ್ 2014ರಂದು ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಬಳ್ಳಾರಿ ಜಿಲ್ಲಾ ಸಮಿತಿ ನಿಯೋಗ ಎರಡೂ ಗ್ರಾಮಗಳಿಗೆ ಭೇಟಿ ನೀಡಿ ಪರಿಶೀಲಿಸಿದೆ. ಅನ್ಯಾಯಕ್ಕೊಳಗಾದವರು ಪ್ರತಿಭಟನೆಗೆ ಮುಂದಾಗಿದ್ದಾರೆ. ಸಿಪಿಐ(ಎಂ) ನೇತೃತ್ವದ ದಲಿತ ಹಕ್ಕುಗಳ ಹೋರಾಟ ಸಮಿತಿ ನೊಂದವರಿಗೆ ದನಿ ನೀಡಿದೆ. ಈ ಕುರಿತು ಒಂದು ವರದಿ.

ಸಿರುಗುಪ್ಪ: ಕರೂರು ಮತ್ತು ಕೂರಿಗನೂರು ದಲಿತರ ಮೇಲಿನ ದೌರ್ಜನ್ಯ

ಹುಳ್ಳಿ ಉಮೇಶ್

ಜಾತಿ ತಾರತಮ್ಯ ಹಾಗೂ ಜಾತಿ ದೌರ್ಜನ್ಯ

ಉತ್ತರ ಕರ್ನಾಟಕದ ಊರುಗಳಲ್ಲಿ 'ಮೊಹರಂ' ಹಬ್ಬ ನಡೆಯುವಾಗ ಜಾತಿ ಬೇಧವಿಲ್ಲದೇ ನಾನಾ ಸಮುದಾಯಗಳು ಸಂಭ್ರಮ ಸಂತೋಷಗಳಿಂದ ಪಾಲ್ಗೊಂಡು ಬೆರೆಯುವ ಒಂದು ಸೌಹಾರ್ದ ಪರಂಪರೆಯೇ ಬೆಳೆದು ಬಂದಿದೆ. ಈ ಆಚರಣೆಯಲ್ಲಿ ತಳಸಮುದಾಯಗಳ ಜನರು, ದಲಿತರು ಪಾಲ್ಗೊಳ್ಳುವುದು ಸಹ ಒಂದು ಸಹಜ ಮೊಹರಂ ಹಬ್ಬದ ಆಚರಣೆಯ ಸಹಜ ಭಾಗವೇ ಆಗಿದೆ.

ಆದರೆ ನವೆಂಬರ್ 04, 2014ರಂದು ಸಿರುಗುಪ್ಪ ತಾಲೂಕಿನ ಕರೂರು ಗ್ರಾಮದಲ್ಲಿ ಮೊಹರಮ್ ಹಬ್ಬದ ದಿನದಂದು ದೇವರ ಮುಂದೆ ದಲಿತರು ಹಲಗೆ ಬಡಿಯಬಾರದೆಂದು ಮೇಲ್ಜಾತಿಯ ಜನ ದಲಿತರನ್ನು ನಿರ್ಬಂಧಿಸಿದ್ದಾರೆ. ಪ್ರತಿ ವರ್ಷದಂತೆ ಈ ವರ್ಷವೂ ಮೊಹರಂ ಹಬ್ಬದಲ್ಲಿ ಹಲಗೆ ಬಡಿಯಲು ಮುಂದಾಗಿದ್ದ ದಲಿತ ವ್ಯಕ್ತಿಯೊಬ್ಬರಿಗೆ ದಲಿತೇತರರೊಬ್ಬರು ಅಡ್ಡಿಪಡಿಸಿದ ಹಿನ್ನೆಲೆಯಲ್ಲಿ ಘರ್ಷಣೆಯಾಗಿದೆ. ಘರ್ಷಣೆಯಲ್ಲಿ 30 ರಿಂದ 50 ಜನರ ಗುಂಪು ದಲಿತೇತರರಾದ ಕಣೇಕಲ್ಲಪ್ಪ, ಐದುಗುಡೆಪ್ಪ, ಈಶ್ವರ, ದ್ಯಾವಣ್ಣ, ಗಾದಿಲಿಂಗಪ್ಪ ಇವರ ಮುಖಂಡತ್ವದಲ್ಲಿ ದಲಿತರ ಮನೆಗಳಿಗೆ ನುಗ್ಗಿ ದಲಿತರ ಮೇಲೆ ದೈಹಿಕ ಹಲ್ಲೆ ನಡೆಸಿ, ಮನೆಗಳಲ್ಲಿನ ಫ್ಯಾನ್, ಟಿ.ವಿ, ಕಿಟಕಿ, ಬಾಗಿಲುಗಳನ್ನು ದೊಣ್ಣೆಗಳಿಂದ ಒಡೆದು ಮುರಿದಿದ್ದಾರೆ. ಕಲ್ಲು ತೂರಿರುವುದು ಹಾಗೂ ಮನೆಯ ಮೇಲ್ಹಾವಣಿಯಾದ ಸಿಮೆಂಟ್ (ಎಸ್ಬೆಸ್ಟೋ)ಶೀಟ್‌ಗಳನ್ನು ಒಡೆಯುವುದು ಮಾಡಿದ್ದಾರೆ. ಮನೆಯ ಮುಂದಿದ್ದ ದ್ವಿಚಕ್ರ ವಾಹನಗಳಿಗೆ ಹಾನಿ ಮಾಡಿದ್ದಾರೆ. ಅಲ್ಲದೇ ದಲಿತ ಮುಖಂಡರಾದ ಶೇಖಪ್ಪ ಮತ್ತು ದಲಿತ ಮಹಿಳೆಯರ ಮೇಲೆ ಹಲ್ಲೆ ನಡೆಸಲಾಗಿದೆ. ಕರೂರು ಗ್ರಾಮದ ಕೆಲ ದಲಿತ ಕುಟುಂಬಗಳು ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿವೆ. ಅಲ್ಲಿನ ದಲಿತೇತರ ಜಾತಿಗಳ ಭೂಮಾಲಕ ಶಕ್ತಿಗಳು ಹಾಗೂ ಶ್ರೀಮಂತರಿಗೆ ಇದು ಸಹಿಸಿಕೊಳ್ಳಲಾಗದ ಸಂಕಟವನ್ನು ತಂದಿದೆ. ಇದೇ ಹಿನ್ನೆಲೆಯಲ್ಲಿ ಈ ಧಾಳಿಯನ್ನು ನಡೆಸಲಾಗಿದೆ ಎಂಬುವುದು ಈ ಪ್ರಕರಣದ–ಸುಲಭವಾಗಿ ಕಾಣದ ಮತ್ತೊಂದು ಮುಖ.

ಕೂರಿಗನೂರು ಗ್ರಾಮದಲ್ಲಿ ಮೊಹರಂ ಹಬ್ಬದಂದು ಶೇಖರಾಜ್, ಉಪ್ಪಾರ ಹುಸೇನಿ, ಗೋಪಾಲ, ಮಂಜ, ನಾಗಪ್ಪ ಇವರು ಹಮಾಲಿ ಸಂಘದ ಮುಖಂಡರಾದ ಚಲುವಾದಿ ಚಿದಾನಂದ ಎಂಬುವವರ ಮೇಲೆ ಹಲ್ಲೆ ಮಾಡಿದ್ದಾರೆ. ಚಿದಾನಂದನನ್ನು ಬಿಡಿಸಲು ಬಂದ ಅವರ ತಂದೆಯನ್ನು ಸಹ ಹೊಡೆದು ಕಲ್ಲು ಎತ್ತಿ ಹಾಕಿ ಕಾಲು ಮುರಿದಿದ್ದಾರೆ. ಚಿದಾನಂದ ಎಂಬುವವರ ತಂದೆ ಸಿದ್ದಲಿಂಗಪ್ಪ ಬಳ್ಳಾರಿಯ ವಿಮ್ಸ್ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅಲ್ಲದೇ ದಲಿತ ಕುಟುಂಬದ ಮನೆಗೆ ಬೆಂಕಿ ಹಚ್ಚಲಾಗಿದೆ.

ಘಟನೆಯ ಹಿನ್ನೆಲೆ

ಗಣೇಶ ಹಬ್ಬದ ಸಂದರ್ಭದಲ್ಲಿ ಕೂರಿಗನೂರು ಗ್ರಾಮದ ಹಮಾಲರ ಸಂಘದ ಗುಂಪೊಂದು(ದಲಿತರು) ಮುಂಗಡ ಹಣ ಪಡೆದು ಪಕ್ಕದ ಊರಿನಲ್ಲಿ ಡ್ರಮ್‌ಸೆಟ್ ಬಾರಿಸಲು ಹೋಗಿದ್ದಾರೆ. ಕೂರಿಗನೂರು ಗ್ರಾಮದ ಹೊಸಳ್ಳಿ ಉಪ್ಪಾರ ಹುಸೇನಿ ಎಂಬಾತನು ಕೂರಿಗನೂರು ಗ್ರಾಮದಲ್ಲಿ ಮುಂದಿನ ದಿನಗಳಲ್ಲಿ 'ನೀವು ಹೇಗೆ ಡ್ರಮ್‌ಸೆಟ್ ಬಾರಿಸುತ್ತೀರಿ ನೋಡುತ್ತೇವೆ' ಎಂದು ಬೆದರಿಕೆ ಹಾಕಿದ್ದಾನೆ. ಅಲ್ಲದೇ ಮುಂದಿನ ದಿನಗಳಲ್ಲಿ ಡ್ರಮ್‌ಸೆಟ್ ಏನಾದರೂ ಬಾರಿಸಿದರೆ ಅಂಥವರ ಮನೆ ಮಹಿಳೆಯರ ಮೇಲೆ ರೇಪ್ ಮಾಡುವುದಾಗಿ ಹೇಳಿದ್ದಾನೆ ಹಾಗೂ ದಲಿತರ ಕುರಿತು ಅಶ್ಲೀಲವಾಗಿ ಮಾತನಾಡಿದ್ದಾನೆ. ಇದರಿಂದ ನೊಂದ ದಲಿತ ಕುಟುಂಬದವರು ಉಪ್ಪಾರ ಸಮುದಾಯದ ಮುಖಂಡನಿಗೆ ದೂರು ಸಲ್ಲಿಸಿದ್ದಾರೆ. ಆದರೆ ಅದ–ರಿಂದ ಯಾವುದೇ ಪ್ರಯೋಜನವಾಗಿಲ್ಲ. ಕೊನೆಗೆ ದಲಿತ ಕುಟುಂಬದವರು ಸಿರಿಗೇರಿ ಪೋಲೀಸ್ ಠಾಣೆಗೆ ಸಾಕ್ಷಿ ಸಮೇತ ದೂರು ನೀಡಿದ್ದಾರೆ.

ಪೋಲೀಸ್ ವೈಫಲ್ಯ

ಮೊಹರಂ ಹಬ್ಬದ ದಿನ ತಮ್ಮ ಮೇಲೆ ಹಲ್ಲೆ ನಡೆಯಬಹುದೆಂದು ಕರೂರಿನ ದಲಿತರು ಸಿರಿಗೇರಿ ಪೋಲೀಸ್ ಠಾಣೆಗೆ ದೂರು ಸಲ್ಲಿಸಿ ರಕ್ಷಣೆ ನೀಡಲು ಕೋರಿದ್ದಾರೆ. ಹಿಂದಿನ ವರ್ಷ ಇದೇ ಹಬ್ಬದಂದು ಸಣ್ಣಮಟ್ಟ ಮಾತಿನ ಚಕಮಕಿ ನಡೆದಿರುವ ಕುರಿತು ಉಲ್ಲೇಖಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪೋಲೀಸರು ಕರೂರು ಗ್ರಾಮ ಪಂಚಾಯ್ತಿಯಲ್ಲಿ ಶಾಂತಿ ಸಭೆ ನಡೆಸಿದ್ದಾರೆ. ಶಾಂತಿ ಸಭೆಯಲ್ಲಿ ಗಲಾಟೆಗಳಾಗಿ ಗೊಂದಲ ಮೂಡಿದೆ. ಹಬ್ಬದ ದಿನದಂದು ಗಲಾಟೆಗಳು ನಡೆಯಬಹುದೆಂಬ ಸೂಕ್ಷ್ಮತೆಗಳನ್ನು ಗಮನಿಸದೇ ಶಾಂತಿ ಸಭೆ ಮುಗಿಸಿರುವುದು ಪೋಲೀಸ್ ವೈಫಲ್ಯವನ್ನು ಎತ್ತಿ ತೋರಿಸುತ್ತದೆ. ಎರಡೂ ಗ್ರಾಮಗಳಲ್ಲಿ ದಲಿತರ ಮೇಲೆ ದೌರ್ಜನ್ಯ ನಡೆಸಿದವರ ವಿರುದ್ಧ ಎಫ್.ಐ.ಆರ್. ದಾಖಲಾಗಿದ್ದರೂ ಇನ್ನುವರೆಗೆ ಆರೋಪಿಗಳನ್ನು ಬಂಧಿಸುವಲ್ಲಿ ಪೋಲೀಸರು ಹಿಂದೇಟು ಹಾಕುತ್ತಿದ್ದಾರೆ.



ಸಿಪಿಐ(ಎಂ) ಪ್ರತಿಭಟನೆ

ಎಸ್.ಪಿ. ಭೇಟಿ ಹಾಗೂ ಪಾದಯಾತ್ರೆ

ಪೋಲೀಸ್ ವೈಫಲ್ಯವನ್ನು ಖಂಡಿಸಿ, ಆರೋಪಿಗಳನ್ನು ಬಂಧಿಸಲು ಸಿಪಿಐ(ಎಂ) ಬಳ್ಳಾರಿ ಜಿಲ್ಲಾ ಸಮಿತಿ ಬಳ್ಳಾರಿಯ ಪೋಲೀಸ್ ವರಿಷ್ಠಾಧಿಕಾರಿಯವರನ್ನು ಭೇಟಿ ಮಾಡಿ ಒತ್ತಾಯಿಸಲಾಗಿದೆ.

ಎರಡೂ ಗ್ರಾಮಗಳಲ್ಲಿ ಜಾತಿ ತಾರತಮ್ಯ ಮತ್ತು ಜಾತಿ ದೌರ್ಜನ್ಯ ನಡೆಸಿದವರನ್ನು ತಕ್ಷಣ ಬಂಧಿಸಬೇಕು. ದೌರ್ಜನ್ಯಕ್ಕೊಳಗಾದ ದಲಿತ ಕುಟುಂಬಗಳ ಆಸ್ತಿ ನಷ್ಟ ಉಂಟಾಗಿದ್ದು ಅವರಿಗೆ ಸೂಕ್ತ ಪರಿಹಾರ ನೀಡಬೇಕು. ದಲಿತ ಕುಟುಂಬಗಳಿಗೆ ಸೂಕ್ತ ರಕ್ಷಣೆ ನೀಡಬೇಕು. ಪೋಲೀಸ್ ವೈಫಲ್ಯದಿಂದ ಘಟನೆ ಸಂಭವಿಸಿದ್ದು ನವೆಂಬರ್ 04, 2014ರಂದು ಎಫ್.ಐ.ಆರ್. ದಾಖಲಾದರೂ ಇನ್ನುವರೆಗೂ ಆರೋಪಿಗಳನ್ನು ಬಂಧಿಸಲು ಮುಂದಾಗದಿರುವ ಸಿರಿಗೇರಿ ಪೋಲೀಸರ ವಿರುದ್ಧ ಸೂಕ್ತಕ್ರಮ ಕೈಗೊಳ್ಳಬೇಕು. ಎರಡೂ ಗ್ರಾಮಗಳಲ್ಲಿ ಶಾಂತಿ ಸೌಹಾರ್ದತೆ ನೆಲೆಸಲು ಪೋಲೀಸ್ ಇಲಾಖೆ ಹಾಗೂ ತಾಲೂಕು ಆಡಳಿತ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕೆಂದು ಆಗ್ರಹಿಸಿ 12 ನವೆಂಬರ್ 2014ರಂದು ಪಾದಯಾತ್ರೆ ನಡೆಸಲಾಯಿತು. ಎರಡೂ ಗ್ರಾಮಗಳ ಪಟ್ಟಭದ್ರರು ಹಾಗೂ ಭೂಮಾಲಕ ಶಕ್ತಿಗಳ ಬೆದರಿಕೆ ಹಾಗೂ ಅಡ್ಡಿಯನ್ನು ಲೆಕ್ಕಿಸದೇ ದಲಿತರು, ದಲಿತ ಮಹಿಳೆಯರು ಸಿಪಿಐ(ಎಂ) ಹಾಗೂ ದಲಿತ ಹಕ್ಕುಗಳ ಹೋರಾಟ ಸಮಿತಿ ನೇತೃತ್ವದಲ್ಲಿ ನಡೆದ ಪಾದಯಾತ್ರೆಯಲ್ಲಿ ಭಾಗವಹಿಸಿದ್ದರು. ಕೂರಿಗನೂರು, ಕರೂರು, ಗೋಸಬಾಳ, ಬೂದಗುಪ್ಪ, ಮಾರೆಮ್ಮನ ಕ್ಯಾಂಪ್, ಮೈಲಾಪುರ, ಬಲಕುಂದಿ, ಉಪ್ಪಾರ ಹೊಸಳ್ಳಿ, ತೆಕ್ಕಲ ಕೋಟೆ, ಹಳೇಕೋಟೆ ಮಾರ್ಗವಾಗಿ ಪಾದಯಾತ್ರೆ ಸಿರುಗುಪ್ಪ ಸೇರಿತು. ಸಿರುಗುಪ್ಪ ತಾಲೂಕು ದಂಡಾಧಿಕಾರಿಗಳಿಗೆ ಮನವಿ ಸಲ್ಲಿಸಿ ಒತ್ತಾಯಿಸಲಾಯಿತು. ತಹಶೀಲ್ದಾರರ ಕಛೇರಿ ಮುಂದೆ ನಡೆದ ಪ್ರತಿಭಟನೆಯಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಂ. ಜಂಬಯ್ಯನಾಯಕ್, ಜೆ.ಸತ್ಯಬಾಬು, ಹೆಚ್.ತಿಪ್ಪಯ್ಯ ಜಿಲ್ಲಾ ಮುಖಂಡರಾದ, ಬಿ.ಅಡಿವೆಪ್ಪ, ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ರಾಜ್ಯಾಧ್ಯಕ್ಷರಾದ ಬಿ.ಮಾಳಮ್ಮ, ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಹುಳ್ಳಿಉಮೇಶ್ ಮಾತನಾಡಿದರು. ಪಕ್ಷದ ತಾಲೂಕು ಮುಖಂಡರಾದ ಹೆಚ್.ಬಿ.ಓಬಳೇಶಪ್ಪ, ಬಿ.ಸುರೇಶ್, ಬಿ.ಎಲ್.ಈರಣ್ಣ, ಅಂಜಿನಿ ಮುಂತಾದವರು ಭಾಗವಹಿಸಿದ್ದರು. ಪಾದಯಾತ್ರೆಯಲ್ಲಿ ಭಾಗವಹಿಸಿದ್ದವರಿಗೆ ಬಲಕುಂದಿಯಲ್ಲಿ ಬಲಕುಂದೆಪ್ಪರವರು ಮನೆಯಲ್ಲಿ ಜಾತಿ ಬೇಧವಿಲ್ಲದೇ ಊಟದ ವ್ಯವಸ್ಥೆ ಮಾಡಿದ್ದು ಸ್ಮರಣೀಯ.

ಹಲಗೆ ಬಡಿದರೂ ಬಡಿತ ಬಡಿಯದಿದ್ದರೂ ಬಡಿತ

ಭಾರತದ ಜಾತಿವಾದಿ ಜನಗಳ ಮನಸ್ಥಿತಿ ಹೇಗಿದೆ. ದಲಿತರನ್ನು ಜಾತಿವಾದಿ ಶಕ್ತಿಗಳು ನೋಡುವ ಮತ್ತು ನಡೆಸಿಕೊಳ್ಳುವ ಪರಿ ಹೇಗಿದೆ ಎಂಬುದಕ್ಕೆ ಇಲ್ಲಿ ಒಂದು ಕುತೂಹಲಕರವಾದ ವಿಷಯವಿದೆ. ಸಾಮಾನ್ಯವಾಗಿ ದಲಿತರು ಪಾರಂಪರಿಕವಾಗಿ ಮಾಡಿಕೊಂಡು ಬಂದ ಬಿಟ್ಟಿ ಚಾಕರಿಯನ್ನು ಮಾಡಬೇಕು. ಉತ್ಸವ, ಜಾತ್ರೆ, ಹಬ್ಬಗಳಂತಹ ಸಂದರ್ಭಗಳಲ್ಲಿ ಹಲಗೆ ಬಾರಿಸಬೇಕು ಎಂದು ನಿರೀಕ್ಷಿಸಲಾಗುತ್ತದೆ.

ಶಿಕ್ಷಿತರಾದ ದಲಿತರು ಜಾಗೃತಿಯ ಕಾರಣದಿಂದ, ಉದ್ಯೋಗಸ್ಥರಾದ ದಲಿತರು ಸ್ವಾವಲಂಬಿಗಳಾದ ಕಾರಣದಿಂದ, ಅಥವಾ ಇವೆರಡೂ ಇಲ್ಲದೆಯೂ ಕೂಡ ಸ್ವಾಭಿಮಾನ–ಅರಿವಿನ ಕಾರಣದಿಂದ ಹಲಗೆ ಬಡಿಯುವುದು ಇತ್ಯಾದಿ ಪಾರಂಪರಿಕ ಕೆಲಸಗಳನ್ನು ಮಾಡದಿದ್ದಲ್ಲಿ ಆಗ ಅದನ್ನು ಜಾತಿವಾದಿ ಶಕ್ತಿಗಳು ತಮ್ಮ ಮೇಲ್ಜಾತಿಯ 'ಅಹಂ' ಬಿದ್ದ ಪೆಟ್ಟು ಎಂದು ಭಾವಿಸುತ್ತವೆ. ಅಂತಹ ಸಂದರ್ಭದಲ್ಲಿ ತಾವು ಹೇಳಿದಂತೆ ಕೇಳದ ದಲಿತರನ್ನೇ ಬಡಿಯಲಾಗುತ್ತದೆ.

ಇಲ್ಲಿನ ಪ್ರಕರಣ ಕೊಂಚ ಭಿನ್ನವಾಗಿದೆ. ಸ್ವಲ್ಪ ಸ್ಥಿತಿವಂತರಾಗಿ ಸ್ವಾವಲಂಬಿಗಳಾದ ದಲಿತರನ್ನು ನೀವು ಹಲಗೆ ಬಾರಿಸುವುದು ಬೇಡ ಎಂದು ಹೇಳುವ ಮೂಲಕ ಮೊಹರಂ ಹಬ್ಬದ ಆಚರಣೆಯಿಂದ ಹೊರಗಿಡಲು ಪ್ರಯತ್ನಿಸಲಾಗಿದೆ. ಅದು ಸಾಧ್ಯವಾಗದಾಗ ದಲಿತರ ಮೇಲೆ ಹಲ್ಲೆಗಳಾಗಿವೆ. ಅಂತೂ ದಲಿತರು 'ಹೇಳಿದಂತೆ ಕೇಳುತಾರೆ' ಎಂಬಂತೆ ಹೇಳಿದ್ದು ಕೇಳಿಕೊಂಡು 'ಬಿದ್ದಿರಬೇಕು'. ಇಲ್ಲವಾದರೆ ಬಡಿತ. !!!

ಜನಶಕ್ತಿ
ಕನ್ನಡ ವಾರಪತ್ರಿಕೆ

ಉದ್ದೇಶಿತ ಕಾರ್ಮಿಕ ಕಾಯ್ದೆ ತಿದ್ದುಪಡಿ

'ಕಾರ್ಮಿಕರನ್ನು ಜೀತದಾಳುಗಳನ್ನಾಗಿ ಮಾಡುವ ಯತ್ನ ಸಂವಿಧಾನದ ಮೇಲೆ ಪ್ರಹಾರ'

ಇಡೀ ದೇಶವೇ ಗುತ್ತಿಗೆಯ ಆಧಾರದಲ್ಲಿ ನಡೆಯುವ ದುಃಸ್ಥಿತಿ ಬಂದೊದಗಲಿದೆ

ಬೆಂಗಳೂರಿನ ವಿಚಾರ ಸಂಕಿರಣದಲ್ಲಿ ಎಚ್ಚರಿಕೆ

'ಕಾರ್ಮಿಕ ಕಾಯ್ದೆಗಳಿಗೆ ತಿದ್ದುಪಡಿ ತರುವ ಕೇಂದ್ರ ಸರ್ಕಾರದ ಪ್ರಸ್ತಾವ ಸಂವಿಧಾನದ ಮೇಲೆ ನಡೆಸಲು ಉದ್ದೇಶಿಸಿರುವ ಗದಾಪ್ರಹಾರ' ಎಂದು ವಿವಿಧ ಕಾರ್ಮಿಕ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿದವು. ಸಂಸತ್ತಿನಲ್ಲಿ ಮಂಡಿಸಲಾಗಿರುವ ವಿಧೇಯಕದಲ್ಲಿ ಕಾರ್ಮಿಕರನ್ನು ಮತ್ತೆ ಜೀತದಾಳುಗಳನ್ನಾಗಿ ಮಾಡುವ ಯತ್ನ ನಡೆಸಿರುವುದು ಅಮಾನವೀಯ. ಕಾರ್ಮಿಕರ ಭವಿಷ್ಯ ಕತ್ತಲು ಮಾಡ ಹೊರಟರೆ ಸರಕಾರದ ಭವಿಷ್ಯವನ್ನೇ ಕತ್ತಲಾಗುತ್ತದೆ ಎಂದು ಕಾರ್ಮಿಕರ ಮುಂಖಂಡರುಗಳು ಎಚ್ಚರಿಕೆ ನೀಡಿದರು.



ಕಾರ್ಮಿಕ ಕಾನೂನುಗಳಿಗೆ ಸಂಬಂಧಿಸಿದ ವಿಧೇಯಕದ ಕುರಿತು ಸಿಪಿಐ(ಎಂ) ನವೆಂಬರ್ 9, 2014 ರಂದು ಭಾನುವಾರ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡಿದ್ದ ನಾನಾ ಕಾರ್ಮಿಕ ಸಂಘಟನೆಗಳ ಮುಖಂಡರು, ದುಡಿಯುವ ವರ್ಗವನ್ನು ವ್ಯವಸ್ಥಿತವಾಗಿ ಆಹುತಿ ತೆಗೆದುಕೊಳ್ಳುವ ಕಾರ್ಮಿಕ ವಿರೋಧಿ ಧೋರಣೆ ಖಂಡಿಸಿ ಡಿಸೆಂಬರ್ 5ರಂದು ರಾಷ್ಟ್ರ ಮಟ್ಟದ ಪ್ರತಿಭಟನೆ ನಡೆಸಲಾಗುವುದು ಎಂದು ಹೋರಾಟದ ಐಕ್ಯ ಕಾರ್ಯಾಚರಣೆಯ ತಮ್ಮ ಮುಂದಿನ ಚಳುವಳಿಯ ಕಾರ್ಯಕ್ರಮವನ್ನು ಘೋಷಿಸಿದರು.

ಬೆಂಗಳೂರಿನಲ್ಲಿ ಜನವರಿ 8 ರಿಂದ 11 ರವರೆಗೆ ನಡೆಯಲಿರುವ ಸಿಪಿಐ(ಎಂ) ರಾಜ್ಯ ಸಮ್ಮೇಳನದ ಅಂಗವಾಗಿ ನಡೆದ ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡಿದ್ದ ಕೇಂದ್ರ ಕಾರ್ಮಿಕ ಸಂಘಟನೆಗಳ ನೇತಾರರು, ಕಾನೂನು ತಜ್ಞರು, ಹಿರಿಯ ವಕೀಲರು ಹಾಗೂ ಚಿಂತಕರುಗಳು ಕೇಂದ್ರ ಸರಕಾರವು ಲೋಕಸಭೆಯಲ್ಲಿ ಮಂಡಿಸಿರುವ ಕಾರ್ಮಿಕ ಕಾನೂನುಗಳ ತಿದ್ದುಪಡಿ ವಿಧೇಯಕ ಜಾರಿ ಬಗೆಗೆ ಸಂಘಟನೆಗಳು ಭಾರಿ ವಿರೋಧ ವ್ಯಕ್ತಪಡಿಸಿದ್ದು, ಉದ್ಯಮಿಗಳ ಪರ ವಿಧೇಯಕದ ಬದಲು ಕಾರ್ಮಿಕ ಸ್ನೇಹಿ ಕಾಯ್ದೆಯನ್ನು ಅಂಗೀಕರಿಸಲಿ ಎಂದು ಆಗ್ರಹಿಸಿದರು.



'ಕಾಯ್ದೆ ತಿದ್ದುಪಡಿಗಳಿಂದ ಕಾರ್ಮಿಕರ ಬದುಕುವ ಹಕ್ಕು-ಸಮಾನತೆಯ ಹಕ್ಕಿಗೆ ಧಕ್ಕೆ' – ಪ್ರೊ.ಜೆ.ಎಸ್.ಪಾಟೀಲ್

ಕಾನೂನು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಜೆ.ಎಸ್.ಪಾಟೀಲ್ ವಿಚಾರ ಸಂಕಿರಣದಲ್ಲಿ ಮಾತನಾಡಿ, 'ಉದ್ದೇಶಿತ ಕಾರ್ಮಿಕ ಕಾಯ್ದೆ ತಿದ್ದುಪಡಿಗಳು ನ್ಯಾಯಶಾಸ್ತ್ರಕ್ಕೆ ನ್ಯಾಯತತ್ವಗಳಿಗೆ ವಿರುದ್ಧವಾಗಿವೆ. ಒಂದು ವೇಳೆ ಈ ತಿದ್ದುಪಡಿ ಕಾನೂನುಗಳು ಅನುಷ್ಠಾನಕ್ಕೆ ಬಂದರೆ ದೇಶದ ಕೋಟ್ಯಂತರ ಕಾರ್ಮಿಕರ ಬದುಕುವ ಹಕ್ಕು ಮತ್ತು ಸಮಾನತೆಯ ಹಕ್ಕು ಕಣ್ಮರೆಯಾಗಲಿವೆ.' ಎಂದು ಆತಂಕ ವ್ಯಕ್ತಪಡಿಸಿದರು.

'ಸರ್ಕಾರದ ಈ ನಿರ್ಧಾರದಿಂದ ಸಣ್ಣ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಸರಿಸುಮಾರು ಮೂರೂ ಮುಕ್ಕಾಲು ಕೋಟಿ ಕಾರ್ಮಿಕರ ಬದುಕು ಮೂರಾಬಟ್ಟೆಯಾಗಲಿದೆ. ದೇಶದಲ್ಲೂ ಇಂದಿಗೂ ನ್ಯಾಯಾಂಗವೇ ಆಶಾಕಿರಣವಾಗಿದ್ದು ತಿದ್ದುಪಡಿ ಕ್ರಮವನ್ನು ವಿರೋಧಿಸಲು ಕೋರ್ಟ್ ಮೆಟ್ಟಿಲೇರುವುದೇ ಸರಿಯಾದ ಮಾರ್ಗ' ಎಂದು ತಮ್ಮ ಅಭಿಪ್ರಾಯವನ್ನು ಮುಂದಿಟ್ಟರು.

'ಕಾರ್ಮಿಕರ ಮೇಲಿನ ದಬ್ಬಾಳಿಕೆಯಲ್ಲದೆ ಬೇರೇನೂ ಅಲ್ಲ.'– ಕೆ. ಸುಬ್ಬರಾವ್

ಹಿರಿಯ ವಕೀಲರು, ರಾಜ್ಯ ಕಾರ್ಮಿಕ ಪ್ರತಿನಿಧಿಗಳ ವೇದಿಕೆ ಅಧ್ಯಕ್ಷರೂ ಆದ ಕೆ.ಸುಬ್ಬರಾವ್ ಮಾತನಾಡಿ, 'ಕಾರ್ಮಿಕರ ಕಾಯ್ದೆಗಳಲ್ಲಿನ ಉದ್ದೇಶಿತ ತಿದ್ದುಪಡಿಯು ಕಾರ್ಮಿಕರ ಮೇಲಿನ ದಬ್ಬಾಳಿಕೆಯಲ್ಲದೆ ಬೇರೇನೂ ಅಲ್ಲ. ಈ ಗಂಡಾಂತರವನ್ನು ಕಂಡು ಕಾರ್ಮಿಕರ ರಕ್ತ ಕುದಿಯದೇ ಹೋದರೆ ನ್ಯಾಯಾಲಯಗಳು ನಮ್ಮ ಪರವಾಗಿ ನಿಲ್ಲುವುದಿಲ್ಲ.' ಎಂದರು. 'ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಕಾರ್ಮಿಕ ನೀತಿಗಳಲ್ಲಿ ಮತ್ತು ಆರ್ಥಿಕ ನೀತಿಗಳಲ್ಲಿ ಬದಲಾವಣೆ ತರುವುದು ಬೇಡ ಎಂದು ನಾವು ಹೇಳುತ್ತಿಲ್ಲ. ಆದರೆ, ಈ ಬದಲಾವಣೆಗಳು ನಮ್ಮ ಕಾರ್ಮಿಕರ ಜೀವನ ಮಟ್ಟ ಸುಧಾರಿಸುವಂತಾಗಬೇಕು ಎಂಬುದೇ ನಮ್ಮೆಲ್ಲರ ಆಶಯ. ಈ ಕುರಿತು ನ್ಯಾಯಾಲಯದ ಮೆಟ್ಟಿಲೇರಿ ಹೋರಾಟ ಮಾಡುವುದರ ಜೊತೆ-ಜೊತೆಗೇ ಪರಿಣಾಮಕಾರಿ ಜನಾಭಿಪ್ರಾಯ ರೂಪಿಸುವುದೂ ಅವಶ್ಯವಿದೆ.' ಎಂದು ಅವರು ಪ್ರತಿಪಾದಿಸಿದರು.

'ವಿದೇಶಿಯರು ಇಲ್ಲಿ ಬಂದು ಬಂಡವಾಳ ಹೂಡುವುದು ನಮ್ಮ ಕಾರ್ಮಿಕರು ಉದ್ಧಾರವಾಗಲಿ ಎಂದಲ್ಲ. ಲಾಭವೇ ಅವರಿಗೆ ಮುಖ್ಯ. ಕಾರ್ಪೋರೇಟ್ ವಲಯಕ್ಕೆ ಅನುಕೂಲ ಕಲ್ಪಿಸುವ ಮೂಲಕ ನಮ್ಮವರ ಹೊಟ್ಟೆ ಮೇಲೆ ಹೊಡೆಯಲಾಗುತ್ತಿದೆ. ಇದರ ಪರಿಣಾಮ ಇಡೀ ದೇಶವೇ ಗುತ್ತಿಗೆಯ ಆಧಾರದಲ್ಲಿ ನಡೆಯುವ ದುಃಸ್ಥಿತಿ ಬಂದೊದಗಲಿದೆ. ಈ ಸಂಚನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು' ಎಂದರು.

ಭಾರತೀಯ ಮಜ್ದೂರ್ ಸಂಘದ ಅಖಿಲ ಭಾರತ ಉಪಾಧ್ಯಕ್ಷೆ ಮಂಗಳಾಂಬ ರಾವ್, ಕಾರ್ಮಿಕರ ದನಿ ಸಂಸತ್ ಮತ್ತು ಶಾಸನಸಭೆಗಳಲ್ಲಿ ಕೇಳುವಂತಾಗಲು ಎಲ್ಲ ವರ್ಗದ ಜನರು ಬೀದಿಗಿಳಿಯುವಂತೆ ಕರೆ ನೀಡಿದರು.

ಐಕ್ಯ ಹೋರಾಟ ರೂಪಿಸುವೆವು-ಕೆ. ಮಹಾಂತೇಶ್

ಕಾರ್ಮಿಕ ವರ್ಗದ ಹಕ್ಕುಗಳ ಮೇಲಿನ ಈ ದಾಳಿಯ ವಿರುದ್ಧ ಹನ್ನೊಂದು ಕಾರ್ಮಿಕ ಸಂಘಟನೆಗಳು ಐಕ್ಯ ಚಳುವಳಿ ನಡೆಸಲಿವೆ. ನವೆಂಬರ್ 10 ರಂದು ಬೆಂಗಳೂರಿನಲ್ಲಿ ಕಾರ್ಮಿಕ ಸಂಘಟನೆಗಳು ಸಭೆ ಸೇರಿ ಹೋರಾಟದ ಮುಂದಿನ ರೂಪು-ರೇಷೆ ನಿರ್ಧರಿಸಲಿವೆ ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್ ತಿಳಿಸಿದರು.

'ಅವರು 'ಮೇಕ್ ಪ್ರಾಫಿಟ್ ಇನ್ ಇಂಡಿಯಾ!' ಎಂದುಕೊಂಡಿದ್ದಾರೆ' – ಮೀನಾಕ್ಷಿ ಸುಂದರಂ

ಪ್ರಧಾನಿ ಮೋದಿ ಅವರ 'ಭಾರತದಲ್ಲಿ ಉತ್ಪಾದಿಸಿ' ಪರಿಕಲ್ಪನೆ ವಿದೇಶಿ ಹೂಡಿಕೆದಾರರಿಗೆ ಹೆಚ್ಚು ಅನುಕೂಲಕರವಾಗಿದೆ. ಏಕೆಂದರೆ 'ಮೇಕ್ ಇನ್ ಇಂಡಿಯಾ' ಘೋಷಣೆಯನ್ನು ವಿದೇಶಿ ಹೂಡಿಕೆದಾರರು 'ಮೇಕ್ ಪ್ರಾಫಿಟ್ ಇನ್ ಇಂಡಿ-ಯಾ' (ಭಾರತದಲ್ಲಿ ಲಾಭ ಗಳಿಸಿ) ಎಂದು ಪರಿಭಾವಿಸಿ ಇಲ್ಲಿ ಬಂಡವಾಳ ಹೂಡುತ್ತಿದ್ದಾರೆ. ಇದು ಹಿಂದಿನ 'ಈಸ್ಟ್ ಇಂಡಿಯಾ ಕಂಪನಿ' ನೀತಿಯ ಮುಂದುವರಿದ ಭಾಗವಾಗಿದೆ ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಎಂ.ಎಸ್. ಮೀನಾಕ್ಷಿ ಸುಂದರಂ ಹೇಳಿದರು.

'ದುಡಿದ ಸಂಬಳ ಪಡೆಯಲು ಪರದಾಟ ತಪ್ಪಲಿ-ವೇತನ ಮೂಲಭೂತ ಹಕ್ಕಾಗಲಿ' – ವಸಂತಕುಮಾರ್ ಹಿಟ್ಟಣಗಿ

ನಿವೃತ್ತ ಜಂಟಿ ಕಾರ್ಮಿಕ ಆಯುಕ್ತ ವಸಂತಕುಮಾರ್ ಹಿಟ್ಟಣಗಿ ಈ ಸಂದರ್ಭದಲ್ಲಿ ಮಾತನಾಡಿ ಕಾರ್ಮಿಕರ ಕಾನೂನುಗಳು ಅಸ್ತಿತ್ವದಲ್ಲಿ ಇದ್ದರೂ ಬಹಳಷ್ಟು ಹಲ್ಲಿಲ್ಲದ ಹಾವಿನಂತಾಗಿವೆ. ದುಡಿದ ಸಂಬಳ ಪಡೆಯಲು ಪರದಾಟ ನಡೆಸುವುದನ್ನು ತಪ್ಪಿಸಲು ವೇತನ ಪಡೆಯುವಿಕೆಯನ್ನು ಮೂಲಭೂತ ಹಕ್ಕನ್ನಾಗಿ ಮಾಡಬೇಕಿದೆ ಎಂದು ಪ್ರತಿಪಾದಿಸಿದರು.

ಗುತ್ತಿಗೆದಾರ ಕೈ ಎತ್ತಿದರೆ ಕಾರ್ಮಿಕರ ಕುಟುಂಬದ ಗತಿಯೇನು?

ಹಾಲಿ ಕಾರ್ಮಿಕ ಕಾನೂನಿನಂತೆ ಗುತ್ತಿಗೆದಾರ ಕೆಲಸಗಾರರಿಗೆ ಸಂಬಳ ನೀಡದೆ ಓಡಿ ಹೋದಲ್ಲಿ ಸಂಬಂಧಿಸಿದ ಉದ್ಯೋಗದಾತ ಹೊಣೆ ಹೊರ ಬೇಕಿತ್ತು. ಈಗ ವಿಧೇಯಕ ತಿದ್ದುಪಡಿಯಾದರೆ ಉದ್ಯೋಗದಾತನಿಗೆ ಉತ್ತರದಾಯಿತ್ವ ಇರುವುದಿಲ್ಲ. ಗುತ್ತಿಗೆದಾರ ಕೈ ಎತ್ತಿದರೆ ಕಾರ್ಮಿಕರ ಕುಟುಂಬದ ಗತಿಯೇನು? ಅಪ್ರೆಂಟೀಸ್ ಸೇರ್ಪಡೆಯನ್ನು ಸಂಸ್ಥೆಯ ಮರ್ಜಿಗೆ ಬಿಟ್ಟಿದ್ದು, ಉದ್ಯೋಗ ಭದ್ರತೆ ಸಹಿತ ವೇತನ, ಭತ್ಯೆ, ಕೆಲಸದಿಂದ ವಜಾ ಮಾಡುವ ಅಧಿಕಾರವನ್ನು ನೇರವಾಗಿ ನೀಡಲಾಗಿದೆ. ಇಂತಹ ಹಲವು ಅಂಶಗಳು ಕಾರ್ಮಿಕ ವಿರೋಧಿಯಾಗಿದ್ದು, ಇದನ್ನು ಹೋರಾಟದ ಮೂಲಕವೇ ಸರಿಪಡಿಸಿಕೊಳ್ಳಬೇಕಿದೆ ಎಂದು ವಸಂತಕುಮಾರ್ ಹಿಟ್ಟಣಗಿ ಅಭಿಪ್ರಾಯಪಟ್ಟರು.

ನ್ಯಾಯಾಂಗದಲ್ಲಿ ವಿಳಂಬ ಪ್ರವೃತ್ತಿ

ಈ ದೇಶದ ನ್ಯಾಯಾಂಗ ವ್ಯವಸ್ಥೆ ನಿಧಾನಗತಿಯಲ್ಲಿ ಸಾಗುತ್ತಿರುವುದು ಕಾರ್ಮಿಕರ ಪಾಲಿಗೆ ಮಾರಕವಾಗಿದೆ. ಕುರಾನಿನಲ್ಲಿ ಹೇಳಿರುವಂತೆ, ಒಬ್ಬ ಶ್ರಮಿಕ ತನ್ನ ಕೂಲಿಯನ್ನು ಕೆಲಸದಿಂದ ಸುರಿವ ಬೆವರು ಆರುವ ಮುನ್ನವೇ ಪಡೆಯಬೇಕು ಎಂಬ ಮಾತು ಜಾರಿಗೆ ಬರುವುದು ಸದ್ಯದ ಸ್ಥಿತಿಯಲ್ಲಿ ಅವಶ್ಯವಿದೆ. ಇಂತಹ ತತ್ತ

ಪುಟ 12 ರಿಂದ

ಬೆಳ್ತಂಗಡಿಯಲ್ಲಿ 'ಇ.ಎಂ.ಎಸ್.ಭವನ' ಉದ್ಘಾಟನೆ ಜನಾಂದೋಲನಕ್ಕೆ ಸಜ್ಜಾಗಲು ಎಂ.ಎ.ಬೇಬಿ ಕರೆ

ತಾವು ಅಧಿಕಾರಕ್ಕೆ ಬಂದ ಕೂಡಲೇ ವಿದೇಶದಲ್ಲಿನ ಕಪ್ಪು ಹಣವನ್ನು ಮೂರು ದಿನಗಳೊಳಗೆ ವಾಪಾಸು ತರುವುದಾಗಿ ಬಿಜೆಪಿ ಚುನಾವಣಾ ಸಂದರ್ಭ ಭರವಸೆ ನೀಡಿತ್ತು. ಆದರೆ ಕಪ್ಪು ಹಣ ಹೊಂದಿದವರ




ವಿವರವೊಂದು ಲಭ್ಯವಿದ್ದು ಐದು ತಿಂಗಳಾದರೂ ಅವರ ಹೆಸರು ಬಹಿರಂಗಗೊಳಿಸಿಲ್ಲ. ಆ ಕಪ್ಪು ಹಣ ಹೊಂದಿದವರು ಕಮ್ಯೂನಿಸ್ಟರಂತೂ ಅಲ್ಲ. ತಮ್ಮ ಬೆಂಬಲಿಗರಿಲ್ಲದಿದ್ದರೆ, ಬಿಜೆಪಿ ಯಾಕೆ ಅವರ ಹೆಸರು ಬಹಿರಂಗಗೊಳಿಸದೆ ಇರುತ್ತಿತ್ತು? ಕಪ್ಪು ಹಣ, ಭ್ರಷ್ಟಾಚಾರ ನಿವಾರಿಸುತ್ತೇವೆಂಬುದು ಬಿಜೆಪಿ ಬೊಗಳೆ. ಇಲ್ಲವಾದರೆ ಯಡಿಯೂರಪ್ಪನವರನ್ನು ಯಾಕೆ ಬಿಜೆಪಿ ಮತ್ತೆ ಸೇರಿಸಿಕೊಳ್ಳುತ್ತಿದ್ದರು ಎಂದು ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯ ಹಾಗೂ ಮಾಜಿ ಸಚಿವ ಎಂ.ಎ.ಬೇಬಿ ಅವರು ಕಟುವಾಗಿ ಟೀಕಿಸಿದರು.

ಅವರು ಬೆಳ್ತಂಗಡಿಯಲ್ಲಿ ಸಿಪಿಐ(ಎಂ) ಪಕ್ಷ ಕಚೇರಿಯಲ್ಲಿ ಉದ್ಘಾಟಿಸಿ, ಬಳಿಕ ಪಕ್ಷದ ತಾಲೂಕು ಸಮ್ಮೇಳನದ ಅಂಗವಾಗಿ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ನವಂಬರ್ 8 ರಂದು ಮಾತನಾಡುತ್ತಿದ್ದರು.

ಪಕ್ಷಕ್ಕಾಗಿ ಸರ್ವ ತ್ಯಾಗ ಮಾಡಿದ ಇ.ಎಂ.ಎಸ್., ಪಿ.ಸುಂದರಯ್ಯ, ಸುರ್ಜಿತ್, ಬಸವಪುನ್ನಯ್ಯ, ಪಿ.ರಾಮಚಂದ್ರ ರಾವ್ ಅವರ ಪರಂಪರೆ ಕಮ್ಯೂನಿಸ್ಟರದು. ತ್ರಿಪುರಾದಲ್ಲಿ ರಾಜ್ಯ ಮುಖ್ಯ ಮಂತ್ರಿಯಾಗಿದ್ದರೂ, ಸ್ವಂತಕ್ಕೆ ಬ್ಯಾಂಕ್ ಉಳಿತಾಯ ಖಾತೆಯಲ್ಲಿ ಹಣವೇ ಇಲ್ಲದ ಮಾಣಿಕ್ ಸರ್ಕಾರ್ ಅವರಂಥ ತ್ಯಾಗಿಗಳೂ ಈಗಲೂ ಸಿಪಿಐ(ಎಂ) ಪಕ್ಷದಲ್ಲಿದ್ದಾರೆ. ಭ್ರಷ್ಟಾಚಾರದಲ್ಲಿ ಮುಳುಗಿ ಹೋದ ಇತರ ಪಕ್ಷದವರೆಲ್ಲಿ! ತ್ಯಾಗಶೀಲರಾದ ಕಮ್ಯೂನಿಸ್ಟರೆಲ್ಲಿ ಎಂದು ಅವರು ವಿಶ್ಲೇಷಿಸಿದರು.

ಅಮೆರಿಕಾದೊಂದಿಗೆ ಆರ್ಥಿಕ ಸಹಭಾಗಿತ್ವದ ಒಪ್ಪಂದ ಮಾಡಿಕೊಂಡ ಮನಮೋಹನ ಸಿಂಗರನ್ನು ಬಿಜೆಪಿ ಟೀಕೆ ಮಾಡುತ್ತಿತ್ತು. ಆದ-ರೆ ಬಿಜೆಪಿ ಪಕ್ಷದ ಪ್ರಧಾನಿ ನರೇಂದ್ರ ಮೋದಿ ಮಾಡಿದ್ದಾದರೂ ಏನು? ಅಮೆರಿಕಾಕ್ಕೆ ಭೇಟಿಯಿತ್ತು ಮಾಡಿಕೊಂಡ ಒಪ್ಪಂದಗಳೊಂದರಲ್ಲಿ ಔಷಧ ಬೆಲೆ ನಿಯಂತ್ರಣವನ್ನು ತೆಗೆದು ಹಾಕುವಂತೆ ಮಾಡಲಾಗಿದೆ. ವಿದೇಶೀ ಔಷಧಿ ಕಂಪೆನಿಗಳಿಗೆ ಔಷಧ ಬೆಲೆ ನಿಯಂತ್ರಣ ಅಧಿಕಾರ ನೀಡಿ, ಏಕಾಏಕಿ ಭಾರತದಲ್ಲಿ ಔಷಧಗಳ ಬೆಲೆ ಏರಿಕೆ ಆಗುವಂತಾಗಿದೆ. ಬಡವರು ಕಾಯಿಲೆಗೀಡಾದರೆ ಪರಿಸ್ಥಿತಿ ಕಷ್ಟವಾಗಬಹುದು. ಎಡಪಕ್ಷಗಳು ಮಾತ್ರ ಇದನ್ನು ಅನುಷ್ಠಾನಗೊಳ್ಳಲು ಬಿಡುವುದಿಲ್ಲ ಎಂದು ಅವರು ಸವಾಲೆಸೆದರು.

ಎರಡು ವರ್ಷಗಳ ಹಿಂದೆ ಇಲ್ಲಿನ ಧರ್ಮಸ್ಥಳದಲ್ಲಿ ಸೌಜನ್ಯ ಎಂಬ ವಿದ್ಯಾರ್ಥಿನಿಯ ಅತ್ಯಾಚಾರ ಹಾಗೂ ಕೊಲೆ ನಡೆಯಿತು. ಇಲ್ಲಿನ ಪಾಳೆಯಗಾರಿ ಒಡೆಯರು ಸರಕಾರದ ಮೇಲೆ ಪ್ರಭಾವ ಉಳ್ಳವರಾಗಿದ್ದು, ತನಿಖೆಯಿನ್ನೂ ಸಂಪೂರ್ಣಗೊಂಡಿಲ್ಲ. ಸರಕಾರ ಮಾನಸಿಕ ರೋಗಿಯೊಬ್ಬನನ್ನು ಆರೋಪಿ ಎಂದು ಮುಂದೆ ಮಾಡಿದೆ. ಇಲ್ಲಿ ಸರಕಾರಕ್ಕೇನೇ ಮಾನಸಿಕ ರೋಗ ಬಂದಿರುವುದು ಎಂದು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.



ವರದಿ : ವಾ. ಉಚ್ಚಿಲ್

ಬಿಜೆಪಿ ಇವತ್ತು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದುದಾದರೂ ಹೇಗೆ? ಮುಜಾಫರ್ ನಗರ ಮತ್ತಿತರ ಕಡೆಗಳಲ್ಲಿ ಕೋಮುಗಲಭೆಗಳನ್ನು ಎಬ್ಬಿಸಲಾಯಿತು. ಅಲ್ಲಿ ಸಂಕಷ್ಟಕ್ಕೀಡಾದ ಬಡವರಿಗಾಗಿ ಸಿಪಿಐ(ಎಂ) ಪಕ್ಷ 80 ಕ್ಕೂ ಹೆಚ್ಚು ಮನೆಗಳನ್ನು ಕಟ್ಟಿಸಿ ಕೊಟ್ಟಿದೆ ಎಂದವರು ತಿಳಿಸಿದರು.

ಕರ್ನಾಟಕದಲ್ಲಿ ಭೂಮಿಯ ಪ್ರಶ್ನೆ, ಮನೆ ನಿವೇಶನ ರಹಿತರ ಪ್ರಶ್ನೆಗಾಗಿ ಸಿಪಿಐ(ಎಂ) ಪಕ್ಷ ಹೋರಾಡುತ್ತಿದೆ. ಮುಖ್ಯ ಮಂತ್ರಿ ಭರವಸೆ ನೀಡಿದ್ದಾರೆ ನಿಜ. ಆದರೆ ಹೋರಾಟವಿಲ್ಲದೆ ಅದು ದಕ್ಕಲಾರದು. ಸಿಪಿಐ(ಎಂ) ಪಕ್ಷವು ಬೆಳ್ತಂಗಡಿಯಲ್ಲಿ ನಡೆಸುವ ಹೋರಾಟಗಳಿಗೆ 'ಇಎಂಎಸ್ ಭವನ' ಒಂದು ಸ್ಫೂರ್ತಿ ಕೇಂದ್ರವಾಗಲಿ ಎಂದು ಎಂ.ಎ.ಬೇಬಿ ಹಾರೈಸಿದರು.

ಬಹಿರಂಗ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮ ರೆಡ್ಡಿ, ದ.ಕ.ಜಿಲ್ಲೆಯ ಹಿರಿಯ ಪಕ್ಷ ಮುಖಂಡ ಕೆ.ಆರ್.ಶ್ರೀಯಾನ್, ರಾಜ್ಯ ಸಮಿತಿ ಸದಸ್ಯ ವಸಂತ ಆಚಾರಿ ಮಾತನಾಡಿದರು. ಬಿ.ಎಂ.ಭಟ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಬೆಳ್ತಂಗಡಿ ತಾಲೂಕು ಸಮಿತಿ ಕಾರ್ಯದರ್ಶಿ ಎಸ್.ಎಂ.ಶಿವ ಕುಮಾರ್ ಸ್ವಾಗತಿಸಿದರು.

ಅಪರಾಹ್ನ ಸಮ್ಮೇಳನದ ಪ್ರತಿನಿಧಿ ಅಧಿವೇಶನ ನಡೆಯಿತು. ಸಮ್ಮೇಳನವು 19 ಮಂದಿ ಸದಸ್ಯರಿರುವ ನೂತನ ತಾಲೂಕು ಸಮಿತಿಯನ್ನುಆಯ್ಕೆಮಾಡಿರುತ್ತದೆ. ಬಿ.ಎಂ.ಭಟ್ ಅವರು ಸಮಿತಿಯ ನೂತನ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುತ್ತಾರೆ.

ಇಎಂಎಸ್ ಭವನ ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಪಕ್ಷದ ಕಚೇ-ರಿಯಾಗಿದ್ದು, ಸ್ವಂತ ನಿವೇಶನ ಹಾಗೂ ಸ್ವಂತ ಕಚೇರಿ ಕಟ್ಟಡವನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ಪ್ರಥಮವಾಗಿ ಹೊಂದಿದ ಕೀರ್ತಿ ಹೊಂದಿದೆ.

ವಿಜೃಂಭಿಸಿದ ಮಂಗಳೂರು ನಗರ ಸಿಪಿಐ(ಎಂ) ಸಮ್ಮೇಳನ ಎರಡು ನಗರ ಸಮಿತಿಗಳ ರಚನೆ :

ಸಿಪಿಐ(ಎಂ) ಮಂಗಳೂರು ನಗರ ಸಮ್ಮೇಳನವು ನವಂಬರ್ 9 ರಂದು ಯೆಯ್ಯಾಡಿಯ ಕಾಂ|ದೀಪಂಕರ್ ಮುಖರ್ಜಿ ಸಭಾಂಗಣದಲ್ಲಿ ನಡೆಯಿತು. ವೇದಿಕೆಗೆ ದಿ.ಕಾಂ|ಶೇಖರ್ ಡಿ.ಸಾಲ್ಯಾನ್ ಹೆಸರಿಡಲಾಗಿತ್ತು.

ಪಕ್ಷದ ಹಿರಿಯ ಸದಸ್ಯರಲ್ಲೊಬ್ಬರಾದ ಈಶ್ವರ ಶಕ್ತಿನಗರ ಅವರು ಸಮ್ಮೇಳನದ ಧ್ವಜಾರೋಹಣವನ್ನು ನೆರವೇರಿಸಿದರು. ಸಮ್ಮೇಳನದ ಉದ್ಘಾಟನೆಯನ್ನು ಜಿಲ್ಲೆಯ ಪಕ್ಷದ ಹಿರಿಯ ಮುಖಂಡ ಕೆ.ಆರ್.ಶ್ರೀಯಾನ್ ನಡೆಸಿ ಮಾತನಾಡಿದರು. ಬಳಿಕ ನಡೆದ ಪ್ರತಿನಿಧಿ ಅಧಿವೇಶನವು ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಂಡಿಸಿದ ವರದಿಯ ಬಗ್ಗೆ ಚರ್ಚಿಸಿತು. ಮಂಗಳೂರಿಗೆ ಸಂಬಂಧಿಸಿದ 17 ನಿರ್ಣಯಗಳನ್ನು ಕೈಗೊಳ್ಳಲಾಯಿತು. ಉದ್ಘಾಟನಾ ಸಮಾರಂಭದಲ್ಲಿ ಪಕ್ಷದ ಹಿರಿಯ ಸದಸ್ಯರಾದ ಪೂವಪ್ಪ ಸಾಲ್ಯಾನ್, ಈಶ್ವರ ಶಕ್ತಿ ನಗರ, ಸೀತರಾಮ್ ಕೊಟ್ಟಾರಿ, ಚಂದು ಭಂಡಾರಿ, ಸದಾಶಿವ ಕಾರ್ಪೆಂಟರ್, ಚಂದ್ರಹಾಸ ಕೊಡಿಯಾಲ್ ಬೈಲ್ ಮತ್ತು ಕೂಸಪ್ಪ ಗಟ್ಟಿ ಈ 7 ಮಂದಿಯನ್ನು ಸನ್ಮಾನಿಸಲಾಯಿತು.

ವಿಧಾನಸಭಾ ಕ್ಷೇತ್ರದ ಗಡಿಗಳ ಆಧಾರದಲ್ಲಿ ಮಂಗಳೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ 38 ವಾರ್ಡ್‌ಗಳನ್ನುಮಂಗಳೂರು ನಗರ ದಕ್ಷಿಣವೆಂದೂ, 22 ವಾರ್ಡ್‌ಗಳನ್ನು ಮಂಗಳೂರು ನಗರ ಉತ್ತರ ಎಂದೂ ವಿಭಜಿಸಿ, ವಿಭಜಿತ ಪ್ರದೇಶದಲ್ಲಿರುವ ಪಕ್ಷದ ಶಾಖೆಗಳನ್ನು ವರ್ಗೀಕರಿಸಿ, ಪಕ್ಷದ ಎರಡು ಸಮಿತಿಗಳನ್ನೂ ಮರು ರೂಪಿಸುವ ನಿರ್ಣಯ ಕೈಗೊಳ್ಳಲಾಯಿತು. ಸಮಿತಿಯ ಆಯ್ಕೆಯನ್ನು ಮಂಗಳೂರು ದಕ್ಷಿಣ ಮತ್ತು ಮಂಗಳೂರು ಉತ್ತರ ನೆಲೆಯಲ್ಲಿ ಸಮ್ಮೇಳನ ಪ್ರತಿನಿಧಿಗಳು ಮಾಡಿರುತ್ತಾರೆ. 13 ಮಂದಿ ಸದಸ್ಯರ ಮಂಗಳೂರು ನಗರ ದಕ್ಷಿಣ ಸಮಿತಿಗೆ ಸುನಿಲ್ ಕುಮಾರ್ ಬಜಾಲ್ ಕಾರ್ಯದರ್ಶಿಯಾಗಿಯೂ, 9 ಮಂದಿ ಸದಸ್ಯರ ಮಂಗಳೂರು ನಗರ ಉತ್ತರ ಸಮಿತಿಗೆ ಕೃಷ್ಣಪ್ಪ ಕೊಂಚಾಡಿ ಅವರು ಕಾರ್ಯದರ್ಶಿಯಾಗಿಯೂ ಆಯ್ಕೆ ಆಗಿರುತ್ತಾರೆ.



ಕಾಂ. ಜಿ.ವಿ. ಶ್ರೀರಾಮರೆಡ್ಡಿ ಮಾತನಾಡುತಿರುವುದು

ಸಾಯಂಕಾಲ ಎಯ್ಯಾಡಿ ಜಂಕ್ಷನ್‌ನ ಕಾಂ|ಹೊನ್ನಯ್ಯ ದೇವಾಡಿಗ ವೇದಿಕೆಯಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ, ಕೆ.ಆರ್.ಶ್ರೀಯಾನ್ ಮತ್ತು ವಸಂತ ಆಚಾರಿ ಮಾತನಾಡಿದರು. ಕೃಷ್ಣಪ್ಪ ಕೊಂಚಾಡಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸುನಿಲ್ ಕುಮಾರ್ ಬಜಾಲ್ ಸಮ್ಮೇಳನದ ನಿರ್ಣಯಗಳನ್ನು ವಿವರಿಸಿದರು.

ಬಹಿರಂಗ ಸಭೆಗೂ ಮೊದಲು ಒಂದು ಸಾವಿರಕ್ಕೂ ಮೀರಿದ ಜನರ ಮೆರವಣಿಗೆ ಪದವಿನಂಗಡಿ ಎಂಬಲ್ಲಿಂದ ಮೆರವಣಿಗೆ ಸಾಗಿ ಬಂತು. ಕೆಂಪು ಸಮವಸ್ತ್ರಧಾರಿಗಳ ಪಥ ಸಂಚಲನ, ಕೇರಳ ಬ್ಯಾಂಡ್, ಚೆಂಡೆಮೇಳ, ನಾಸಿಕ್ ಬ್ಯಾಂಡ್‌ಗಳು ಮೆರವಣಿಗೆಯ ಆಕರ್ಷಣೆಯಾಗಿದ್ದವು.

ಮಂಗಳೂರು ನಗರ ಸಮ್ಮೇಳನದ ಪೂರ್ವಭಾವಿಯಾಗಿ ನಡೆದ ಶಾಖಾ ಸಭೆಗಳ ಸಂದರ್ಭದಲ್ಲಿ 9 ಕಡೆ ಬಹಿರಂಗ ಸಭೆಗಳು ನಡೆದಿರುತ್ತವೆ. ನವಂಬರ್ 2 ರಂದು ನಗರದ 20 ಕಡೆಗಳಲ್ಲಿ ಸಮ್ಮೇಳನದ ಅಂಗವಾಗಿ ಧ್ವಜ ದಿನಾಚರಣೆ ನಡೆದಿದ್ದು, ತಮ್ಮ ಪ್ರದೇಶಗಳನ್ನು ಅಂದೇ ಕೆಂಪು ಪತಾಕೆಗಳಿಂದ ಶೃಂಗರಿಸಿದ್ದರು. ಅಲ್ಲದೆ ಅದೇ ದಿನ ಸಮ್ಮೇಳನದ ಪ್ರಚಾರಾರ್ಥ ಬೈಕ್ ರ್‍ಯಾಲಿಯನ್ನು ಏರ್ಪಡಿಸಲಾಗಿತ್ತು.

ಸಾರಿಗೆ ಪ್ರಾಧಿಕಾರದ ಸಭೆ ಕರೆಯಲು ಆಗ್ರಹಿಸಿ ಡಿವೈಎಫ್ಐ-ಎಸ್ಎಫ್ಐ ಧರಣಿ :

ಡೀಸಿಲ್ ದರ ಇಳಿಕೆಯಾದ ಹಿನ್ನೆಲೆಯಲ್ಲಿ ಬಸ್ ಪ್ರಯಾಣ ದರ ಇಳಿಸಿಲ್ಲವಾದ ಕಾರಣ

ಪುಟ 15 ಕ್ಕೆ

ಮೋದಿ ಸಂಪುಟದ ಸಂಖ್ಯೆ 66ಕ್ಕೇರಿದೆ. ಸಂವಿಧಾನ ವಿಧಿಸಿರುವ ಮಿತಿಯಾದ 83ಕ್ಕೆ ಆಗಲೇ ಬಹಳ ಹತ್ತಿರ ಬಂದಿದೆ. ಆರ್ಥಿಕ ಸುಧಾರಣೆಗಳ ಧೋರಣೆಗಳನ್ನು ಅನುಸರಿಸುತ್ತ ನಮ್ಮ ಬಹುಪಾಲು ಜನತೆಯ ಮೇಲೆ ಹೆಚ್ಚಿನ ಹೊರೆಗಳನ್ನು ಹೇರುತ್ತಲೇ, ಮತ್ತು ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುತ್ತಲೇ, ಜತೆಗೆ 'ಕನಿಷ್ಟ ಸರಕಾರ, ಗರಿಷ್ಟ ಆಡಳಿತ ' ಎಂಬ ತನ್ನ ವಚನವನ್ನು ಪಾಲಿಸದೆ ಮೋದಿ ಸರಕಾರ ಜನತೆಗೆ ವಿಶ್ವಾಸಘಾತ ಮಾಡಿ ಅವರ ಮೇಲೆ ಮತ್ತಷ್ಟು ಸಂಕಟಗಳನ್ನು ಹೇರುತ್ತಿದೆ.



ಸೀತಾರಾಂ ಯೆಚೂರಿ

ಮೋದಿ ಸಂಪುಟದ ಪುನರ್ರಚನೆ – ಎಲ್ಲಿದೆ 'ಕನಿಷ್ಟ ಸರಕಾರ, ಗರಿಷ್ಟ ಆಡಳಿತ'ದ ವಚನ?

ಅಧಿಕಾರ ವಹಿಸಿಕೊಂಡ ಆರು ತಿಂಗಳ ಒಳಗೆ ಮೋದಿ ಸರಕಾರವನ್ನು ವಿಸ್ತರಿಸಲಾಗಿದೆ. 21 ಹೊಸ ಮಂತ್ರಿಗಳನ್ನು ಕೇಂದ್ರ ಮಂತ್ರಿಮಂಡಲದಲ್ಲಿ ಸೇರಿಸಲಾಗಿದೆ. ಇದರೊಂದಿಗೆ ಸಂಪುಟದ ಸಂಖ್ಯೆ 66ಕ್ಕೇರಿದೆ. ಇವರಲ್ಲಿ ಇಬ್ಬರು ಸಂಸತ್ತಿನ ಯಾವುದೇ ಸದನದ ಸದಸ್ಯರಲ್ಲ. ಇಂತಹ ವ್ಯಕ್ತಿಗಳು ಗರಿಷ್ಟ ಆರು ತಿಂಗಳ ವರೆಗೆ ಅಧಿಕಾರದಲ್ಲಿರಬಹುದು. ಅದರೊಳಗೆ ಅವರು ಎರಡರಲ್ಲಿ ಯಾವುದಾದರೂ ಒಂದು ಸದನಕ್ಕೆ ಆಯ್ಕೆಯಾಗಿ ಬರಬೇಕು ಎಂದು ಸಂವಿಧಾನ ವಿಧಿಸಿದೆ.

ಈ ಪ್ರವೃತ್ತಿಯನ್ನು ನೋಡಿದರೆ, ಈ ಸರಕಾರಕ್ಕೆ ಇನ್ನೂ ಉಳಿದಿರುವ ನಾಲ್ಕೂವರೆ ವರ್ಷಗಳಲ್ಲಿ, ಸಂಪುಟ ಇನ್ನಷ್ಟು ವಿಸ್ತರಣೆಗೊಳ್ಳುವುದಿಲ್ಲ ಎಂದೇನೂ ಹೇಳಲಾಗದು.

ಚುನಾವಣಾ ಪ್ರಚಾರದ ವೇಳೆಯಲ್ಲಿ ನರೇಂದ್ರ ಮೋದಿಯವರು ಮತ್ತು ಆರೆಸ್ಸೆಸ್–ಬಿಜೆಪಿ ಯುಪಿಎ–2 ಸರಕಾರದ ದೊಡ್ಡ ಆಕಾರದ ಬಗ್ಗೆ ಉಗ್ರ ಪ್ರಚಾರ ನಡೆಸಿದ್ದರು. ಆ ಸರಕಾರದ ಮಂತ್ರಿಗಳ ಒಟ್ಟು ಸಂಖ್ಯೆ ಗರಿಷ್ಟ 79ಕ್ಕೇರಿತ್ತು. ಅಧಿಕಾರ ಬಿಡುವಾಗ ಅದು 77ಕ್ಕೆ ಇಳಿದಿತ್ತು. ಈ ಯುಪಿಎ–2 ಸರಕಾರದಲ್ಲಿ ಕಾಂಗ್ರೆಸ್ ಅಲ್ಲದೆ ಅದರ ಕನಿಷ್ಟ ಐದು ಮಿತ್ರಪಕ್ಷಗಳ ಮಂತ್ರಿಗಳಿದ್ದರು.

ಆದರೆ ಪ್ರಸಕ್ತ ವಿಸ್ತರಣೆಯಲ್ಲಿ ಕೇವಲ ಒಬ್ಬ ಟಿಡಿಪಿ ಮಂತ್ರಿಯನ್ನು ಬಿಟ್ಟರೆ ಉಳಿದವರೆಲ್ಲ ಬಿಜೆಪಿಯವರು. ಮಹಾರಾಷ್ಟ್ರ ವಿಧಾನಸಭೆಯಲ್ಲಿ ಅಲ್ಪಮತದಲ್ಲಿದ್ದರೂ ಶಿವಸೇನೆಯನ್ನು ಮೈತ್ರಿಕೂಟದ ಭಾಗೀದಾರನಾಗಿ ತೆಗೆದುಕೊಳ್ಳಲು ಬಿಜೆಪಿ ನಿರಾಕರಿಸಿದ್ದರಿಂದ, ವಾಜಪೇಯಿ ಸರಕಾರದಲ್ಲಿ ಸಂಪುಟ ಮಂತ್ರಿಯಾಗಿ ಕೆಲಸ ಮಾಡಿದ್ದ ಒಬ್ಬ ಪ್ರಮುಖ ಶಿವಸೈನಿಕನನ್ನು ಈ ಸಂಪುಟಕ್ಕೆ ಸೇರಿಸಲಾಗಿದೆ, ಆದರೆ ಆತ ಶಿವಸೇನೆಗೆ ರಾಜೀನಾಮೆ ನೀಡಿ ಪ್ರತಿಜ್ಞೆ ಸ್ವೀಕರಿಸುವ ಹಿಂದಿನ ದಿನವಷ್ಟೇ 'ಇಲೆಕ್ಟ್ರಾನಿಕ್' ಮಾರ್ಗದಲ್ಲಿ ಬಿಜೆಪಿ ಸೇರಿದ ನಂತರವೇ ಆತನನ್ನು ಸೇರಿಸಿಕೊಂಡಿರುವುದು.

ಮಾಧ್ಯಮಗಳ ಅಸಹ್ಯ ಜೈಕಾರ

ಮೋದಿ ಸರಕಾರ ಮಂತ್ರಿಸಂಪುಟಕ್ಕೆ ಸಂವಿಧಾನ ವಿಧಿಸಿರುವ ಮಿತಿಯಾದ 83ಕ್ಕೆ(ಸಂಸತ್ತಿನ ಎರಡೂ ಸದನಗಳ ಒಟ್ಟು ಸದಸ್ಯರ 10ಶೇ.) ಆಗಲೇ ಬಹಳ ಹತ್ತಿರ ಬಂದಿದ್ದರೂ ಕಾರ್ಪೊರೇಟ್ ಮಾಧ್ಯಮಗಳಲ್ಲಿ ಅವರಿಗೆ 'ಜೈಕಾರ' ಹಾಕುವವರು ಮೋದಿಯವರು ಈ ವಿಸ್ತರಣೆಯ ಮೂಲಕ 'ಕನಿಷ್ಟ ಸರಕಾರ ಗರಿಷ್ಟ ಆಡಳಿತ'ದ ತನ್ನ ಚುನಾವಣಾ ವಚನವನ್ನು ಪಾಲಿಸಿದ್ದಾರೆ ಎಂದು ಹಾಡಿ ಹೊಗಳಿದ್ದಾರೆ!

ಈ ರೀತಿ ಹಾಡಿ ಹೊಗಳಿದ ಹತ್ತಾರು ಪತ್ರಿಕಾ ಶೀರ್ಷಿಕೆಗಳಲ್ಲಿ ಒಂದಂತೂ ಅಸಹ್ಯ ಹುಟ್ಟಿಸುವ ರೀತಿಯಲ್ಲಿ ಅಲ್ಲವೆಂದು ಹೇಳಿದರೂ, ಅತ್ಯಂತ ಆಕ್ಷೇಪಣೀಯ ರೀತಿಯಲ್ಲಂತೂ ಇತ್ತು. 'ಪ್ರಧಾನಿಗಳು ಜಾತಿ, ಪ್ರತಿಭೆಯ ಸಮತೋಲನ ಮಾಡಿದ್ದಾರೆ' ಎಂದಿತ್ತು ಅದು. ಜಾತಿ ಮತ್ತು ಪ್ರತಿಭೆ ಜೊತೆಗೆ ಇರಲಾರದು ಎಂಬ ಅಷ್ಟೇನೂ ಸೂಕ್ಷ್ಮವಲ್ಲದ ಈ ಸಂದೇಶ ಆರೆಸ್ಸೆಸ್–ಬಿಜೆಪಿಯ ರಾಗಾಲಾಪನೆಗಳಲ್ಲಿ ಒಂದು. ಇದು ನಮ್ಮ ಸಂವಿಧಾನಕ್ಕೆ ಮಾಡಿರುವ ಅವಮಾನ, "ಜಾತಿ, ಮತ, ಲಿಂಗದ ಭೇದಭಾವವಿಲ್ಲದೆ' ಎಲ್ಲರಿಗೂ ಸಮಾನತೆ ಎಂಬ ಸಂವಿಧಾನದ ಒಂದು ಪವಿತ್ರ ಬುನಾದಿಯ ಉಲ್ಲಂಘನೆಯೇ ಆಗಿದೆ. ಮಂತ್ರಿಮಂಡಲದ ಸದಸ್ಯರು ಪ್ರತಿಜ್ಞೆ ಸ್ವೀಕರಿಸಿ ಮಂತ್ರಿಗಳಾಗುವುದು ಇದೇ ಸಂವಿಧಾನದ ಅಡಿಯಲ್ಲಿ.

ಚುನಾವಣಾ ಪ್ರಚಾರದ ಆದ್ಯಂತ ಮೋದಿ ಸರಕಾರ ಚಿಕ್ಕದಾಗಿರುತ್ತದೆ, ಆದರೆ ಇದುವರೆಗಿನ ಯಾವುದೇ ಸರಕಾರಕ್ಕಿಂತ ದಕ್ಷವಾಗಿರುತ್ತದೆ ಎಂದು ಜನತೆಗೆ ಭರವಸೆ ನೀಡಲಾಗಿತ್ತು. ಅಂದರೆ ಹಣಬಲ, ಭುಜಬಲದ ಪ್ರಭಾವ ಸಂಪೂರ್ಣವಾಗಿ ಇಲ್ಲವೇ ಇಲ್ಲೆಂದು ಹೇಳಲಾಗಿದ್ದರೂ ಅತ್ಯಂತ ಕನಿಷ್ಟ ಪ್ರಮಾಣದಲ್ಲಿರುತ್ತದೆ, ನಮ್ಮ ಗಣತಂತ್ರದ ಜಾತ್ಯಾತೀತ ಪ್ರಜಾಸತ್ತಾತ್ಮಕ ಸಂವಿಧಾನಿಕ ಬುನಾದಿಯನ್ನು ಎತ್ತಿ ಹಿಡಿಯಲಾಗುತ್ತದೆ ಎಂದೇ ಈ ಘೋಷಣೆಯ ಅರ್ಥ ಎಂದು ಜನತೆಗೆ ಬಿಂಬಿಸಲಾಗಿತ್ತು.

ಹುಟ್ಟಿಸಿದ ನಿರೀಕ್ಷೆಗಳು ಹುಸಿಯಾಗಿವೆ

ನ್ಯಾಶನಲ್‌ಎಲೆಕ್ಷನ್ ವಾಚ್(ಎನ್‌ಇಡಬ್ಲ್ಯು) ಮತ್ತು ಅಸೋಸಿಯೇಶನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್(ಎಡಿಆರ್) ನಡೆಸಿದ ಇತ್ತೀಚಿನ ವಿಶ್ಲೇಷಣೆ ಮೋದಿ ಪ್ರಚಾರ ಎಬ್ಬಿಸಿದ್ದ ಇಂತಹ ನಿರೀಕ್ಷೆಗಳು ಸಂಪೂರ್ಣವಾಗಿ ಹುಸಿಯಾಗಿವೆ ಎಂದು ತೋರಿಸುತ್ತದೆ.

ಈ ಎರಡು ಸಂಸ್ಥೆಗಳು 66 ಮಂತ್ರಿಗಳಲ್ಲಿ 64 ಮಂದಿಯ ತಾವೇ ಸಲ್ಲಿಸಿರುವ ಅಫಿಡವಿಟ್‌ಗಳನ್ನು (ಇಬ್ಬರು ಸದ್ಯಕ್ಕೆ ಎರಡರಲ್ಲಿ ಯಾವ ಸದನದ ಸದಸ್ಯರೂ ಅಲ್ಲವಾದ್ದರಿಂದ ಅವರ ಅಫಿಡವಿಟ್‌ಗಳು ಇಲ್ಲ) ಪರಿಶೀಲಿಸಿ ಈ ವಿಶ್ಲೇಷಣೆಯನ್ನು ಮಾಡಿವೆ.

ಇದರ ಪ್ರಕಾರ 20 ಮಂದಿ(31ಶೇ.) ತಮ್ಮ ಮೇಲೆ ಕೇಸುಗಳಿವೆ ಎಂದು ಘೋಷಿಸಿಕೊಂಡಿದ್ದಾರೆ. ಆಘಾತಕಾರಿ ಸಂಗತಿಯೆಂದರೆ ಹೊಸದಾಗಿ ಸೇರಿಸಲ್ಪಟ್ಟ 8 ಮಂತ್ರಿಗಳು (38ಶೇ.) ಹೀಗೆ–ಂದು ಘೋಷಿಸಿದ್ದಾರೆ. ಇವರಲ್ಲಿ ನಾಲ್ಕು ಮಂದಿ ತಮ್ಮ ಮೇಲೆ ಗಂಭೀರ ಕೇಸುಗಳಿವೆ ಎಂದಿದ್ದಾರೆ. ಇದರೊಂದಿಗೆ ಕೇಂದ್ರ ಸಂಪುಟದಲ್ಲಿ ಕೊಲೆಯತ್ನ, ಕೋಮು ಸೌಹಾರ್ದವನ್ನು ಕದಡುವುದು, ಚುನಾವಣಾ ಉಲ್ಲಂಘನೆ ಇತ್ಯಾದಿ ಗಂಭೀರ ಕೇಸುಗಳಿರುವ ಮಂತ್ರಿಗಳ ಸಂಖ್ಯೆ 11 ಕ್ಕೆ ಏರಿದೆ. ಇಬ್ಬರ ಮೇಲೆ ಐಪಿಸಿ ಸಕ್ಷನ್ 307ರ ಅಡಿಯಲ್ಲಿ (ಕೊಲೆಯತ್ನ) ಕೇಸುಗಳಿದ್ದರೆ, ಇಬ್ಬರ ಮೇಲೆ ಸೆಕ್ಷನ್ 153ಎ(ಅಂದರೆ ಸಾಮರಸ್ಯವನ್ನು ಕಾಪಾಡುವುದಕ್ಕೆ ವ್ಯತಿರಿಕ್ತವಾದ ಕೃತ್ಯ ಎಸಗುವುದು) ಕೇಸುಗಳಿವೆ.

ಅದೇ ಭುಜಬಲ– ಹಣಬಲ

ಇನ್ನೊಂದು ಬಿಹಾರದ ನವಾಡ ಕ್ಷೇತ್ರದ ಗಿರಿರಾಜ್ ಸಿಂಗ್ ಅವರ ಕುಖ್ಯಾತ ಕೇಸ್. ಈತ ಈ ಹಿಂದೆ ಹಲವಾರು ದಲಿತರ ಮೇಲೆ ಮಾರಣಾಂತಿಕ ಹಲ್ಲೆಗಳನ್ನು ಮಾಡಿರುವ ಕುಖ್ಯಾತ 'ರಣವೀರ್ ಸೇನಾ'ದಲ್ಲಿ ಪ್ರಮುಖ ಪಾತ್ರ ವಹಿಸಿರುವ ವ್ಯಕ್ತಿ.

ಮೋದಿಯವರನ್ನು ವಿರೋಧಿಸುವವರಿಗೆ ಭಾರತದಲ್ಲಿ ಸ್ಥಾನವಿಲ್ಲ, ಆದ್ದರಿಂದ ಅವರು ಪಾಕಿಸ್ತಾನಕ್ಕೆ ಹೋಗಲಿ ಎಂಬ ಜುಗುಪ್ಸೆಕಾರೀ ಹೇಳಿಕೆ ನೀಡಿದಾತ. ಆತ ಈ ಹೇಳಿಕೆಯನ್ನು ತಾನು ನೀಡಿಲ್ಲ ಎಂದೇನೂ ಹೇಳಿಲ್ಲ, ಬದಲಿಗೆ ಇನ್ನಷ್ಟು ಒತ್ತು ನೀಡಿ ಅದನ್ನು ಮತ್ತೆ– ಮತ್ತೆ ಹೇಳಿರುವಾತ. ಮೋದಿ ಸರಕಾರ ಇಂತಹ ಒಬ್ಬ ವ್ಯಕ್ತಿಗೆ(ನಮ್ಮ ಸಂವಿಧಾನ ನೀಡಿರುವ ಹಕ್ಕುಗಳನ್ನು ಎತ್ತಿ ಹಿಡಿಯುತ್ತೇವೆ ಎಂಬ ನಟನೆಗಾದರೂ) ಛೀಮಾರಿ ಹಾಕಿ, ಶಿಸ್ತಿಗೆ ಒಳಪಡಿಸುವ ಬದಲು ಕಿರು, ಸಣ್ಣ ಮತ್ತು ಮಧ್ಯಮಗಾತ್ರದ ಉದ್ದಿಮೆಗಳ ಮಂತ್ರಿಯಾಗಿ ಮಾಡಿ ಬಹುಮಾನ ನೀಡಿದೆ. ಹೀಗಿದೆ, ಆರೆಸ್ಸೆಸ್–ಬಿಜೆಪಿಯ ನಿರೂಪಣೆಯ ಪ್ರಕಾರವೇ ಉತ್ತಮ ಆಡಳಿತದ ಮೂರು ಅಂಶಗಳಲ್ಲಿ ಎರಡು ಅಂಶಗಳ ಬಗ್ಗೆ ಹೇಳಬಹುದಾದ್ದು.

ಇನ್ನು ಹಣಬಲದ ವಿಷಯದಲ್ಲಿ ಹೇಳುವುದಾದರೆ, 64 ಮಂತ್ರಿಗಳ ತಾವೇ ಸಲ್ಲಿಸಿದ ಅಫಿಡವಿಟ್‌ಗಳ ಪ್ರಕಾರ 59 ಮಂದಿ (92ಶೇ.ದಷ್ಟು!) ಕೋಟ್ಯಾಧಿಪತಿಗಳು! ಪ್ರತಿ ಮಂತ್ರಿಯ ಸರಾಸರಿ ತಲಾ ಘೋಷಿತ ಆಸ್ತಿಯ ಮೊತ್ತ ರೂ.14. 25 ಕೋಟಿ. ಅದರಲ್ಲೂ ಹೊಸದಾಗಿ ಸೇರಿಸಲ್ಪಟ್ಟವರ ತಲಾ ಆಸ್ತಿಯ ಮೊತ್ತ ಇನ್ನೂ ಹೆಚ್ಚು, ರೂ. 18.48ಕೋಟಿ. ಏಳು ಮಂತ್ರಿಗಳ ಘೋಷಿತ ಆದಾಯ 30ಕೋಟಿ ರೂ.ಗಿಂತ ಹೆಚ್ಚಿದೆ. ಕೆಲವರದ್ದಂತೂ ನೂರಾರು ಕೋಟಿ ರೂ.ಗಳು!

ದೇಶದ ಪ್ರಮುಖ ವೈದ್ಯಕೀಯ ಸಂಸ್ಥೆ, ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಪ್ರಾಮಾಣಿಕ ವಿಚಕ್ಷಣಾ (ವಿಜಿಲೆನ್ಸ್) ಅಧಿಕಾರಿಯನ್ನು ಹೊರಹಾಕಲು ಕಾರಣನೆಂಬ ಆಪಾದನೆ ಹೊತ್ತಿರುವವನನ್ನು ಕೇಂದ್ರ ಆರೋಗ್ಯಮಂತ್ರಿಯಾಗಿ ಸೇರಿಸಲಾಗಿದೆ. ಅದೂ ಸ್ವತಃ ವೈದ್ಯನಾಗಿ ಆ ಹುದ್ದೆಯಲ್ಲಿರುವವರನ್ನು ಬದಲಿಸಿ!

ಇದು 'ಉತ್ತಮ ಆಳ್ವಿಕೆ'ಯ ಬಗ್ಗೆ ಜನತೆಗೆ ನೀಡಿರುವ ವಚನವನ್ನು ಹುಸಿಗೊಳಿಸಿರುವುದಲ್ಲದೆ, ಸಂಪುಟದಲ್ಲಿ ಈ ರೀತಿಯ ಹಣಬಲದ ಪ್ರಾಬಲ್ಯ ವಿದೇಶಿ ಬ್ಯಾಂಕುಗಳಲ್ಲಿ ಕಾನೂನುಬಾಹಿರವಾಗಿ ಪೇರಿಸಿಟ್ಟ ಕಪ್ಪುಹಣದಲ್ಲಿ 'ಪ್ರತಿ ಪೈಸೆ'ಯನ್ನೂ ಹಿಂದಕ್ಕೆ ತರಲಾಗುವುದು ಎಂದು ಮೋದಿ ಸರಕಾರ ಮತ್ತೆ–ಮತ್ತೆ ಹೇಳಿಕೊಳ್ಳುವುದರ ಬಗ್ಗೆ ಹಲವು ಪ್ರಶ್ನೆಗಳನ್ನು ಎತ್ತುತ್ತದೆ.

ಇದನ್ನು, ಪ್ರತಿಯೊಬ್ಬ ಕೋಟ್ಯಾಧಿಪತಿ ತನ್ನ ಸಂಪತ್ತನ್ನು ಭ್ರಷ್ಟ ಮತ್ತು ಮೋಸದಿಂದ ಸಂಪಾದಿಸಿದ್ದಾನೆ ಎಂದೇನೂ ಅರ್ಥೈಸಬೇಕಾಗಿಲ್ಲ. ಆದರೆ ಸುಪ್ರಿಂ ಕೋರ್ಟಿನ ಎದುರು ಮೋದಿ ಸರಕಾರ ತೋರಿರುವ ಚಂಚಲತೆ, ಈ ಅಂಕಣದಲ್ಲಿ ಈಗಾಗಲೇ ಚರ್ಚಿಸಿರುವಂತೆ, ಈ ವಿಷಯದಲ್ಲಿ ಇವರೆಲ್ಲ ಕೊಟ್ಟಿರುವ ವಚನಗಳನ್ನು ಎಷ್ಟರ ಮಟ್ಟಿಗೆ ಪ್ರಾಮಾಣಿಕವಾಗಿ ಪಾಲಿಸುತ್ತಾರೆ ಎಂಬ ಬಗ್ಗೆ ಗಂಭೀರ ಸಂದೇಹಗಳನ್ನು ಎತ್ತುತ್ತದೆ.

ವಿಶ್ವಾಸಘಾತದ ಚಾರಿತ್ರ್ಯ

ಎರಡು ಬಹಳ ಜನಸಂಖ್ಯೆಯ ಮತ್ತು ರಾಜಕೀಯವಾಗಿ ಮಹತ್ವ ಹೊಂದಿರುವ ರಾಜ್ಯಗಳಲ್ಲಿ, ಬಿಹಾರ ಮತ್ತು ಉತ್ತರಪ್ರದೇಶದಲ್ಲಿ, ಮುಂಬರುವ ವಿಧಾನಸಭಾ ಚುನಾವಣೆಗಳ ಮೇಲೆ ಕಣ್ಣಿಟ್ಟು ಮೋದಿ ಸರಕಾರ ಹೊಸ 21 ಮಂತ್ರಿಗಳಲ್ಲಿ ಮೂರನೇ ಒಂದರಷ್ಟು ಮಂತ್ರಿಗಳನ್ನು ಈ ಎರಡು ರಾಜ್ಯಗಳಿಂದಲೇ ಸಂಪುಟಕ್ಕೆ ಸೇರಿಸಿಕೊಂಡಿದೆ–ಬಿಹಾರದಿಂದ ಮೂರು, ಉತ್ತರ ಪ್ರದೇಶದಿಂದ ನಾಲ್ಕು. 'ಸಾಮಾಜಿಕ ಇಂಜಿನಿಯರಿಂಗ್' ಎಂಬ ಇಂತಹ ನಗ್ನ ಪ್ರಯತ್ನಗಳು ಮತ್ತು ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಪ್ರಯತ್ನಗಳು ಈ ಆರೆಸ್ಸೆಸ್/ಬಿಜೆಪಿ ಸರಕಾರದ ಚಾರಿತ್ರ್ಯದ ಬಗ್ಗೆ ಬಹಳಷ್ಟು ಹೇಳುತ್ತವೆ.

ಹೀಗೆ ಜನತೆಯ ಮಟ್ಟಿಗೆ ಹೇಳುವುದಾದರೆ, ಈ ಮೋದಿ ಸರಕಾರ ಆರ್ಥಿಕ ಸುಧಾರಣೆಗಳ ಧೋರಣೆಗಳನ್ನು ಅನುಸರಿಸುತ್ತ ನಮ್ಮ ಬಹುಪಾಲು ಜನತೆಯ ಮೇಲೆ ಹೆಚ್ಚಿನ ಹೊರೆಗಳನ್ನು ಹೇರುತ್ತಲೇ, ಮತ್ತು ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುತ್ತಲೇ, ಜತೆಗೆ 'ಕನಿಷ್ಟ ಸರಕಾರ, ಗರಿಷ್ಟ ಆಡಳಿತ' ಎಂಬ ತನ್ನ ವಚನವನ್ನು ಪಾಲಿಸದೆ ವಿಶ್ವಾಸಘಾತ ಮಾಡಿ ಅವರ ಮೇಲೆ ಮತ್ತಷ್ಟು ಸಂಕಟಗಳನ್ನು ಹೇರುತ್ತಿದೆ.

ದಿನೇದಿನೇ ಹೆಚ್ಚೆಚ್ಚು ಸ್ಪಷ್ಟಗೊಳ್ಳುತ್ತಿರುವ ಇಂತಹ ಒಂದು ದಿಕ್ಕು–ದಾರಿ ಒಂದೆಡೆಯಲ್ಲಿ ಜನಗಳ ಮೇಲೆ ಇನ್ನಷ್ಟು ಹೊರೆಗಳನ್ನು ಹೇರುತ್ತಿದ್ದರೆ, ಮತ್ತೊಂದೆಡೆಯಲ್ಲಿ ವಿಶಾಲ, ವೈವಿಧ್ಯಮಯ ಸಾಮಾಜಿಕ ವ್ಯವಸ್ಥೆಯ ನಮ್ಮ ಈ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಹೆಚ್ಚಿನ ಅಪಾಯ ತಂದಿಡುತ್ತಿದೆ. ಇದನ್ನು ಇನ್ನೂ ದೊಡ್ಡದಾದ, ಹೆಚ್ಚು ಬಲಿಷ್ಟವಾದ ಜನತೆಯ ಹೋರಾಟಗಳು ಮತ್ತು ಆಂದೋಲನಗಳ ಮೂಲಕ ಪ್ರತಿರೋಧಿಸಬೇಕಾಗಿದೆ. ●



'ಕನಿಷ್ಟ ಸರಕಾರ' ಎಂದರೆ ಇದೇ ಇರಬಹುದೇ? ಇಬ್ಬರು ವ್ಯಂಗ್ಯಚಿತ್ರಕಾರರು ಕಂಡಂತೆ

ಸಂಪುಟ ವಿಸ್ತರಣೆಯಾಗಿದೆಯಷ್ಟೇ -ಕಂಟ್ರೋಲ್ ರೂಂ ಅಲ್ಲ



ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಉಳಿಸಿ; ನವೆಂಬರ್ 26 ರ ಹೋರಾಟ ಯಶಸ್ವಿಗೊಳಿಸಿ



ಸಮರ್ಪಕವಾಗಿ ಜಾರಿಯಾದರೆ ರಾಷ್ಟ್ರ ನಿರ್ಮಾಣದ ಮಹಾನ್ ಕಾರ್ಯ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಿಂದ ಸಾಧ್ಯವಿದೆ. ಆದರೆ ಈ ಬಗ್ಗೆ ಯಾವುದೇ ಬದ್ಧತೆಯಿಲ್ಲದ ನರೇಂದ್ರಮೋದಿ ಸರ್ಕಾರ ಯೋಜನೆಯನ್ನು ಮೊಟಕುಗೊಳಿಸಿ ಗ್ರಾಮೀಣ ಬಡವರ ಹೊಟ್ಟೆಯ ಮೇಲೆ ಹೊಡೆಯಲು ಹೊರಟಿದೆ. ಯಾವುದೇ ಕಾರಣಕ್ಕೂ ಇದಕ್ಕೆ ಅವಕಾಶ ಆಗಬಾರದು.

ನಿತ್ಯಾನಂದ ಸ್ವಾಮಿ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಮೊಟಕುಗೊಳಿಸಲು ಹೊರಟಿರುವ ಕೇಂದ್ರ ಮೋದಿ ಸರ್ಕಾರದ ಹುನ್ನಾರವನ್ನು ವಿರೋಧಿಸಿ ಇದೇ ನವೆಂಬರ್ 26 ರಂದು ದೇಶವ್ಯಾಪಿ ಪ್ರತಿಭಟನೆ ನಡೆಸಲು ಭಾರತ (ಮಾರ್ಕ್ಸ್‌ವಾದಿ) ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿ ನಿರ್ಧರಿಸಿದೆ. ಯೋಜನೆಯ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರವು ರಾಜ್ಯಗಳಿಗೆ ನೀಡಬೇಕಾದ ಅನುದಾನವನ್ನು ಗಣನೀಯವಾಗಿ ಕಡಿತ ಮಾಡಲು ನಿರ್ಧರಿಸಲಾಗಿದೆ. ಯೋಜನೆಯನ್ನು ಅತಿ ಹಿಂದುಳಿದ ಕೇವಲ 2500 ಬ್ಲಾಕ್‌ಗಳಿಗೆ ಮಾತ್ರ ಸೀಮಿತಗೊಳಿಸಲು ಉದ್ದೇಶಿಸಲಾಗಿದೆ. ಕೆಲಸಗಾರರ ವೇತನ ಮತ್ತು ಸಾಮಗ್ರಿಗಳ ವೆಚ್ಚಕ್ಕೆ 60:40ರ ಅನುಪಾತದಲ್ಲಿ ಅಂದರೆ 60% ರಷ್ಟು ಕೆಲಸಗಾರರ ವೇತನಕ್ಕಾಗಿ ಮತ್ತು 40% ರಷ್ಟನ್ನು ಸಾಮಗ್ರಿಗಳಿಗಾಗಿ ವಿನಿಯೋಗ ಮಾಡುವ ನಿಯಮಾವಳಿಯನ್ನು ಬದಲಾಯಿಸಿ 51:49 ರ ಅನುಪಾತದಲ್ಲಿ ವಿನಿಯೋಗಿಸಲು ಸೂಚಿಸಲಾಗಿದೆ. ಅಂದರೆ ಕೆಲಸಗಾರರ ವೇತನಕ್ಕಾಗಿ ದೊರೆಯುವ ಮೊತ್ತವು 60% ರಿಂದ 51%ಕ್ಕೆ ಕಡಿತಗೊಳ್ಳಲಿದ್ದು, ಸಾಮಗ್ರಿಗಳಿಗಾಗಿ ದೊರೆಯುವ ಮೊತ್ತವು 40% ರಿಂದ 49%ಕ್ಕೆ ಏರಲಿದೆ. ಇದರಿಂದಾಗಿ ಕೆಲಸಗಾರರಿಗೆ ದೊರೆಯುವ ಕೆಲಸದ ಪ್ರಮಾಣ ಕಡಿಮೆಯಾಗಲಿದ್ದು ಅವರ ಆದಾಯ ಕುಸಿಯಲಿದೆ. ಇನ್ನೊಂದೆಡೆ ಸಾಮಗ್ರಿಗಳಿಗಾಗಿ ಹೆಚ್ಚುವರಿ ಹಣವನ್ನು ಒದಗಿಸುವುದರಿಂದ ಗುತ್ತಿಗೆದಾರರ ಮತ್ತು ಯಂತ್ರಗಳ ಅಕ್ರಮ ಬಳಕೆ ಹೆಚ್ಚಾಗುವುದು. ಮೋದಿ ಸರ್ಕಾರದ ಈ ಹುನ್ನಾರ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಮೇಲಿನ ದಾಳಿಯಾಗಿದ್ದು ಅದರ ವಿರುದ್ಧ ವ್ಯಾಪಕ ಪ್ರಚಾರ ಮತ್ತು ತೀವ್ರ ಪ್ರತಿಭಟನೆ ನಡೆಸಲು ಸಿ.ಪಿ.ಐ.(ಎಂ) ನಿರ್ಧರಿಸಿದೆ.

1990 ರ ದಶಕದಿಂದ ಭಾರತ ಸರ್ಕಾರ ಅನುಷ್ಠಾನ ಗೊಳಿಸುತ್ತಾ ಬಂದಿರುವ ಸಾಮ್ರಾಜ್ಯಶಾಹಿ ಪ್ರೇರಿತ ಉದಾರೀಕರಣದ ದೋರಣೆಗಳಿಂದಾಗಿ ದೇಶದ ಕೃಷಿ ರಂಗ ತೀವ್ರ ಬಿಕ್ಕಟ್ಟಿಗೆ ಒಳಗಾಯಿತು. ಅದರ ಪರಿಣಾಮವಾಗಿ ಕೃಷಿಯು ಒಂದು ಲಾಭದಾಯಕ ಉದ್ಯೋಗವಾಗಿ ಉಳಿಯಲಿಲ್ಲ. ಕೃಷಿ ಸಬ್ಸಿಡಿಗಳನ್ನು ಕಡಿತಗೊಳಿಸಲಾಯಿತು. ಕೃಷಿಗೆ ಸರ್ಕಾರದ ಪ್ರೋತ್ಸಾಹ ಇಲ್ಲವಾಯಿತು. ವಿದೇಶಿ ಕೃಷಿ ಉತ್ಪನ್ನಗಳ ನಿಯಂತ್ರಣರಹಿತ ಆಮದುಗಳಿಂದಾಗಿ ದೇಶೀಯ ಉತ್ಪನ್ನಗಳ ಬೇಡಿಕೆ ಕುಸಿಯಿತು. ರೈತರು ಬೆಳೆದ ಉತ್ಪನ್ನಗಳಿಗೆ ಯೋಗ್ಯ ಬೆಲೆ ಸಿಗದಂತಾಯಿತು. ಮೊದಲಿನಂತೆ ರೈತರಿಗೆ ಸಾಂಸ್ಥಿಕ ಸಾಲ ಸಿಗದಂತಾಯಿತು. ರೈತರು ಅನಿವಾರ್ಯವಾಗಿ ದುಬಾರಿ ಬಡ್ಡಿ ದರದ ಖಾಸಗಿ ಸಾಲಕ್ಕೆ ಮೊರೆ ಹೋಗುವಂತಾಯಿತು. ಸಾಲ ತೀರಿಸಲು ರೈತರು ತಮ್ಮ ಭೂಮಿಯನ್ನೇ ಮಾರಾಟ ಮಾಡಬೇಕಾಯಿತು. ಅದೂ ಸಾಧ್ಯವಾಗದಾಗ ರೈತರು ಸಾಲು ಸಾಲಾಗಿ ಆತ್ಮಹತ್ಯೆಗೆ ಶರಣಾಗುವಂತಾಯಿತು.

ಕಾರ್ಷಿಕ ಬಿಕ್ಕಟ್ಟು ವರ್ಷದಿಂದ ವರ್ಷಕ್ಕೆ, ಸರ್ಕಾರದಿಂದ ಸರ್ಕಾರಕ್ಕೆ ಹೆಚ್ಚಾಗುತ್ತಾ ಹೋಯಿತು. ಸಣ್ಣ ಮತ್ತು ಅಂಚಿನ ರೈತರು ವ್ಯವಸಾಯ ಮಾಡುವುದನ್ನು ತೊರೆಯುವಂತಾಯಿತು. ಹೊಟ್ಟೆಪಾಡಿಗಾಗಿ ಅವರು ಕೃಷಿ ಕೂಲಿಕಾರರಾಗಿ ಅಥವ ಅಸಂಘಟಿತ ವಲಯದ ಕಾರ್ಮಿಕರಾಗಿ ದುಡಿಯುವಂತಾಯಿತು. ಕಾರ್ಷಿಕ ರಂಗವನ್ನು ಆವರಿಸಿಕೊಂಡ ಈ ಬಿಕ್ಕಟ್ಟು ಗ್ರಾಮೀಣ ಕೃಷಿ ಕೂಲಿಕಾರರ ಮೇಲೆ ಅತಿ ಹೆಚ್ಚಿನ ದುಷ್ಪರಿಣಾಮ ಬೀರುವಂತಾಯಿತು. ಕೃಷಿ ಕೂಲಿಕಾರರ ಸಂಖ್ಯೆ ಹೆಚ್ಚಾಯಿತು. ಗ್ರಾಮೀಣ ಪ್ರದೇಶದಲ್ಲಿ ಅವರಿಗೆ ಮೊದಲಿನಂತೆ ಕೆಲಸ ಸಿಗದಂತಾಯಿತು. ಕೃಷಿ ಹಂಗಾಮದಲ್ಲಿ ಕೆಲಸ ದೊರೆತರೂ ಬೆಲೆ ಏರಿಕೆಗೆ ಅನುಗುಣವಾಗಿ ವೇತನ ಸಿಗದಂತಾಯಿತು. ಹೊಟ್ಟೆಪಾಡಿನ ಒತ್ತಡಕ್ಕೆ ಒಳಗಾಗಿ ಅವರು ನಗರ ಪ್ರದೇಶಗಳಿಗೆ ವಲಸೆ ಹೋಗುವುದು ಹೆಚ್ಚಾಯಿತು. ಬಹುದೊಡ್ಡ ಸಂಖ್ಯೆಯಲ್ಲಿ ಅವರು ಶಾಶ್ವತವಾಗಿ ಗ್ರಾಮಗಳನ್ನು ತೊರೆದು ನಗರ ಪ್ರದೇಶಗಳಿಗೆ ವಲಸೆ ಹೋಗುವಂತಾಯಿತು, ಪರಿಣಾಮವಾಗಿ ಕೃಷಿ ಕೆಲಸಗಳಿಗೆ ಕೂಲಿಕಾರರೇ ಸಿಗದಂತಹ ಪರಿಸ್ಥಿತಿ ನಿರ್ಮಾಣವಾಯಿತು. ಇದರಿಂದ ಒಟ್ಟಾರೆಯಾಗಿ ಗ್ರಾಮೀಣ ಆರ್ಥಿಕತೆ ದಿವಾಳಿಯಾಗುವಂತಾಯಿತು.

ಈ ಹಿನ್ನೆಲೆಯಲ್ಲಿ, ಕೃಷಿ ಕೂಲಿಕಾರರ ಸಂಘಟನೆಗಳು ಮುಖ್ಯವಾಗಿ ಎಡಪಕ್ಷಗಳು ಅಂದಿನ ಕಾಂಗ್ರೆಸ್ ಸರ್ಕಾರದ ಮೇಲೆ ಒತ್ತಡ ತಂದು ಗ್ರಾಮೀಣ ಕೆಲಸಗಾರರಿಗೆ ವರ್ಷದಲ್ಲಿ ಕನಿಷ್ಠ 100 ದಿನಗಳ ಕೆಲಸವನ್ನು ಒದಗಿಸುವ ಕಾಯ್ದೆಯನ್ನು ಅಂಗೀಕರಿಸಲು ಸಾಧ್ಯವಾಯಿತು. ಎಡಪಕ್ಷಗಳ ಬಾಹ್ಯ ಬೆಂಬಲವನ್ನು ಅವಲಂಭಿಸಿದ್ದ ಅಂದಿನ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ತನ್ನ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಉದ್ಯೋಗ ಖಾತರಿ ಕಾಯ್ದೆಯನ್ನು ಅಂಗೀಕರಿಸಿ ಜಾರಿಗೊಳಿಸುವ ಭರವಸೆಯನ್ನು ನೀಡಿತ್ತು. ಇಂತಹ ಒಂದು



ಯೋಜನೆಯನ್ನು ಕಾಯ್ದೆ ರೂಪದಲ್ಲಿ ಜಾರಿಗೆ ತರುವುದು ಸರ್ಕಾರದ ಉದಾರೀಕೃತ ಆರ್ಥಿಕ ದೋರಣೆಗಳಿಗೆ ವಿರುದ್ಧವಾಗಿದ್ದರೂ ಎಡಪಕ್ಷಗಳ ಒತ್ತಡಕ್ಕೆ ಮಣಿದು ಮನಮೋಹನ್ ಸಿಂಗ್ ನೇತೃತ್ವದ ಮೊದಲ ಯುಪಿಎ ಸರ್ಕಾರ 2005 ರಲ್ಲಿ ಯೋಜನೆಯನ್ನು ಜಾರಿಗೆ ತಂದಿತು. ನಂತರ ಬಂದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಅದರಿಂದ ಲಾಭವೂ ಆಯಿತು.

ಬರಬರುತ್ತಾ ಯೋಜನೆಯ ವಿರುದ್ಧ ನವ ಉದಾರೀಕರಣದ ದೋರಣೆಗಳ ಪ್ರತಿಪಾದಕರ ಟೀಕೆ ತೀವ್ರವಾಯಿತು. ಯೋಜನೆಯ ಅನುಷ್ಠಾನದಿಂದಾಗಿ ಕೃಷಿ ಕೆಲಸಗಳಿಗೆ ಕೂಲಿಕಾರರು ಸಿಗದಂತಾಗಿದ್ದಾರೆ ಎಂದೂ, ಗ್ರಾಮೀಣ ಪ್ರದೇಶದಲ್ಲಿ ಕೂಲಿಕಾರರ ಕೂಲಿಯ ದರಗಳು ಗಣನೀಯವಾಗಿ ಹೆಚ್ಚಾಗಿ ರೈತರಿಗೆ ತೊಂದರೆಯಾಗಿದೆ ಎಂದೂ, ಇದರಿಂದ ದೀರ್ಘಕಾಲ ಬಾಳಿಕೆ ಬರುವ ಆಸ್ತಿಗಳ ಸೃಷ್ಟಿ ನಿರೀಕ್ಷೆಯಂತೆ ಆಗುತ್ತಿಲ್ಲ ಎಂದೂ, ಇದು ಸರ್ಕಾರದ ಬೊಕ್ಕಸಕ್ಕೆ ಅನಗತ್ಯ ಹೊರೆಯನ್ನು ಹೇರುತ್ತದೆ ಎಂದೂ ಟೀಕೆಗಳು ವ್ಯಕ್ತವಾಗತೊಡಗಿದವು. ಈ ಟೀಕೆಗಳಿಗೆ ಮಣಿದ ಮನಮೋಹನ್ ಸಿಂಗ್ ಸರ್ಕಾರವು ಮುಂದಿನ ವರ್ಷಗಳಲ್ಲಿ ಯೋಜನೆಯ ಅನುಷ್ಠಾನಕ್ಕೆ ನೀಡುತ್ತಿದ್ದ ಅನುದಾನವನ್ನು ಕಡಿಮೆ ಮಾಡುತ್ತಾ ಬಂತು. ಕೆಲಸ ಬಯಸುವವರು ಬೇಡಿಕೆ ಇಟ್ಟಾಗ ಅವರಿಗೆ ಕೆಲಸ ಒದಗಿಸದಿರುವುದು, ಮಾಡಿದ ಕೆಲಸವನ್ನು ಸರಿಯಾಗಿ ದಾಖಲು ಮಾಡಿಕೊಳ್ಳದಿರುವುದು, ಕೆಲಸಗಾರರಿಗೆ ಸಕಾಲದಲ್ಲಿ ವೇತನ ಸಂದಾಯ ಮಾಡದಿರುವುದು, ಕೆಲಸ ನೀಡದಿದ್ದ ದಿನಗಳ ನಿರುದ್ಯೋಗ ಭತ್ಯೆ ಕೊಡದಿರುವುದು, ಪ್ರಯಾಣ ಭತ್ಯೆ, ಮೇಟಿ (ಕಾಯಕಬಂಧು)ಗಳಿಗೆ ಹೆಚ್ಚುವರಿ ಭತ್ಯೆ, ಸಲಕರಣೆಗಳ ದುರಸ್ತಿಗಾಗಿ ಕೊಡಬೇಕಾದ ಭತ್ಯೆ ಮುಂತಾದವುಗಳನ್ನು ನೀಡದಿರುವುದು, ಬಾಕಿ ವೇತನ ಪಾವತಿ ಮಾಡದಿರುವುದು, ಬೆಲೆ ಏರಿಕೆಗೆ ತಕ್ಕಂತೆ ವೇತನವನ್ನು ಹೆಚ್ಚಿಸದಿರುವುದು ಮೊದಲಾದ ಕೊರತೆಗಳಿಂದಾಗಿ ಕೆಲಸಗಾರರು ಉದ್ಯೋಗ ಖಾತರಿ ಯೋಜನೆಯಲ್ಲಿ ಗಣನೀಯವಾಗಿ ಆಸಕ್ತಿ ಕಳೆದುಕೊಳ್ಳುವಂತಾಯಿತು. ಯೋಜನೆ ಸಮರ್ಪಕವಾಗಿ ಜಾರಿಯಾಗದೆ ಇರುವುದರಿಂದ ಕೆಲಸಗಾರರ ವಲಸೆ ಸಮಸ್ಯೆ ಉಲ್ಬಣಗೊಳ್ಳುವಂತಾಯಿತು. ಅಧಿಕಾರಿಗಳು ಮತ್ತು ಗುತ್ತಿಗೆದಾರರು ಕೈಜೋಡಿಸಿ, ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಅನುದಾನದ ಕೋಟ್ಯಾಂತರ ರೂಪಾಯಿಗಳನ್ನು ಲೂಟಿ ಮಾಡಿದರು.


ತೀವ್ರ ಬೆಲೆ ಏರಿಕೆಗೆ ಕಾರಣವಾದ ಕಾಂಗ್ರೆಸ್ ಸರ್ಕಾರದ ದುರಾಡಳಿತ ಮತ್ತು ಭ್ರಷ್ಟಾಚಾರಕ್ಕೆ ಬೇಸತ್ತ ಜನತೆ ಭಾರೀ ಭರವಸೆಗಳನ್ನು ಮೂಡಿಸಿದ ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತಂದಿತು. ಮಾಡಿದ್ದುಣ್ಣೋ ಮಹಾರಾಯ ಎನ್ನುವಂತಾಗಿದೆ ಈಗ ಮತದಾರನ ಪರಿಸ್ಥಿತಿ. ಹೊಸ ಬ್ರ್ಯಾಂಡ್‌ನಲ್ಲಿ ಹಳೆಯ ಮಧ್ಯದ ಮಾರಾಟ! ಹಿಂದಿನ ಕಾಂಗ್ರೆಸ್ ಸರ್ಕಾರದ ದೋರಣೆಗಳಿಗೂ ಇಂದಿನ ಮೋದಿ ಸರ್ಕಾರದ ದೋರಣೆಗಳಿಗೂ ನಡುವೆ ವೆತ್ಯಾಸವೇ ಕಾಣದಂತಾಗಿ ಜನಸಾಮಾನ್ಯರು ತಮ್ಮ ಕಣ್ಣುಗಳನ್ನೇ ನಂಬದಂತಾಗಿದ್ದಾರೆ. ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ವಿಷಯದಲ್ಲಿ ಇದು ನೂರಕ್ಕೆ ನೂರು ಸತ್ಯ. ಕಾಂಗ್ರೆಸ್ ಸರ್ಕಾರಕ್ಕೂ ಈ ಯೋಜನೆಯನ್ನು ಮುಂದುವರೆಸುವ ಇಚ್ಛೆ ಇರಲಿಲ್ಲ. ಈಗ ಬಿಜೆಪಿ ಸರ್ಕಾರವೂ ಯೋಜನೆಯನ್ನು ನಿಧಾನವಾಗಿ ಸಾಯಿಸಲು ಕಾರ್ಯೋನ್ಮುಖವಾಗಿದೆ.

ರಾಜಾಸ್ತಾನದ ಬಿಜೆಪಿ ಮುಖ್ಯಮಂತ್ರಿ ವಸುಂಧರ ರಾಜೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಉದ್ಯೋಗ ಖಾತರಿ ಯೋಜನೆಯನ್ನು ಹಕ್ಕಾಗಿ ಜಾರಿಗೊಳಿಸುವ ಬದಲು ಹಿಂದಿನ 'ಕೂಲಿಗಾಗಿ

ಕಾಳು' ಯೋಜನೆಯ ರೂಪದಲ್ಲಿ ಜಾರಿಮಾಡಿದರೆ ಸಾಕು ಎಂಬ ಸಲಹೆಯನ್ನು ನೀಡಿದ್ದಾರೆ. ಹೀಗೆ ಕಾಯ್ದೆಯನ್ನು ಮಾರ್ಪಾಟು ಮಾಡಿದರೆ ಯೋಜನೆಯ ಅನುಷ್ಠಾನದ ಪ್ರಮಾಣ ಸರ್ಕಾರದ ಇಚ್ಛೆಯನ್ನು ಅವಲಂಭಿಸಲಿದೆಯೇ ಹೊರತು ಫಲಾನುಭವಿಗಳ ಬೇಡಿಕೆಯನ್ನಲ್ಲ. ಸರ್ಕಾರಕ್ಕೆ ಇಚ್ಛೆ ಇದ್ದರೆ ಜಾರಿ ಮಾಡಬಹುದು. ಇಚ್ಛೆ ಇಲ್ಲದಿದ್ದರೆ ಬಿಡಬಹುದು. ಇದು ಯೋಜನೆಯನ್ನು ಹಿಂತೆಗೆದುಕೊಳ್ಳುವ ಒಂದು ವಿಧಾನ!

ಇದೇ ರೀತಿ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಿ ನಿತಿನ್ ಗಡ್ಕರಿ ಉದ್ಯೋಗ ಖಾತರಿ ಯೋಜನೆಯನ್ನು 'ಉತ್ಪಾದನೆ'ಗೆ ಪೂರಕವಾಗಿಸಬೇಕು ಎಂದು ಹೇಳುತ್ತಿದ್ದಾರೆ. ಮೇಲ್ನೋಟಕ್ಕೆ ಈ ಸಲಹೆ ಸರಿಯಾಗಿಯೇ ಕಾಣುತ್ತದೆ. ಆದರೆ ಗಡ್ಕರಿ ಸಲಹೆಯ ಹಿಂದಿನ ನಿಜವಾದ ಗುರಿ ಈ ಯೋಜನೆಯನ್ನು ಕೈಬಿಡುವುದು. ಇಲ್ಲವೆ ಕೃಷಿ ಕೂಲಿಕಾರರು ಭೂಮಾಲೀಕರ ಹಾಗೂ ಬಂಡವಾಳಶಾಹಿ ಕೃಷಿಕರ ಗುಲಾಮರಾಗಿ ಕೆಲಸ ಮಾಡುವಂತೆ ಯೋಜನೆಯಲ್ಲಿ ಬದಲಾವಣೆ ತರುವುದಾಗಿದೆ.

ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರದ ಐದು ತಿಂಗಳುಗಳಲ್ಲಿ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಯೋಜನೆಯ ಮಾರ್ಗಸೂಚಿಗಳನ್ನು ಹಲವು ಬಾರಿ ಬದಲಾಯಿಸಿದೆ. ಕಾಯ್ದೆಯಲ್ಲಿರುವ ಕೆಲಸದ ಹಕ್ಕನ್ನು ಮೊಟಕುಗೊಳಿಸುವುದೇ ಸರ್ಕಾರದ ಉದ್ದೇಶವಾಗಿದೆ. ಹೊಸ ಮಾರ್ಗಸೂಚಿಗಳು ಸ್ಥಳೀಯ ಸಂಸ್ಥೆಗಳ ಮತ್ತು ಗ್ರಾಮಸಭೆಗಳ ಅಧಿಕಾರವನ್ನು ಕಿತ್ತುಕೊಳ್ಳಲು ಸಿದ್ಧಪಡಿಸಿದವುಗಳಾಗಿವೆ. ಕೃಷಿ ಕೂಲಿಕಾರರ ಸಂಘಗಳ ಒತ್ತಾಯದಿಂದ ಕಾಯ್ದೆಯಲ್ಲಿ ಸೇರಿಸಲಾದ ಅಧಿಕಾರ ವಿಕೇಂದ್ರೀಕರಣ ಮತ್ತು ಪ್ರಜಾಸತ್ತಾತ್ಮಕ ಕಾರ್ಯಾಚರಣೆಯ ಮೇಲಿನ ಬಹಿರಂಗ ದಾಳಿ ಇದಾಗಿದೆ. ಈ ಮಾರ್ಗಸೂಚಿಗಳ ಪ್ರಕಾರ ಅಧಿಕಾರಿಗಳು ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿ ಮುಂದಿನ ಹಂಗಾಮಿನಲ್ಲಿ ಎಷ್ಟು ಕೆಲಸವನ್ನು ಎತ್ತಿಕೊಳ್ಳಬೇಕು ಎಂಬುದನ್ನು ಪರಿಶೀಲಿಸಿ ನಿಗದಿ ಪಡಿಸಬೇಕು. ಆ ಮೂಲಕ ಕೆಲಸವನ್ನು ಆಯ್ಕೆಮಾಡುವ ಗ್ರಾಮ ಪಂಚಾಯತ್ ಹಕ್ಕನ್ನು ಅಧಿಕಾರಿಗಳಿಗೆ ವರ್ಗಾಯಿಸಲಾಗುವುದು. ಇದರಿಂದಾಗಿ ಭ್ರಷ್ಟಾಚಾರ ತೀವ್ರಗೊಳ್ಳಲಿದ್ದು ಜನರಿಗೆ ಈ ಯೋಜನೆಯ ಮೇಲೆ ಅಳಿದುಳಿದಿರುವ ಆಸಕ್ತಿಯೂ ಹೊರಟು ಹೋಗಲಿದೆ. ಸರ್ಕಾರ ಬಯಸುವುದೂ ಅದನ್ನೇ. ಜನರ ಬೇಡಿಕೆ ಇಲ್ಲದಿರುವುದರಿಂದ ಯೋಜನೆಯನ್ನು ಕೈಬಿಡಬೇಕಾಯಿತು ಎಂದು ಯೋಜನೆಯ ಅಂತ್ಯಸಂಸ್ಕಾರ ಮುಗಿಸಿಬಿಡಬಹುದು. ಜನತೆ ಇದಕ್ಕೆ ಅವಕಾಶ ಕೊಡಬಾರದು.



ಕೇಂದ್ರ ಹಣಕಾಸು ಮಂತ್ರಿ ಅರುಣ್ ಜೇಟ್ಲಿ ತಮ್ಮ ಬಜೆಟ್ ಭಾಷಣದಲ್ಲಿ ಅಪ್ಪಿತಪ್ಪಿಯೂ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಪ್ರಸ್ತಾಪ ಮಾಡಿರಲಿಲ್ಲ. ನಂತರ ಯೋಜನೆಯ ಜಾರಿಗಾಗಿ ಎಷ್ಟು ಹಣ ಒದಗಿಸಿದ್ದೀರಾ ಎಂದು ಅವರನ್ನು ಪ್ರಶ್ನೆ ಮಾಡಿದಾಗ ಅವರು "ಹಿಂದಿನ ವರ್ಷದಷ್ಟೇ" ಎಂದು ಉತ್ತರಿಸಿದ್ದರು. ಹಿಂದಿನ ವರ್ಷ 34,000 ಕೋಟಿ ರೂ.ಗಳನ್ನು ಖರ್ಚುಮಾಡಲಾಗಿತ್ತು. 4,000ಕೋಟಿ ರೂ. ವೇತನ ಬಾಕಿ ಇತ್ತು. ಈ ವರ್ಷ ಆ ಬಾಕಿ ವೇತನವನ್ನು ಪಾವತಿ ಮಾಡಬೇಕಾಗುತ್ತದೆ. ಆಗ ಹಿಂದಿನ ವರ್ಷದ ಒಟ್ಟು ವೆಚ್ಚ 38,000 ಕೋಟಿ ರೂ. ಆಗುತ್ತದೆ. ಹಿಂದಿನ ವರ್ಷದಷ್ಟೇ ಕೊಡುವುದಾದರೆ ಒಟ್ಟು 42,000 ಕೋಟಿ ರೂ. ಒದಗಿಸಬೇಕಾಗುತ್ತದೆ. (38,000+ 4,000= 42,000). ಆದರೆ, ಜೇಟ್ಲಿ ಈಗ ಯೋಜನೆಯ ಅನುದಾನಕ್ಕೆ ಕತ್ತರಿ ಹಾಕಿದ್ದಾರೆ. ಯೋಜನೆಗಾಗಿ ಕೇವಲ 33,000 ಕೋಟಿ ರೂ. ಒದಗಿಸಲಾಗಿದೆ. ಈ ಮೊತ್ತದಲ್ಲಿ ಆಯಾ ರಾಜ್ಯಗಳ ಸಾಮರ್ಥ್ಯ ಉದ್ಯೋಗ ಬೇಡಿಕೆಗೆ ಅನುಗುಣವಾಗಿ ಅನುದಾನ ಹಂಚಿಕೆ ಮಾಡಲು ಮುಂದಾಗಿದೆ. ಹೀಗೆ ಕೇಂದ್ರ ಸರ್ಕಾರ ಯೋಜನೆಯ ಅನುದಾನದ ವಿಷಯದಲ್ಲಿ ರಾಜ್ಯಗಳ ನಡುವೆ ತಾರತಮ್ಯ ಮಾಡಲು ಮುಂದಾಗಿದೆ. ಯೋಜನೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಜಾರಿಗೆ ತಂದು ದಾಖಲೆಯನ್ನು ನಿರ್ಮಿಸಿದ ತ್ರಿಪುರಾ ರಾಜ್ಯಕ್ಕೆ 47% ಅನುದಾನ ಕಡಿತ ಮಾಡಲು ನಿರ್ಧರಿಸಿದೆ. ಕರ್ನಾಟಕಕ್ಕೆ 2014-15ನೇ ಸಾಲಿನಲ್ಲಿ 3,150 ಕೋಟಿ ರೂ. ಲಭಿಸಬೇಕಾಗಿತ್ತು. ಈ ಮೊತ್ತವನ್ನು ಹೊಸ ಸರ್ಕಾರದ ಬಜೆಟ್‌ನ ಲೆಕ್ಕಾಚಾರದಂತೆ 1,717 ಕೋಟಿ ರೂ. ಗೆ ಇಳಿಸಲಾಗಿದೆ. ಅಲ್ಲಿಗೆ, 1,433 ಕೋಟಿ ರೂ. ಖೋತಾ ಆಗಲಿದೆ. (45% ಕಡಿತ) ರಾಜ್ಯದಲ್ಲಿ ಬರಗಾಲ ವ್ಯಾಪಿಸುತ್ತಿದ್ದು ಮುಂದಿನ ದಿನಗಳಲ್ಲಿ ಉದ್ಯೋಗ ಅರಸಿ ಬರುವ ಕೆಲಸಗಾರರಿಗೆ ಉದ್ಯೋಗ ನೀಡುವುದು ಕಷ್ಟವಾಗಲಿದೆ. ಬೇಸಿಗೆಯಲ್ಲಿ ಕೂಲಿ ಕೇಳಿ ಬರುವ ಕೂಲಿಕಾರರ ಸಂಖ್ಯೆ ಸಹಜವಾಗಿ ಹೆಚ್ಚಾಗಲಿದೆ. ಅರಣ್ಯ, ಕಂದಾಯ, ಸಣ್ಣ ನೀರಾವರಿ ಮತ್ತಿತರ ಇಲಾಖೆಗಳ ಸಹಯೋಗದಲ್ಲಿ ಉದ್ಯೋಗ ಖಾತರಿ ಯೋಜನೆಯ ಅಡಿಯಲ್ಲಿ ನಾನಾ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು 2,250 ಕೋಟಿ ರೂ. ಮೊತ್ತದ ಕ್ರಿಯಾಯೋಜನೆಯನ್ನು ಪಂಚಾಯತ್ ರಾಜ್ ಇಲಾಖೆ ರೂಪಿಸಿದೆ ಎನ್ನಲಾಗಿದ್ದು ಅನುದಾನದ ಮೊತ್ತ ಏಕಾಏಕಿ ಕಡಿತವಾದರೆ ಈ ಎಲ್ಲ ಯೋಜನೆಗಳಿಗೆ ಸಂಚಕಾರ ಬರಲಿದೆ. ಆದರೆ ರಾಜ್ಯ ಸರ್ಕಾರ ಏನೂ ಮಾಡದೆ ಸುಮ್ಮನಿರುವುದು ಆಶ್ಚರ್ಯಕರವಾಗಿದೆ.



ನವೆಂಬರ್ 26 ರಂದು ದೇಶವ್ಯಾಪಿ ಪ್ರತಿಭಟನೆ

ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಒಂದು ಜನಪರವಾದ ಯೋಜನೆಯಾಗಿದೆ. ಅದರಲ್ಲಿ ಅನೇಕ ಲೋಪದೋಷಗಳು ಇರುವುದು ನಿಜ. ಯೋಜನೆಯನ್ನು ಉತ್ತಮಪಡಿಸುವ ಕೆಲಸ ಆಗಬೇಕಾಗಿದೆ. ಯೋಜನೆಯ ಆರಂಭದ ದಿನದಿಂದ ಇದುವರೆಗೆ ದೇಶದ ಅತ್ಯಂತ ಬಡವರಿಗೆ 2000 ಕೋಟಿ ಗೂ ಹೆಚ್ಚು ಉದ್ಯೋಗಗಳನ್ನು ಅದು ಒದಗಿಸಿದೆ. ಯೋಜನೆಯ ಲೋಪದೋಷಗಳನ್ನು ಹೋಗಲಾಡಿಸಿ ಇನ್ನೂ ಹೆಚ್ಚು ಜನರಿಗೆ ಉದ್ಯೋಗವನ್ನು ಒದಗಿಸಲು ಸಾಧ್ಯವಾಗುವಂತೆ ಅದನ್ನು ಆಕರ್ಷಕಗೊಳಿಸುವುದು ಅಗತ್ಯವಾಗಿದೆ. ಆದರೆ ಕೇಂದ್ರ ಬಿಜೆಪಿ ಸರ್ಕಾರ ಅದನ್ನು ನಿರ್ನಾಮ ಮಾಡಲು ಹೊರಟಿರುವುದನ್ನು ಬಲವಾಗಿ ವಿರೋಧಿಸಬೇಕಾಗಿದೆ. ನವೆಂಬರ್ 26 ರಂದು ದೇಶದ ರಾಜಧಾನಿ ದೆಹಲಿಯಲ್ಲಿ ಸಿ.ಪಿ.ಐ.(ಎಂ) ಬೃಹತ್ ಸಾಮೂಹಿಕ ಧರಣಿಯನ್ನು ಏರ್ಪಡಿಸಿದ್ದು ತ್ರಿಪುರ ಮುಖ್ಯ ಮಂತ್ರಿ ಮಾಣಿಕ್ ಸರ್ಕಾರ ಅದರ ನೇತೃತ್ವ ವಹಿಸಲಿದ್ದಾರೆ. ಅಂದು ಕರ್ನಾಟಕದಲ್ಲಿಯೂ ಜಿಲ್ಲಾ ಅಥವ ತಾಲೂಕು ಕೇಂದ್ರಗಳಲ್ಲಿ ಸಾಮೂಹಿಕ ಧರಣಿ ಏರ್ಪಡಿಸಬೇಕೆಂದು ತೀರ್ಮಾನಿಸಲಾಗಿದೆ. "ಉದ್ಯೋಗ ಖಾತರಿ ಯೋಜನೆ ಉಳಿಸಿ" ಘೋಷಣೆಯನ್ನು ಮುಂದಿಟ್ಟು ನಡೆಯುವ ಈ ಹೋರಾಟವನ್ನು ಯಶಸ್ವಿಗೊಳಿಸಬೇಕೆಂದು ಸಿ.ಪಿ.ಐ.(ಎಂ) ಕರ್ನಾಟಕ ರಾಜ್ಯ ಸಮಿತಿ ಮನವಿ ಮಾಡಿದೆ.



ಸಾಮೂಹಿಕ ಸಂಘಟನೆಗಳ ಕರೆ

ಆಗಸ್ಟ್ 30, 2014 ರಂದು ನವದೆಹಲಿಯಲ್ಲಿ ನಡೆದ ಸಿ.ಐ.ಟಿ.ಯು., ಎ.ಐ.ಎ.ಡಬ್ಲ್ಯೂ.ಯು., ಎಐಡಿಡಬ್ಲ್ಯೂಎ ಮತ್ತು ಎಐಕೆಎಸ್ ಸಂಘಟನೆಗಳ ಕೇಂದ್ರ ಪದಾಧಿಕಾರಿಗಳ ಸಭೆಯು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಮೊಟಕುಗೊಳಿಸುವ ಕೇಂದ್ರ ಬಿಜೆಪಿ ಸರ್ಕಾರದ ಕ್ರಮಕ್ಕೆ ತೀವ್ರ ಆತಂಕ ಮತ್ತು ಆಕ್ಷೇಪವನ್ನು ವ್ಯಕ್ತಪಡಿಸಿತು. ಎಲ್ಲ ಗ್ರಾಮೀಣ ಬಡವರು ಮತ್ತು ಈ ಯೋಜನೆಯ ಅಡಿಯಲ್ಲಿ ಉದ್ಯೋಗವನ್ನು ಬಯಸುವವರೆಲ್ಲರೂ ಒಂದಾಗಿ ಬೃಹತ್ ಆಂದೋಲನವೊಂದನ್ನು ಆರಂಭಿಸಬೇಕೆಂದು ಕರೆ ನೀಡಿದ ಈ ಸಭೆಯು ಉದ್ಯೋಗದ ಹಕ್ಕಿಗೆ ಕಾನೂನು ಸ್ವರೂಪವನ್ನು ನೀಡಿರುವ ಈ ಏಕೈಕ ಯೋಜನೆಯನ್ನು ಉಳಿಸಿ ಬಲಪಡಿಸಲು ಎಲ್ಲಾ ಪ್ರಗತಿಪರ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಈ ಆಂದೋಲನವನ್ನು ಬೆಂಬಲಿಸಬೇಕೆಂದು ಮನವಿ ಮಾಡಿತು.

ಸಭೆಯು ಈ ಕೆಳಗಿನ ಬೇಡಿಕೆಗಳ ಪಟ್ಟಿಯನ್ನು ಅಂಗೀಕರಿಸಿತು.

(1) ಕೇಂದ್ರ ಸರ್ಕಾರವು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ವರ್ಷದಲ್ಲಿ 200 ದಿನಗಳ ಕೆಲಸವನ್ನು ದಿನಕ್ಕೆ ರೂ. 300 ರ ದರದಲ್ಲಿ ವೇತನ ನೀಡಲು ಸಾಧ್ಯವಾಗುವಂತೆ ಅನುದಾನವನ್ನು ಹೆಚ್ಚಿಸಬೇಕು ಮತ್ತು ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು.

(2) ಕೆಲಸ ಕೋರಿ ಬರುವ ಎಲ್ಲರಿಗೂ ಉದ್ಯೋಗ ಚೀಟಿಯನ್ನು ಒದಗಿಸಬೇಕು. 15 ದಿನಗಳವರೆಗೂ ಉದ್ಯೋಗ ಚೀಟಿ ವಿತರಿಸಲು ವಿಫಲವಾದರೆ ನಿರುದ್ಯೋಗ ಪರಿಹಾರ ನೀಡಬೇಕು.

(3) ಕಾಯ್ದೆಯಲ್ಲಿ ಕಡ್ಡಾಯಗೊಳಿಸಿದಂತೆ ಉದ್ಯೋಗ ಚೀಟಿ ಹೊಂದಿದವರೆಲ್ಲರಿಗೂ ವರ್ಷದಲ್ಲಿ ಕನಿಷ್ಠ 100 ದಿನಗಳ ಕೆಲಸ ನೀಡಬೇಕು.

(4) ಎಲ್ಲಾ ರಾಜ್ಯಗಳಲ್ಲಿ ಕನಿಷ್ಠ ವೇತನವನ್ನು ಜಾರಿಗೊಳಿಸಬೇಕು. ನಿಗದಿತ ಅವಧಿಯೊಳಗೆ ವೇತನ ಪಾವತಿ ಮಾಡಲು ವಿಫಲರಾದವರೆಲ್ಲರ ವಿರುದ್ಧ ಕಾನೂನು ಕ್ರಮ ಜರಗಿಸಬೇಕು.

(5) ಉದ್ಯೋಗದ ಹಕ್ಕನ್ನು ನಗರ ಪ್ರದೇಶಗಳಿಗೂ ವಿಸ್ತರಿಸ ಬೇಕು.

(6) ಯೋಜನೆಯ ಸಮರ್ಪಕ ಅನುಷ್ಠಾನ ಮತ್ತು ಭ್ರಷ್ಟಾಚಾರವನ್ನು ತಡೆಗಟ್ಟುವುದರಲ್ಲಿ ಗ್ರಾಮ ಸಭೆಗಳ ಪಾತ್ರವನ್ನು ಬಲಪಡಿಸಬೇಕು.

ತೀರ್ಥಹಳ್ಳಿಯ ಪ್ರೌಢಶಾಲಾ ವಿದ್ಯಾರ್ಥಿನಿ ನಂದಿತಾ ಸಾವು ಒಂದು ಮನಸ್ಸು ಕಲಕುವ ದುರಂತ. ಮುಗ್ಧ ಹೆಣ್ಣಿನ ಹೆಣವನ್ನು ಬೀದಿಯಲ್ಲಿಟ್ಟುಕೊಂಡು ಇಲ್ಲಿ ಕೆಲವರು ಸೃಷ್ಟಿಸಲು ಹೊರಟಿದ್ದ ಪರಿಸ್ಥಿತಿ ಊಹಿಸಿಕೊಳ್ಳಲು ಸಹ ಭೀಕರವಾದುದು. ಈ ವಿಷಯದಲ್ಲಿ ಎದ್ದ ವಿವಾದ ನಡೆದ ಕೋಮುವಾದಿ ಪ್ರಚಾರಗಳು ಗಲಭೆಗಳು ನಮ್ಮ ರಾಜಕಾರಣವು ತಲುಪುತ್ತಿರುವ ಅಧೋಗತಿ ಮತ್ತು ಅದು ಉಂಟುಮಾಡುವ ಗಂಭೀರ ಅಪಾಯಕ್ಕೆ ಸಾಕ್ಷಿಯಾಗಿದೆ.

ಇಡೀ ಸಮಾಜ ಒಟ್ಟಾಗಿ 'ನಂದಿತಾ' ಸಾವಿನಂತಹ ಪ್ರಕರಣಗಳ ಪುನರಾವರ್ತನೆಯನ್ನು ತಪ್ಪಿಸುವುದು ಹೇಗೆ? ಹದಿವಯಸ್ಸಿನ ಹೆಣ್ಣು ಮಕ್ಕಳನ್ನು-ಯುವಜನರನ್ನು, ಕುಟುಂಬದ ಹಿರಿಯರನ್ನು ಇದಕ್ಕೆ ಪೂರಕವಾಗಿ ಸಿದ್ದಗೊಳಿಸುವುದು ಹೇಗೆ? ಎಂಬ ಪ್ರಶ್ನೆಯನ್ನು ಹಾಕಿಕೊಂಡು ವಿವೇಕದಿಂದ ವರ್ತಿಸಬೇಕಾಗಿದ್ದ ಸಂದರ್ಭದಲ್ಲಿ ಇಲ್ಲಿ ನಡೆದದ್ದೇ ಬೇರೆ. ಹಲವು ರಾಜಕಾರಣಿಗಳು, ದೇಶಪ್ರೇಮಿಗಳೆಂದು ಕರೆದುಕೊಳ್ಳುವ ಸಂಘಟನೆಗಳ ಮುಖಂಡರು ಮಾಡಿರುವುದೇನು? ಅವರ ನೈಜ ಉದ್ದೇಶ ಎಂದು ಇಲ್ಲಿ ನೋಡಬಹುದು. ಕೋಮುದ್ವೇಷ-ಕೋಮುವಾದಿ ಪೂರ್ವಾಗ್ರಹಗಳು ಹೇಗೆ ಒಂದು ಪ್ರಕರಣಕ್ಕೆ ವಿಕೃತ ಚಿತ್ರಣವನ್ನು ಕೊಡುತ್ತಾ ಸತ್ಯವನ್ನು ಮಸುಕುಗೊಳಿಸುತ್ತಾ ಹೋಗುತ್ತದೆ... ಆ ಮೂಲಕ ನಮ್ಮ ಸಾಮಾಜಿಕ ವಾತಾವರಣವನ್ನು ವಿಷಮಯಗೊಳಿಸುತ್ತಾ ಹೋಗುತ್ತದೆ ಎನುವುದಕ್ಕೆ ಈ ಪ್ರಕರಣ ಸಾಕ್ಷಿಯಾಗಿದೆ.

ನಂದಿತಾ ಸಾವಿನ ನಂತರ ವಿವಾದ ಭುಗಿಲೆದ್ದಂತೆ ಸಿಪಿಐ(ಎಂ) ರಾಜ್ಯಸಮಿತಿ ಸದಸ್ಯರು-ಉಡುಪಿ ಜಿಲ್ಲೆಯ ಮುಖಂಡರೂ ಆದ ಕಾಂ. ಬಾಲಕೃಷ್ಣ ಶೆಟ್ಟಿಯವರು ನವೆಂಬರ್ 5, 2014 ರಂದು ತೀರ್ಥಹಳ್ಳಿಗೆ ಪ್ರತ್ಯಕ್ಷ ಭೇಟಿ ನೀಡಿ ಕೊಟ್ಟ ವರದಿಯನ್ನು ಹಾಗೆಯೇ ಇಲ್ಲಿ ಪ್ರಕಟಿಸುತ್ತಿದ್ದೇವೆ. ಸಿಪಿಐ(ಎಂ) ವರದಿ ಬಂದಾಗ ಸಿಓಡಿಯು ಇನ್ನೂ ವರದಿ ಕೊಟ್ಟಿರಲಿಲ್ಲ. ಇದೀಗ ಸಿಓಡಿ ವರದಿಯ ಅಂಶಗಳು ಸಹ ಬಯಲಾಗಿವೆ. ಅವು ಹೇಗೆ ಒಂದಕ್ಕೊಂದು ತಾಳೆ ಆಗುತ್ತವೆ ನೋಡಿ. (ಪ್ರಜಾವಾಣಿಯಲ್ಲಿ ಪ್ರಕಟವಾದ ಸಿಓಡಿ ವರದಿಯ ವಿವರಗಳಿಗಾಗಿ ಪುಟ 11 ರ ಬಾಕ್ಸ್ ನೋಡಿ.) ವಸ್ತುನಿಷ್ಠತೆ ವಿವೇಕ, ನ್ಯಾಯಪರತೆ, ಸಮತೋಲನ ಚಿತ್ತ ಇದ್ದರೆ ಕಾಣುವ ಸತ್ಯ ಒಂದೇ ಅಲ್ಲವೇ? ರಾಷ್ಟ್ರವ್ಯಾಪಿಯಾಗಿ ಬಿಜೆಪಿ ಮತ್ತು ಸಂಘ ಪರಿವಾರವು ಲವ್ ಜಿಹಾದ್ ಹೆಸರಿನಲ್ಲಿ ನಡೆಸುತ್ತಿರುವ ವಿಷಪ್ರಚಾರದ ಛಾಯೆ ಈ ಪ್ರಕರಣದಲ್ಲಿಯೂ ಈ ಪ್ರಕರಣದಲ್ಲಿ ಕಂಡರೆ ಆಶ್ಚರ್ಯವೇನೂ ಇಲ್ಲ.

ತೀರ್ಥಹಳ್ಳಿ : ನಂದಿತಾ ದುರಂತ ಸಾವಿನಲ್ಲೂ
ರಾಜಕೀಯ ಲಾಭಕ್ಕೆ ಹವಣಿಸುತ್ತಿರುವ ಕೋಮುವಾದಿಗಳು

ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿಯ 14 ವರ್ಷದ ಮುಗ್ಧ ಬಾಲಕಿ, ಪ್ರೌಢಶಾಲಾ ವಿದ್ಯಾರ್ಥಿನಿ ನಂದಿತಾ ಸಾವು ಯಾವ ರೀತಿಯಿಂದ ನೋಡಿದರೂ ಮನಸ್ಸಿಗೆ ತೀರಾ ನೋವುಂಟು ಮಾಡುವ ಮಹಾ ಅನ್ಯಾಯ. ಜೀವನ ಎಂದರೇನು? ಸಮಾಜ ಎಂದರೇನು? ಎಂಬುದನ್ನು ಅರಿಯುವ ಮುನ್ನವೇ ಆಕೆ ಜೀವನ ಮುಗಿದು ಹೋಗಿದೆ.




"ತಂದೆ-ತಾಯಿ ತುಂಬಾ ಒಳ್ಳೆಯವರು, 'ನಾನು ಅವರಿಗೆ ಒಳ್ಳೆ ಹೆಸರು' ತರಲು ಸಾಧ್ಯವಾಗಲಿಲ್ಲ. 'ನೀನಾದರೂ ಅವರಿಗೆ ಒಳ್ಳೆಯ ಹೆಸರು ತರುವ ಹಾಗೆ ಓದು." ಎಂದು ತನ್ನ ಪುಟ್ಟ ತಂಗಿಗೆ ಬುದ್ಧಿವಾದ ಹೇಳಿರುವಂತೆ ಇರುವ ಪತ್ರವೊಂದು ನಂದಿತಾಳ ಶಾಲಾ ಬ್ಯಾಗ್‌ನಲ್ಲಿ ಸಿಕ್ಕಿದೆ. ಆದರೆ ನಂದಿತಾಳ ತಂದೆ ಅದು ನಂದಿತಾಳ ಕೈ ಬರಹ ಅಲ್ಲ ಎಂದು ಹೇಳುತ್ತಿದ್ದಾರೆ. ಆಕಸ್ಮಿಕವಾಗಿ ಅದು ನಂದಿತಾಳ ಬರಹವೇ ಆಗಿದ್ದರೂ ಆಕೆಯಿಂದ ಬಲವಂತವಾಗಿ ಪತ್ರವನ್ನು ಬರೆಸಿರುವ ಸಾಧ್ಯತೆ ಇದೆ ಎಂದೂ, ಆಕೆ ಕೆಂಪು ಇಂಕಿನಲ್ಲಿ ಸಾಮಾನ್ಯವಾಗಿ ಬರೆಯುವುದಿಲ್ಲ ಎಂದು ಹೇಳುತ್ತಿದ್ದಾರೆ.

ನಂದಿತಾ ಸಾವಿನ ವಿಷಯವಾಗಿ ಮಾಧ್ಯಮಗಳಲ್ಲಿ ನಾನಾ ಬಗೆಯ ಆರೋಪಗಳು ಕೇಳಿಬಂದವು. ಒಂದು ನಿರ್ದಿಷ್ಟ ಸಮುದಾಯದ ವ್ಯಕ್ತಿಗಳನ್ನು ಹೊಣೆಮಾಡುವ ಕೋಮುವಾದಿ ಪ್ರಚಾರಗಳು, ಪ್ರತಿಭಟನೆಗಳು ನಡೆದು ಉದ್ವಿಗ್ನ ವಾತಾವರಣವನ್ನು ಸೃಷ್ಟಿಸಲಾಯಿತು. ಮುಸ್ಲಿಂ ಯುವಕರ ಗುಂಪೊಂದು ನಂದಿತಾಳನ್ನು ಅಪಹರಣ ಮಾಡಿ ಗುಡ್ಡವೊಂದಕ್ಕೆ ಕರೆದೊಯ್ದಿದ್ದಾರೆ. ಅಲ್ಲಿ ಮತ್ತು ಬರಿಸುವ ಮಾತ್ರೆ ನೀಡಿ ಅತ್ಯಾಚಾರಕ್ಕೆ ಯತ್ನಿಸಿದ್ದಾರೆ. ಗುಡ್ಡದಲ್ಲಿ ಕೆಲವು ಕೂಲಿ ಕಾರ್ಮಿಕ ಮಹಿಳೆಯರು ಅದನ್ನು ಕಂಡು ಮನೆಗೆ ಸುದ್ದಿ ಮುಟ್ಟಿಸಿದ್ದಾರೆ. ನಂತರ ನಂದಿತಾಳಿಗೆ ಚಿಕಿತ್ಸೆ ಕೊಡಿಸಿದರೂ ಆಕೆಯನ್ನು ಉಳಿಸಿಕೊಳ್ಳಲಾಗಲಿಲ್ಲ...ಇದು ನಂದಿತಾಳ ತಂದೆ ಕೊಟ್ಟ ದೂರು ಮತ್ತು ಹಲವು ವದಂತಿಗಳು ಮತ್ತು ಪ್ರಚಾರದ ಸಾರಾಂಶವಾಗಿತ್ತು.

ಈ ಹಿನ್ನೆಲೆಯಲ್ಲಿ ನಾನು ಪ್ರಕರಣದ ಬಗೆಗೆ ಉಡುಪಿ ಜಿಲ್ಲೆಗೆ ಹೊಂದಿಕೊಂಡಿರುವ ತೀರ್ಥಹಳ್ಳಿಯ ನ್ಯಾಯಪರವಾಗಿ ಯೋಚಿಸುವ ಮಿತ್ರರಿಗೆ ಫೋನ್ ಮಾಡಿದಾಗ ತಿಳಿದ ಪ್ರಕರಣದ ಮುಖ ಬೇರೆಯೇ ಆಗಿತ್ತು. ಆದ-ರೆ ಪ್ರತಿದಿನ ಪತ್ರಿಕೆಗಳಲ್ಲಿ ದಿನಕ್ಕೊಂದು ಬಗೆಯ ಸುದ್ದಿ ಪ್ರಕಟವಾಗುತ್ತಿದ್ದವು. ಆದ್ದರಿಂದ ಖುದ್ದಾಗಿ ಭೇಟಿಯಾಗಿ ಮಾಹಿತಿ ಸಂಗ್ರಹಿಸಬೇಕೆಂದು ಭೇಟಿ ನೀಡಬೇಕಾಯಿತು. ಭೇಟಿ ನೀಡಿದ್ದು ನವೆಂಬರ್ 5, 2014, ಬುಧವಾರದಂದು.

ಬಾಳೇ ಬೈಲು ನಂದಿತಾಳ ಊರು. ತೀರ್ಥಹಳ್ಳಿಯಿಂದ ಕೇವಲ 1.5 ಕಿ.ಮೀ ದೂರ. ತೀರ್ಥಹಳ್ಳಿ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲೇ ಬರುತ್ತದೆ. ನಂದಿತಾ ಅಕ್ಟೋಬರ್ 29 ರಂದು ಬೆಳಿಗ್ಗೆ 9 ಗಂಟೆಗೆ ಶಾಲೆಗೆ ಹೋಗುವಾಗ ಆಕೆಯ ಸೋದರತ್ತೆಯ ಮಗ ವಿಶಾಲ್ ಜತೆ ಹೋಗಿದ್ದಾಳೆ. ಆದರೆ ಸ್ವಲ್ಪ ದೂರ ಹೋಗುತ್ತಲೇ 'ನೀನು ಮುಂದೆ ಹೋಗು, ನಾನು ಆ ಮೇಲೆ ಬರುತ್ತೇನೆ.' ಎಂದು ಹೇಳಿದ್ದಾಳೆ. ಅಲ್ಲಿಂದ ಆಕೆಯ 'ಅಪಹರಣ' ನಡೆದಿದೆ ಎಂದು ಹೇಳಲಾಗುತ್ತಿದೆ.





ನಾನು ಸಂದರ್ಶಿಸಿದ ಸ್ಥಳೀಯರೊಬ್ಬರ ಪ್ರಕಾರ ಸುಮಾರು 11.30ರ ಹೊತ್ತಿಗೆ ತೀರ್ಥಹಳ್ಳಿಯ ಮುಖ್ಯ ಬಸ್ ನಿಲ್ದಾಣದ ಬಳಿಯಿಂದ ಕೆಂಪು ಮಾರುತಿ ಒಮ್ನಿ ಕಾರಿನಲ್ಲಿ ಮುಸ್ಲಿಂ ಯುವಕನೊಬ್ಬ ಕರೆದು-ಕೊಂಡು ಹೋಗಿದ್ದನಂತೆ. ಒಂದು ವೇಳೆ ಅದು ಅಪಹರಣವಾಗಿದ್ದರೆ, ಆಕೆ ಕೂಗಿಕೊಳ್ಳುತ್ತಿದ್ದಳು. ಜನ ನಿಬಿಡ ಪ್ರದೇಶದ ತೀರ್ಥಹಳ್ಳಿಯ ಜನ ಸುಮ್ಮನೆ ಬಿಡುತ್ತಿರಲಿಲ್ಲ.

ಅವರಿಬ್ಬರೂ ಆನಂದಗಿರಿ ಬೆಟ್ಟಕ್ಕೆ ಹೋಗುವಾಗ ಇನ್ನಿಬ್ಬರು ಯುವಕರು ಸೇರಿಕೊಂಡಿದ್ದಾರೆ ಎಂಬ ಸುದ್ದಿ ಇದೆ. ಆದರೆ ಬೆಟ್ಟದಲ್ಲಿ ಸೊಪ್ಪು ತರಲು ಹೋದ ಸ್ಥಳೀಯ ಮಹಿಳೆಯರು ನಂದಿತಾ ಮುಸ್ಲಿಂ ಹುಡುಗನ ಜತೆ ಇರುವುದು ನೋಡಿದ್ದು ನಿಜ. ಅವರು ಬಂದು ನಂದಿತಾಳ ಮನೆಯಲ್ಲಿ ತಿಳಿಸಿದರೇ ಅಥವಾ ಗಾಬರಿಗೊಂಡ ನಂದಿತಾಳೇ ಮನೆಗೆ ಬಂದು ದೂರು ನೀಡಿದಳೇ ಎನ್ನುವುದು ಇನ್ನೂ ನಿಗೂಢ. ಆದರೆ 29ನೇ ತಾರೀಕಿನಂದು ಪೋಲೀಸರಿಗೆ ಯಾವುದೇ ದೂರು ನೀಡಿಲ್ಲ. ಮಾತ್ರವಲ್ಲ ಅಂದು ಸಂಜೆ ನಂದಿತಾ ಮನೆಯಲ್ಲಿ ಎಂದಿನಂತೆ ಆಟವಾಡುತ್ತಿದ್ದಳು ಎಂಬುದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

ಈ ಮಧ್ಯೆ ತೀರ್ಥಹಳ್ಳಿಯ ಮುಖ್ಯ ಬಸ್ ನಿಲ್ದಾಣದಲ್ಲಿ ಹಾಕಲಾಗಿರುವ ಸಿ.ಸಿ. ಟಿ.ವಿ. ದಾಖಲೆಯಲ್ಲಿ ಇಂತಹ ಅಪಹರಣಕ್ಕೆ ಬಳಸಲಾಗಿದೆ ಎಂದು ಹೇಳಲಾದ ಕೆಂಪು ಕಾರಿನ ವಾಹನದ ಓಡಾಟವು ದಾಖಲಾಗಿಲ್ಲ ಎಂಬ ವರದಿ ಬಂದಿದೆ. ಇವೆಲ್ಲ ವಿಷಯಗಳಲ್ಲಿ ಸತ್ಯ ಏನೆಂದು ಸರಿಯಾದ ತನಿಖೆಯ ಮೂಲಕವೇ ಕಂಡುಕೊಳ್ಳಬೇಕು.

ನಂದಿತಾಳ ತಂದೆ ಕೃಷ್ಣ ಪ್ರಜಾವಾಣಿಗೆ (05/11/14) ನೀಡಿದ ಸಂದರ್ಶನದ ಪ್ರಕಾರವೇ ಮಧ್ಯರಾತ್ರಿ ನಂತರ ಆಕೆಗೆ ವಾಂತಿ ಶುರುವಾಯಿತು. ಬೆಳಗಿನ ಜಾವ (ಅಕ್ಟೋಬರ್ 30) ತೀರ್ಥಹಳ್ಳಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿಂದ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ, ನಂತರ ತೀರಾ ಬೆಳಿಗ್ಗೆ ಮಣಿಪಾಲದ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಲಾಗಿತ್ತು. ಮಣಿಪಾಲ ಆಸ್ಪತ್ರೆ ಬಿಡುಗಡೆ ಮಾಡಿದ ವರದಿಯ ಪ್ರಕಾರ ಅದೇ ದಿನ ಮಧ್ಯಾಹ್ನ 3.30ರ ಹೊತ್ತಿಗೆ ನಂದಿತಾ ಕೊನೆಯುಸಿರೆಳೆದಿದ್ದಾಳೆ. ಈ ನಡುವೆ ಬಾಲಕಿಗೆ ಎರಡು ಬಾರಿ ಹೃದಯಾಘಾತವಾಗಿದೆ ಎಂದು ಆಸ್ಪತ್ರೆಯ ವರದಿಗಳು ಹೇಳುತ್ತವೆ.

ಸಹಜ ಆಕ್ರೋಶ

ನಂದಿತಾಳ ಸಾವಿಗೆ ತೀರ್ಥಹಳ್ಳಿಯ ಜನತೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅದು ಸಹಜ ಹಾಗೂ ಅಗತ್ಯ ಕೂಡಾ. ಈ ಘಟನೆಯಲ್ಲಿ ಒಬ್ಬನನ್ನು ಬಂಧಿಸಲಾಗಿದೆ. ವಿಚಾರಣೆ ನಡೆ-ಯುತ್ತಿದೆ. ಸಿಐಡಿ ತನಿಖೆಗೆ ಒಪ್ಪಿಸಲಾಗಿದೆ.

ಆದರೆ ಘಟನೆಯ ಹೆಸರಿನಲ್ಲಿ ಒಂದು ಕೋಮಿನ ವಿರುದ್ಧ ಪ್ರತಿಭಟನೆ ನಡೆಸುವುದು, ಕಲ್ಲು ತೂರಾಟ ನಡೆಸುವುದು ಇತ್ಯಾದಿ ಕೃತ್ಯಗಳು ಸಂಘ ಪರಿವಾರದಂತಹವರಿಂದ ಮಾತ್ರ ಸಾಧ್ಯ. ಬಿಜೆಪಿ ಇದಕ್ಕೆ ಸಾಥ್ ನೀಡುತ್ತಿದೆ ಎಂದು ಬೇರೆ ಹೇಳಬೇಕಾಗಿಲ್ಲ.

ಅರಗ ಜ್ಞಾನೇಂದ್ರ 'ನೇತೃತ್ವ'

ನವೆಂಬರ್ 1 ರಂದು ನಡೆದ ಪ್ರತಿಭಟನಾ ಮೆರವಣಿಗೆಯ ನೇತೃತ್ವವನ್ನು ಮಾಜಿ ಶಾಸಕರಾದ ಬಿಜೆಪಿ ಮುಖಂಡ ಅರಗ ಜ್ಞಾನೇಂದ್ರ ವಹಿಸಿದ್ದರು. ಈ ಸಂದರ್ಭದಲ್ಲಿ ಮೆರವಣಿಗೆ ಮಸೀದಿಯ ಎದುರಲ್ಲೇ ಹೋಗಬೇಕೆಂದು ಪಟ್ಟು ಹಿಡಿದುದು ಮಾತ್ರವಲ್ಲದೆ, ಕಲ್ಲು ತೂರಾಟವೂ ನಡೆಯಿತು.

ಇದಲ್ಲದೆ ಮುಸ್ಲಿಂ ಸಮುದಾಯಕ್ಕೆ ಸೇರಿದ ನ್ಯಾಶನಲ್ ಗೋಲ್ಡ್ ಪ್ಯಾಲೇಸ್, ನ್ಯಾಶನಲ್ ಸೂಪರ್ ಬಜಾರ್, ನ್ಯಾಶನಲ್ ಇಂಡೇನ್ ಗ್ಯಾಸ್, ಅಜಾದ್ ಪ್ಲೈವುಡ್ ಎಂಬ ಅಂಗಡಿಗಳ ಮೇಲೂ ಕಲ್ಲು ತೂರಾಟ ನಡೆಯಿತು.

ಇದಲ್ಲದೇ 'ಜೈ ಶ್ರೀರಾಮ' ಎಂಬ ಫೇಸ್‌ಬುಕ್‌ನಿಂದ 'ಬಾಯ್ಕಾಟ್ ನ್ಯಾಶನಲ್ ಗೋಲ್ಡ್ ಪ್ಯಾಲೇಸ್, ನ್ಯಾಶನಲ್ ಸೂಪರ್ ಬಜಾರ್, ನ್ಯಾಶನಲ್ ಇಂಡೇನ್ ಗ್ಯಾಸ್' ಎಂಬ ಕರೆಯನ್ನು ನೀಡಲಾಗಿದೆ. ಆದ್ದರಿಂದ ಈ 'ಚೆಡ್ಡಿ'ಗಳ ಉದ್ದೇಶ ನಂದಿತಾಳ ಸಾವಿಗೆ ➡

ಬಾಲಕೃಷ್ಣ ಶೆಟ್ಟಿ.
ನವೆಂಬರ್, 6, 2014.

→ ಕಾರಣರಾದವರನ್ನು ಶಿಕ್ಷಿಸುವುದಲ್ಲ. ಬದಲಾಗಿ ಕೋಮು ಭಾವನೆಯನ್ನು ಉದ್ರೇಕಿಸಿ ರಾಜಕೀಯ ಲಾಭಗಳಿಸಿಕೊಳ್ಳುವುದು ಎಂಬುದು ಸ್ಪಷ್ಟವಾಗುತ್ತದೆ. ವ್ಯಾಪಾರ ಉದ್ದಿಮೆಗಳಲ್ಲಿ ತಮಗೆ ಸ್ಪರ್ಧೆ ಒಡ್ಡುತ್ತಿರುವ ಮುಸ್ಲಿಂ ಅಲ್ಪಸಂಖ್ಯಾತರನ್ನು ಕಾನೂನುಬಾಹಿರ ಮಾರ್ಗಗಳಲ್ಲಿ ಹಣಿಯುವ ವ್ಯಾಪಾರಿ ಶಕ್ತಿಗಳ ತಂತ್ರವೂ ಗಲಭೆಗಳ ಹಿಂದೆ ಇದ್ದಂತಿದೆ.

ಶಾಸಕರಾಗುವ ಪೂರ್ವದಲ್ಲಿಯೂ ಕೋಮುಗಲಭೆ

2008 ಮತ್ತು 2013ರ ಅಸೆಂಬ್ಲಿ ಚುನಾವಣೆಯಲ್ಲಿ ಗೆದ್ದು ಈಗ ಸಚಿವರಾಗಿರುವ ಕಿಮ್ಮನೇ ರತ್ನಾಕರ್ ಕಾಂಗ್ರೆಸ್‌ನಿಂದ ಆಯ್ಕೆಯಾಗಿದ್ದಾರೆ. ಅದಕ್ಕೂ ಮೊದಲು 1994, 1999 ಮತ್ತು 2004ರಲ್ಲಿ ಅರಗ ಜ್ಞಾನೇಂದ್ರ ಶಾಸಕರಾಗಿದ್ದರು. 1994ಕ್ಕಿಂತ ಮೊದಲು ಡಿ.ಬಿ. ಚಂದ್ರೇಗೌಡ ಸತತ 3 ಬಾರಿ ಜನತಾದಳದಿಂದ ಆಯ್ಕೆಯಾಗಿದ್ದರು. ಆ ಸಂದರ್ಭದಲ್ಲಿ ಕೋಮು ಗಲಭೆಯನ್ನು ಸೃಷ್ಟಿಸಿಯೇ ಅರಗ ಜ್ಞಾನೇಂದ್ರ ಶಾಸಕರಾಗಿ ಆಯ್ಕೆಯಾಗಿದ್ದರು ಎನ್ನುವುದು ಗಮನಾರ್ಹವಾದ ಸಂಗತಿ. ತೀರ್ಥಹಳ್ಳಿಯ ರಾಮೇಶ್ವರ ದೇವಸ್ಥಾನದ ನಂದಿ ವಿಗ್ರಹ ಧ್ವಂಸ ಮಾಡಿದ್ದಾರೆ ಎಂದು ಮುಸ್ಲಿಮರ ಮೇಲೆ ಗೂಬೆ ಕೂರಿಸಿ ಮುಸ್ಲಿಮರ ಅಂಗಡಿಗಳ ಮೇಲೆ ಧಾಳಿನಡೆಸಲಾಗಿತ್ತು. ಅದರಲ್ಲಿ ಇಸ್ಮಾಯಿಲ್ ಎಂಬುವರ ಗಡಿಯಾರ ಅಂಗಡಿಯನ್ನು ಧ್ವಂಸಗೊಳಿಸಿ ವಾಚುಗಳನ್ನು ಕಿಡಿಗೇಡಿಗಳು ದೋಚಿದ್ದರು.

ರಾಜಕೀಯ ಲಾಭ ಗೋರಿಕೊಳ್ಳುವ ಹುನ್ನಾರ

ಶಿವಮೊಗ್ಗ ಜಿಲ್ಲೆಯಲ್ಲಿ ಬಿಜೆಪಿ ಪ್ರಾಬಲ್ಯ ಕಡಿಮೆಯಾಗುತ್ತಿದೆ. ಮೋದಿ ಪ್ರಚಾರದ ಹಿನ್ನೆಲೆಯಲ್ಲಿ ಯಡಿಯೂರಪ್ಪನವರು ಲೋಕಸಭೆಗೆ ಆಯ್ಕೆಯಾಗಿದ್ದರೂ ನಂತರ ನಡೆದ ಶಿಕಾರಿಪುರ ಅಸೆಂಬ್ಲಿ ಉಪ ಚುನಾವಣೆಯಲ್ಲಿ ಯಡಿಯೂರಪ್ಪನವರ ಮಗ ರಾಘವೇಂದ್ರ ಗೆದ್ದಿದ್ದು ತೀರಾ ಕಡಿಮೆ ಅಂತರದಲ್ಲಿ. ಜಿಲ್ಲೆಯ 7 ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಕೈಯಲ್ಲಿರುವುದು ಶಿಕಾರಿಪುರ ಮಾತ್ರ. ಹಿಂದೆ ಬಂಗಾರಪ್ಪನವರೊಂದಿಗೆ ಬಿಜೆಪಿಯ ಹಿಂದೆ ಹೋಗಿದ್ದ ಈಡಿಗ ಸಮುದಾಯದ ಮುಖಂಡರು ಒಬ್ಬೊಬ್ಬರಾಗಿ ಹಿಂದೆ ಸರಿಯುತ್ತಿದ್ದಾರೆ. ಅಥವಾ ಮೂಲೆ ಗುಂಪಾಗಿದ್ದಾರೆ. ತನ್ನದೇ ಲೋಕಸಭಾ ಕ್ಷೇತ್ರವಾದ ಬೈಂದೂರಿನ ವಿಧಾನ ಸಭಾ ಕ್ಷೇತ್ರದ ಶಿರೂರು ಎಂಬ ಪ್ರದೇಶದಲ್ಲಿ ಕಾಲೇಜು ವಿದ್ಯಾರ್ಥಿನಿ ರತ್ನಾ ಕೊಠಾರಿ ನಿಗೂಢ ಸಾವನ್ನಪ್ಪಿದ್ದಾಗ (ಅತ್ಯಾಚಾರ ಮತ್ತು ಕೊಲೆ ಎಂಬ ಸಂಶಯ) ಒಮ್ಮೆಯೂ ಭೇಟಿ ನೀಡದ ಯಡಿಯೂರಪ್ಪನವರು ನಂದಿತಾ ನಿಗೂಢ ಸಾವಿನ ಪ್ರಕರಣದಲ್ಲಿ ಮುಸ್ಲಿಂ ಯುವಕನೊಬ್ಬನಿದ್ದಾನೆ ಎಂಬ ಕಾರಣಕ್ಕೆ ಶೋಭಾ ಕರಂದ್ಲಾಜೆಯೊಂದಿಗೆ ನಂದಿತಾಳ ಮನೆಗೆ ಭೇಟಿ ನೀಡಿ 'ಸಾಂತ್ವನ' ಹೇಳಿದ್ದಾರೆ. ಶಿವಮೊಗ್ಗ ಜಿಲ್ಲೆಯ ವಿವಿಧ ತಾಲೂಕು, ಹೋಬಳಿಗಳಲ್ಲಿ ಬಂದ್‌ಗಳನ್ನು ನಡೆಸಿರುತ್ತಾರೆ. ಪಕ್ಕದ ಉಡುಪಿ, ದ.ಕ. ಜಿಲ್ಲೆಗಳಿಗೂ ಪ್ರತಿಭಟನೆಯ ಕಾವು ಹಬ್ಬಿದೆ.

ಅನ್ಯಾಯ ಎಲ್ಲೇ ಅಗಲಿ ಜನತೆ ಪ್ರತಿಭಟನೆ ನಡೆಸಬೇಕಾದುದು ಅಗತ್ಯ. ಆದರೆ ಆರೋಪಿ 'ಮುಸ್ಲಿಂ' ಸಮುದಾಯಕ್ಕೆ ಸೇರಿದ್ದರೆ ಪ್ರತಿಭಟನೆಯ ಸ್ವರೂಪ ಒಂದು ವಿಧ. ಆರೋಪಿ 'ಹಿಂದೂ' ಸಮುದಾಯಕ್ಕೆ ಸೇರಿದ್ದರೆ ಪ್ರತಿಭಟನೆಯ ವಿಧಾನವೇ ಬೇರೆ. ಇದು ರಾಜಕೀಯ ಬಲ ಹೆಚ್ಚಿಸಿಕೊಳ್ಳುವ ಕುಕೃತ್ಯವಲ್ಲದೆ ಇನ್ನೇನು?

ಈಡಿಗ ಸಮುದಾಯವನ್ನು ಸೆಳೆಯುವ ಕುತಂತ್ರ

ನಂದಿತಾ ಈಡಿಗ ಸಮುದಾಯಕ್ಕೆ ಸೇರಿದವಳು. ಮೇಲೆ ಹೇಳಿದಂತೆ ಈಡಿಗ ಸಮುದಾಯದ ಮುಖಂಡರು ಬಿಜೆಪಿಯಿಂದ ದೂರ ಹೋಗಿದ್ದಾರೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಗೆದ್ದಿದ್ದರೂ ಈಡಿಗ ಸಮುದಾಯ ದೊಡ್ಡ ಸಂಖ್ಯೆಯಲ್ಲಿ ಬಿಜೆಪಿಯ ವಿರುದ್ಧವಾಗಿ ಮತ ನೀಡಿತ್ತು. ಈಡಿಗ ಸಮುದಾಯವನ್ನು ಮುಸ್ಲಿಂರ ವಿರುದ್ಧ ಎತ್ತಿಕಟ್ಟಿ ಕಳೆದು ಹೋದ ಬೆಂಬಲವನ್ನು ವಾಪಾಸು ಪಡೆಯುವ ಯತ್ನವನ್ನು ಬಿಜೆಪಿ ಮಾಡುತ್ತಿದೆ.

ಬಜರಂಗದಳ ಸಂಬಂಧ

ಈ ನಡುವೆ ನಂದಿತಾಳ ತಂದೆ ಕೃಷ್ಣಯಾನೆ ಕೃಷ್ಣಮೂರ್ತಿ ಬಜರಂಗದಳದ ಕಾರ್ಯಕರ್ತ ಎಂದು ತಿಳಿದುಬಂದಿದೆ. ಈತನ ತಮ್ಮ ಸಂತೋಷ ಪೂಜಾರಿ ಬಜರಂಗದಳದ ಮುಖಂಡ.

ಪೊಲೀಸರಿಗೆ ದೂರು ನೀಡಿರುವುದು ಘಟನೆ ನಡೆದ 3 ದಿನಗಳ ನಂತರ. ನಂದಿತಾಳ ಸಾವಿನ 7 ಗಂಟೆಯ ನಂತರ. ನಂದಿತಾಳ ತಂದೆ ಶವವನ್ನು ಮೆರವಣಿಗೆಯಲ್ಲಿ ಕೊಂಡೊಯ್ಯುವುದು ಬೇಡ ಎಂದು ಹೇಳಿದರೂ ಅರಗಜ್ಞಾನೇಂದ್ರ ಶವಯಾತ್ರೆ ನಡೆಯಬೇಕೆಂದು ಪಟ್ಟು ಹಿಡಿದರು. ಮಾತ್ರವಲ್ಲ ಅದು ಮಸೀದಿಯ ಎದುರಿನಲ್ಲೇ ಸಾಗಬೇಕೆಂದು ಹಠತೊಟ್ಟು ಯಶಸ್ವಿಯಾದರು. ಪೊಲೀಸರ ಸಕಾಲಿಕ ಮಧ್ಯಪ್ರವೇಶದಿಂದ ಮತ್ತು ಜನರ ಸಂಯಮದಿಂದಾಗಿ, ಸಂಘ ಪರಿವಾರದವರು ಬಯಸಿದಂತಹ ತೀವ್ರವಾದ ಘಟನೆಗಳು ನಡೆಯಲಿಲ್ಲ.

ಎಬಿವಿಪಿ –ಸಿಎಫ್‌ಇಗಳ ತಿಕ್ಕಾಟಗಳು

ನಂದಿತಾ ಸಾವಿನ ಹಿನ್ನೆಲೆಯಲ್ಲಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಎಬಿವಿಪಿ ಮತ್ತು ಸಿಎಫ್‌ಐ (ಕ್ಯಾಂಪಸ್ ಫ್ರಂಟ್ ಅಫ್ ಇಂಡಿಯಾ) ವಿದ್ಯಾರ್ಥಿ ಸಂಘಟನೆಗಳು ಪ್ರತಿಭಟನೆ ನಡೆಸಿವೆ. ಎಬಿವಿಪಿ ಮುಸ್ಲಿಂ ವಿದ್ಯಾರ್ಥಿಗಳ ವಿರುದ್ಧದ ಬಾವನೆಗಳನ್ನು ಕೆರಳಿಸಿದರೆ, ಸಿಎಫ್‌ಇ ಮುಸ್ಲಿಂ ವಿದ್ಯಾರ್ಥಿಗಳನ್ನು ಮಾತ್ರ ಒಂದುಗೂಡಿಸಲು ಪ್ರಯತ್ನಿಸುತ್ತದೆ. ಇಲ್ಲಿ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆಗಳ ಮಧ್ಯ ಪ್ರವೇಶದ ಕೊರತೆ ಎದ್ದು ಕಾಣುತ್ತದೆ.

ಒಟ್ಟಾರೆಯಾಗಿ ಬಾಳಿಬದುಕಬೇಕಾದ ಕಿಶೋರಿ ನಂದಿತಾ ಸಾವಿಗೀಡಾದದ್ದು ಮಾತ್ರ ವಿಷಾಧನೀಯ. ನಂದಿತಾ ಸಾವಿಗೆ ಕಾರಣವಾದ ಅನ್ಯಾಯವನ್ನು ಯಾರೇ ಎಸಗಿದ್ದರೂ ಸೂಕ್ತ ಶಿಕ್ಷೆಯಾಗಬೇಕು. ನೊಂದ ಕುಟುಂಬ ವರ್ಗದವರಿಗೆ ಸಾಂತ್ವನ, ಪರಿಹಾರ ಸಿಗಬೇಕು. ಆದರೆ ಪ್ರಕರಣವನ್ನು ರಾಜಕೀಯಗೊಳಿಸಿ, ಕೋಮುಭಾವನೆ ಕೆರಳಿಸಿ ಲಾಭ ಪಡೆದುಕೊಳ್ಳಲು ಬಯಸುವ ಬಿಜೆಪಿ ಮತ್ತು ಸಂಘಪರಿವಾರವನ್ನು ಜನತೆ ಹಿಮ್ಮೆಟ್ಟಿಸಬೇಕು. ●

'ಪ್ರಜಾವಾಣಿ'ಯಲ್ಲಿ ಅಕ್ಟೋಬರ್ 13, 2014 ರಂದು ಪ್ರಕಟವಾದ ಸುದ್ದಿ

ತೀರ್ಥಹಳ್ಳಿ ಶಾಲಾ ಬಾಲಕಿ ನಂದಿತಾ ಸಾವಿನ ಪ್ರಕರಣ

ಸಿಐಡಿ ಮುಂದೆ ಸತ್ಯದ ಅನಾವರಣ



ಶಿವಮೊಗ್ಗ: ತೀರ್ಥಹಳ್ಳಿಯ ಬಾಳೆಬೈಲಿನ ಬಾಲಕಿ ನಂದಿತಾ ಸಾವಿನ ಪ್ರಕರಣ ಕುರಿತು ಸಿಐಡಿ ಅಧಿಕಾರಿಗಳು ನಡೆಸುತ್ತಿರುವ ತನಿಖೆ ಅಂತಿಮ ಹಂತಕ್ಕೆ ಬಂದಿದ್ದು, ಪ್ರಕರಣ ಕುರಿತು ಕೆಲವು ಮಹತ್ವದ ಸಂಗತಿಗಳು ಅನಾವರಣಗೊಂಡಿವೆ.

ಸಿಐಡಿ ಹಿರಿಯ ಅಧಿಕಾರಿಗಳೂ ಸೇರಿದಂತೆ 30ಕ್ಕೂ ಹೆಚ್ಚು ಸಿಬ್ಬಂದಿ ಕಳೆದ 10 ದಿನಗಳಿಂದ ತನಿಖೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಅಪಹರಣವಾಗಿದೆ ಎನ್ನಲಾಗಿದ್ದ ಅರಣ್ಯ ಇಲಾಖೆ ನರ್ಸರಿ ಬಳಿಯ ಸ್ಥಳ, ಆಕೆ ಪತ್ತೆಯಾದ ಆನಂದಗಿರಿ ಗುಡ್ಡ, ಕಲಿಯುತ್ತಿದ್ದ ಶಾಲೆ, ಬಾಳೆಬೈಲಿನ ಮನೆ, ಚಿಕಿತ್ಸೆ ಪಡೆದ ತೀರ್ಥಹಳ್ಳಿ, ಶಿವಮೊಗ್ಗದ ಆಸ್ಪತ್ರೆಗಳು, ಸಾವು ಕಂಡ ಮಣಿಪಾಲದ ಆಸ್ಪತ್ರೆ ಸೇರಿದಂತೆ ಎಲ್ಲ ಸ್ಥಳಗಳಿಗೂ ಭೇಟಿ ನೀಡಿ ಮಾಹಿತಿ ಕಲೆಹಾಕಿದ್ದಾರೆ.

ನಂದಿತಾ ಪೋಷಕರು, ಅವರ ಕುಟುಂಬದ ಇತರೆ ಸದಸ್ಯರು, ಆಕೆಯನ್ನು ಗುಡ್ಡದಲ್ಲಿ ಮೊದಲು ನೋಡಿದ ಕೂಲಿ ಕಾರ್ಮಿಕರು, ಶಾಲಾ ಸಹಪಾಠಿಗಳು, ಶಿಕ್ಷಕರು, ವೈದ್ಯರು, ಪೋಷಕರು ಆರೋಪಿಸಿದ ವ್ಯಕ್ತಿಗಳು, ಆಸ್ಪತ್ರೆ ಸಿಬ್ಬಂದಿ, ಸ್ಥಳೀಯ ಪೊಲೀಸರು, ಸಾರ್ವಜನಿಕರು ಸೇರಿದಂತೆ ನೂರಾರು ಮಂದಿಯ ವಿಚಾರಣೆ ನಡೆಸಿದ ಸಿಐಡಿ ಅಧಿಕಾರಿಗಳು ಘಟನೆಯ ಸಂಪೂರ್ಣ ವಿವರ ಪಡೆದಿದ್ದಾರೆ.

ತೀರ್ಥಹಳ್ಳಿಯ ಮುಖ್ಯರಸ್ತೆಗಳಲ್ಲಿ ಅಳವಡಿಸಿರುವ ಸಿಸಿ ಕ್ಯಾಮೆರಾಗಳು, ಘಟನೆ ನಡೆದ ದಿನ, ಅಂದರೆ ಅ. 29ರಿಂದ ಆಕೆ ಮೃತಪಟ್ಟ ಅ.31 ರವರೆಗಿನ ಮೊಬೈಲ್ ಕರೆಗಳ ಪಟ್ಟಿ, ವೈದ್ಯಕೀಯ ಪ್ರಮಾಣಪತ್ರಗಳು, ವೈದ್ಯರ ಹೇಳಿಕೆಗಳು, ಸಾರ್ವಜನಿಕರು ನೀಡಿದ ಕೆಲವು ಗುಪ್ತ ಮಾಹಿತಿಗಳು, ದಾಖಲೆಗಳು ಪ್ರಕರಣದ ಸತ್ಯಾಸತ್ಯತೆ ಕಂಡುಕೊಳ್ಳುವಲ್ಲಿ ಸಿಐಡಿಗೆ ನೆರವಾಗಿವೆ.

ಅನಾವರಣಗೊಂಡ ಸತ್ಯಗಳು :

ಅ. 29ರಂದು ಶಾಲೆಗೆ ಹೊರಟ ಬಾಲಕಿ ನಂದಿತಾಳನ್ನು ಮೂವರು ಅಪಹರಿಸಿಕೊಂಡು ಅತ್ಯಾಚಾರ ಯತ್ನ ನಡೆಸಿದ್ದಾರೆ. ನಂತರ ಆಕೆಯನ್ನು ಆನಂದ ಗಿರಿ ಗುಡ್ಡದಲ್ಲೇ ಬಿಟ್ಟು ಪರಾರಿಯಾಗಿದ್ದಾರೆ. ಬಿಟ್ಟು ಹೋಗುವ ಮುನ್ನ ಆಕೆಗೆ ಬಲವಂತವಾಗಿ ನೀರಿನಲ್ಲೇ ಏನೋ ಬೆರೆಸಿ ಕುಡಿಸಿದ್ದಾರೆ. ಅದರಿಂದಲೇ ಆಕೆ ಮೃತಪಟ್ಟಿದ್ದಾಳೆ ಎಂದು ನಂದಿತಾಳ ತಂದೆ ಟಿ.ಜಿ. ಕೃಷ್ಣ ಅ. 31ರ ರಾತ್ರಿ ತೀರ್ಥಹಳ್ಳಿ ಪೊಲೀಸರಿಗೆ ದೂರು ನೀಡಿದ್ದರು.

ನಂದಿತಾಗೆ ಒಂದು ವರ್ಷದಿಂದ ಸೋಹನ್ ಎನ್ನುವ ಯುವಕನ ಜತೆ ಆತ್ಮೀಯತೆ ಇತ್ತು. ಆತನ ಪರಿಚಯ ನಂದಿತಾ ಮನೆಯವರಿಗೂ ಇತ್ತು. ಆತನ ಜತೆ ಸಲುಗೆಯಿಂದ ಇರುವ ಬಗ್ಗೆ ಪೋಷಕರು ಮಗಳಿಗೆ ಹಲವು ಬಾರಿ ಎಚ್ಚರಿಕೆಯನ್ನೂ ನೀಡಿದ್ದರು. ನಂತರ ನಿರ್ಬಂಧ ವಿಧಿಸಿದ್ದರು.

ದಸರಾ ರಜೆ ಮುಗಿಯುವದನ್ನೇ ಕಾಯುತ್ತಿದ್ದ ಆಕೆ ಶಾಲೆಯ ಪುನರಾರಂಭದ ದಿನ (ಅ. 29) ಸೋಹನ್ ಜತೆ ಮಾತನಾಡಲು ಆನಂದಗಿರಿ ಗುಡ್ಡಕ್ಕೆ ತೆರಳಿದ್ದಾಳೆ. ಅಲ್ಲಿ ತಂದೆಯ ಪರಿಚಯಸ್ಥರು ಯಾರೋ ನೋಡಿದ್ದಾರೆ ಎಂದು ಭಯ ಬಿದ್ದು, ಸೋಹನ್‌ನನ್ನು ಅಲ್ಲಿಂದ ಕಳುಹಿಸಿದ್ದಾಳೆ. ನಂತರ ಗುಡ್ಡದ ಬಳಿ ಕಂಡ ಕಮಲಮ್ಮ ಅವರನ್ನು ಕೂಗಿ ಕರೆದಿದ್ದಾಳೆ. ಕಮಲಮ್ಮನ ಮಗನ ಸಹಕಾರದಿಂದ ಅಪ್ಪನ ಜತೆ ಮನೆ ತಲುಪಿದ್ದಾಳೆ ಎನ್ನುವುದು ತನಿಖೆ ವೇಳೆ ಬಯಲಾಗಿದೆ.

ನಂದಿತಾ ಸಾವು ಆತ್ಮಹತ್ಯೆ :

ನಂದಿತಾ ಸಾವು ಕೊಲೆಯಲ್ಲ. ಆತ್ಮಹತ್ಯೆ ಎನ್ನುವುದೂ ಸಾಬೀತಾಗಿದೆ. ಮನೆಗೆ ಹೋದ ನಂತರ ಪ್ರಕರಣದಿಂದ ಬೇಸರಗೊಂಡ ತಾಯಿ–ತಂದೆ ಹಾಗೂ ಕೆಲ ಬಂಧುಗಳು ಆಕೆಗೆ ಬುದ್ಧಿವಾದ ಹೇಳಿದ್ದಾರೆ. ಅಲ್ಲಿಯವರೆಗೂ ಮೌನವಾಗಿಯೇ ಇದ್ದ ಆಕೆ, ಎಲ್ಲರಿಂದ ಬುದ್ಧಿಮಾತನ್ನೂ ಕೇಳಿಸಿಕೊಂಡು ಮಲಗಿದ್ದಾಳೆ.

ಎಲ್ಲರೂ ನಿದ್ದೆಗೆ ಜಾರಿದ ನಂತರ ಆಕೆ ತಾನು ಅತ್ಯಂತ ಹೆಚ್ಚು ಪ್ರೀತಿಸುತ್ತಿದ್ದ ಮನೆಯಲ್ಲಿ ಇದ್ದಾಗ ಆಟವಾಡಿಸಿಕೊಂಡು ಕಾಲ ಕಳೆಯುತ್ತಿದ್ದ 11 ವರ್ಷದ ಪುಟಾಣಿ ತಂಗಿ ನಿಧಿ ಕುರಿತು ಆತ್ಮಹತ್ಯೆಯ ಪತ್ರ ಬರೆದಿಟ್ಟು, ಅಧಿಕ ರಕ್ತದೊತ್ತಡ ನಿಯಂತ್ರಿಸುವ ಮಾತ್ರೆ ಸೇವಿಸಿದ್ದಾಳೆ.

ಮಧ್ಯ ರಾತ್ರಿಯ ನಂತರ ವಾಂತಿ ಆರಂಭವಾಗಿದೆ. ಬೆಳಗಿನ ಜಾವ ತೀರ್ಥಹಳ್ಳಿಯ ಜಯಚಾಮರಾಜೇಂದ್ರ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದಾಗ ಆಕೆಯ ರಕ್ತದೊತ್ತಡ ಆಗಲೇ ಸಾಕಷ್ಟು ಕ್ಷೀಣಿಸಿದ್ದು, ಅಪಾಯಕಾರಿ ಮಟ್ಟ ತಲುಪಿತ್ತು. ನಂತರ ಶಿವಮೊಗ್ಗ, ಅಲ್ಲಿಂದ ಮಣಿಪಾಲಕ್ಕೆ ತಲುಪಿದಾಗ ಆಕೆ ಬದುಕುಳಿಯುವ ಸ್ಥಿತಿ ಕ್ಷೀಣಿಸಿತ್ತು.

ಅ. 29ರ ರಾತ್ರಿ ಆಕೆ ರಕ್ತದ ಒತ್ತಡ ನಿಯಂತ್ರಿಸುವ ಮಾತ್ರೆ ಸೇವಿಸಿದ್ದಾಳೆ. ಅದ–ರಿಂದ ಆಕೆಯ ರಕ್ತದ ಒತ್ತಡ ಕ್ಷೀಣಿಸಿ, ಹೃದಯ ಬಡಿತ ನಿಂತ ಪರಿಣಾಮ ಸಾವು ಸಂಭವಿಸಿದೆ ಎನ್ನುವುದನ್ನು ವೈದ್ಯಕೀಯ ದಾಖಲೆಗಳು ದೃಢಪಡಿಸಿವೆ. ಅದು ಅವಳ ಅಜ್ಜಿಗಾಗಿ ತಂದಿಟ್ಟಿದ್ದ ಮಾತ್ರೆ (ಆಮ್ಲೊಡೆಪಿನ್) ಎನ್ನುವುದನ್ನು ಸಿಐಡಿ ಅಧಿಕಾರಿಗಳು ಖಚಿತಪಡಿಸಿಕೊಂಡಿದ್ದಾರೆ.

ಆತ್ಮಹತ್ಯೆ ಪತ್ರದಲ್ಲಿರುವುದು ನಂದಿತಾ ಕೈ ಬರಹ ಎನ್ನುವುದನ್ನು ವಿಧಿ–ವಿಜ್ಞಾನ ಪ್ರಯೋಗಾಲಯವೂ ದೃಢಪಡಿಸಿದೆ. ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ 'ನಾನು ನನ್ನ ಜೀವ ಕಳೆದುಕೊಳ್ಳಲು ನಿರ್ಧರಿಸಿದ್ದೇನೆ' ಎಂದು ಗೆಳೆಯ ಸೋಹನ್‌ಗೆ ಎಸ್‌ಎಂಎಸ್ ಸಂದೇಶ ಕಳುಹಿಸಿದ್ದಾಳೆ ಎನ್ನಲಾಗಿದ್ದು, ಈ ಮಾಹಿತಿ ಖಚಿತಗೊಂಡಿಲ್ಲ.

ಕನ್ಯತ್ವಕ್ಕೆ ಧಕ್ಕೆಯಾಗಿರಲಿಲ್ಲ :


ಆಕೆಯ ಮೇಲೆ ಅತ್ಯಾಚಾರ ನಡೆದಿಲ್ಲ. ಆಕೆಯ ಕನ್ಯತ್ವಕ್ಕೆ ಯಾವುದೇ ಧಕ್ಕೆಯಾಗಿರಲಿಲ್ಲ ಎಂದು ಮಣಿಪಾಲದ ವೈದ್ಯರು ನೀಡಿದ ಮರಣೋತ್ತರ ಪರೀಕ್ಷೆಯ ವರದಿಯಲ್ಲಿದೆ. ಪ್ರಕರಣದ ಆರೋಪಿ ಯಾರು?: ನಂದಿತಾ ಪ್ರಕರಣ ಆತ್ಮಹತ್ಯೆ ಎನ್ನುವುದು ಸಾಬೀತಾದ ಬೆನ್ನಲ್ಲೇ, ಹಲವು ಪ್ರಶ್ನೆಗಳು ಸಿಐಡಿಗೆ ಕಾಡಿವೆ.

ಆತ್ಮಹತ್ಯೆಗೆ ಪ್ರಚೋದನೆ ನೀಡಿದವರು ಯಾರು? ಬಾಲಕಿಯನ್ನು ದೂರದ ಗುಡ್ಡಕ್ಕೆ ಕ–ರೆದುಕೊಂಡು ಹೋದ ಸ್ನೇಹಿತನೇ, ಬುದ್ಧಿಮಾತು ಹೇಳಿದ ತಾಯಿ–ತಂದೆಯೇ, 29 ರಂದು ಬೆಳಿಗ್ಗೆ ನಡೆದ ಘಟನೆಯನ್ನು ಜಾತಿ–ಧರ್ಮದ ಆಧಾರದಲ್ಲಿ ಸಂಕೀರ್ಣಗೊಳಿಸಿ ಆಕೆಯ ಮನಸ್ಸಿನ ಮೇಲೆ ಪರಿಣಾಮ ಬೀರುವಂತೆ ಮಾಡಿದ ಕೆಲ ಪಟ್ಟಭದ್ರರೇ? ಎಂಬ ಉತ್ತರಕ್ಕಾಗಿ ತನಿಖಾ ತಂಡ ತಡಕಾಡುತ್ತಿದೆ.

ವೈದ್ಯರು, ಪೊಲೀಸರ ತಲೆದಂಡ! ಈ ಪ್ರಕರಣದಲ್ಲಿ ಪೊಲೀಸರಿಗೆ ಮಾಹಿತಿ ನೀಡದ ತೀರ್ಥಹಳ್ಳಿಯ ಸಾರ್ವಜನಿಕ ಆಸ್ಪತ್ರೆಯ ವೈದ್ಯರು ಹಾಗೂ ಪ್ರಕರಣದ ಮಾಹಿತಿ ಇದ್ದರೂ, ಮೇಲಧಿಕಾರಿಗಳ ಗಮನಕ್ಕೆ ತಾರದ ಗಮನಕ್ಕೆ ಕೆಲ ಸ್ಥಳೀಯ ಪೊಲೀಸರ ಮೇಲೆ ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ. ●

ಅಭಿಮನ್ಯು

"ಏಕರೂಪ ಮತ್ತು ಗುಣಮಟ್ಟದ ಶಿಕ್ಷಣ ಪ್ರತಿ ಮಗುವಿನ ಹಕ್ಕು"



ಹೌದು, ನಮ್ಮ ಮೂಲಭೂತ ಹಕ್ಕುಗಳಲ್ಲಿ ಶಿಕ್ಷಣವು ಒಂದು, ಆದರೆ ಅದು ಎಷ್ಟು ಮಕ್ಕಳಿಗೆ ನ್ಯಾಯಸಮ್ಮತವಾಗಿ ದೊರೆಯುತ್ತಿದೆ? ದೊರೆತರೂ ಅದು ಎಲ್ಲಿಯವರೆಗೆ? ಎಂಬ ನೈಜ, ಪ್ರಸಕ್ತ ಸನ್ನಿವೇಶದ ಪ್ರಶ್ನೆಗಳನ್ನು ಇಟ್ಟುಕೊಂಡೇ ನಟ, ನಿರ್ದೇಶಕ ಅರ್ಜುನ್ ಸರ್ಜಾ ಅಭಿಮನ್ಯುವನ್ನು ಬೆಳ್ಳಿತೆರೆಗೆ ತಂದಿದ್ದಾರೆ. ಅವರು ತಮ್ಮ ಸಿನಿಮಾದ ಮೂಲಕ ಜನರಿಗೆ ಮುಟ್ಟಿಸಬೇಕಿಂದಿರುವ ವಿಷಯಗಳನ್ನು ಮುಟ್ಟಿಸುವಲ್ಲಿ ಯಶಸ್ವಿಯಾಗಿದ್ದಾರೆ, ಸಿನಿಮಾ ಕ್ಲಾಸ್ ಮತ್ತು ಮಾಸ್ ಪ್ರೇಕ್ಷರನ್ನು ತನ್ನತ್ತ ಸೆಳೆಯಲು ಸಫಲವಾಗಿದೆ. ಇದ-ಕ್ಕೆ ಕಾರಣ ನಿರ್ದೇಶಕರ ನಿರೂಪಣಾ ಶೈಲಿ, ಮೊದಲು ಅಸ್ಪಷ್ಟವಾಗಿ ಗೋಚರಿಸುವ ಸಿನಿಮಾ ನಂತರ 5 ಪಾತ್ರಗಳೊಂದಿಗೆ ನಿಧಾನವಾಗಿ ಫ್ಲಾಶ್‌ಬ್ಯಾಕಿನೊಂದಿಗೆ ತೆರೆದುಕೊಳ್ಳುತ್ತದೆ. ಮೂಲತಃ ಅಭಿಮನ್ಯು ಪೋಲಿಸ್ ಇಲಾಖೆಯಲ್ಲಿ ಕೆಲಸ ಮಾಡಬೇಕೆಂಬ ಆಸೆಯಿಂದ ಕಮಾಂಡರ್ ಟ್ರೈನಿಂಗ್ ಪಡೆದು ಎಲ್ಲಾ ಅರ್ಹತೆ ಇದ್ದರೂ ಕೆಲಸಕ್ಕೆ ಸೇರಲು ಲಂಚ ಕೊಡಲು ಮನಸ್ಸಿಲ್ಲದೆ ಕರಾಟೆ ಗುರುವಾಗುತ್ತಾನೆ. ಅಕಸ್ಮಾತಾಗಿ ಸಿಗುವ ಪುಟ್ಟ ಹುಡುಗಿ ಪೂರ್ಣಿಮ ಕಥೆಯ ಕೇಂದ್ರ ಬಿಂದು. ಮಗುವಿಗೆ ತಾನು ಐಎಎಸ್ ಆಗಬೇಕೆಂಬ ಆಸೆ. ಆದರೆ ಮಗುವಿನ ಕುಟುಂಬಕ್ಕೆ ಅದು ಸಾಧ್ಯವಾಗದೆ ಕೊನೆಗೆ ಆ ಕುಟುಂಬ ಸಾಮೂಹಿಕ ಆತ್ಮಹತ್ಯೆಯ ದಾರಿ ಹಿಡಿಯುತ್ತದೆ. ಅವರ ಸಾವಿಗೆ ಕಾರಣವಾಗಿದ್ದು ಖಾಸಗಿ ಕಾನ್ವೆಂಟ್‌ನ ದುಬಾರಿ ಶುಲ್ಕಗಳು ಮತ್ತು ಡೋನೇಶನ್ ಹಾವಳಿ ಎಂಬುದನ್ನು ಅರಿತ ನಾಯಕ ಶಿಕ್ಷಣ ವ್ಯವಸ್ಥೆಯನ್ನೇ ಸಂಪೂರ್ಣವಾಗಿ ಬದಲಾಯಿಸುವ ಪಣ ತೊಡುತ್ತಾನೆ. ಇದಕ್ಕೆ ಪೂರಕವಾಗಿ ಖಾಸಗಿ ಶಾಲೆಗಳನ್ನು ಸರ್ಕಾರಿ ಶಾಲೆಗಳೊಂದಿಗೆ ವಿಲೀನಗೊಳಿಸಬೇಕು. ಇದರಿಂದ ಸರ್ಕಾರಿ ಮತ್ತು ಖಾಸಗಿ ಶಾಲೆಗಳೆಂಬ ವ್ಯತ್ಯಾಸಗಳು ಇರುವುದಿಲ್ಲ ಅನಂತರ ಎಲ್ಲರಿಗೂ ಏಕರೂಪ ಶಿಕ್ಷಣ ವ್ಯವಸ್ಥೆ ಜಾರಿಯಾಗುತ್ತದೆ. ಅಲ್ಲಿ ಎಲ್ಲಾ ವರ್ಗದ ಮಕ್ಕಳು ಒಂದೇ ರೂಪದ ಶಿಕ್ಷಣವನ್ನು ಪಡೆಯುವಂತಾಗುತ್ತದೆ ಎಂಬ ಪರಿಕಲ್ಪನೆಯ ಅಷ್ಟ ಸೂತ್ರಗಳನ್ನು ಜನರ ಮುಂದಿಡುತ್ತಾನೆ. ಅವನ ಈ ಸೂತ್ರಗಳು ಸಾರ್ವಜನಿಕ ವಲಯದಲ್ಲಿ ವ್ಯಾಪಕ ಬೆಂಬಲಕ್ಕೆ ಒಳಗಾಗುತ್ತವೆ. ಇದರ ಬಿಸಿ ನೇರವಾಗಿ ಖಾಸಗಿ ಶಾಲೆಗಳ ಮಾಲೀಕರಿಗೆ ತಟ್ಟುತ್ತಿದ್ದಂತೆ ಅವರು ಅಭಿಮನ್ಯುವನ್ನು ಮಟ್ಟಹಾಕಲು ಡಾನ್ ರಾಥೋಡ್‌ನ ಸಹಾಯ ಬೇಡುತ್ತಾರೆ. ಅವನು ಅವರಿಗೆ ಸಹಾಯ ಮಾಡುವ ನೆಪದಲ್ಲಿ ಖಾಸಗಿ ಶಾಲೆಗಳ ಮಾಲೀಕರ ಮಕ್ಕಳನ್ನು ಅಪಹರಿಸಿ ಅಭಿಮನ್ಯುವಿನ ಹೆಸರಿನಲ್ಲಿ 300 ಕೋಟಿ. ರೂ. ಬೇಡಿಕೆ ಇಡುತ್ತಾನೆ. ಜೊತೆಗೆ ಅಭಿಮನ್ಯುವನ್ನು ಕೊಲ್ಲಲು ಸಿಂಗಾಪೂರ್ ಕಿಲ್ಲರ್‌ಗೆ ಸುಪಾರಿ ನೀಡುತ್ತಾನೆ. ಮುಂದೆ ಅವರ ಮಕ್ಕಳು ಏನಾಗುತ್ತಾರೆ, ಅಭಿಮನ್ಯುವನ್ನು ಡಾನ್ ಏನು ಮಾಡುತ್ತಾನೆ ಎಂಬುದು ಸಿನಿಮಾದ ಉಳಿದ ಭಾಗ.

ಈ ಸಿನಿಮಾದಲ್ಲಿ ನಿರ್ದೇಶಕರು ಎತ್ತಿರುವ ಪ್ರಶ್ನೆಗಳು ಹಲವಾರು ದಶಕಗಳಿಂದ ನಮ್ಮ-ನಿಮ್ಮಲ್ಲಿ ಮೂಡಿರುವ ಪ್ರತಿ ದಿನ ಮೂಡುತ್ತಿರುವ ಪ್ರಶ್ನೆಗಳೇ ಆಗಿವೆ. ಅವರು ತಮ್ಮ ಸಿನಿಮಾದಲ್ಲಿ ಶಿಕ್ಷಣ ವ್ಯವಸ್ಥೆಯ ಒಂದು ಮುಖವನ್ನು ಮಾತ್ರ ಮುಟ್ಟಿದ್ದಾರೆ ಅಂ-ದರೆ ಖಾಸಗಿ ಶಾಲೆಗಳು ಶಿಕ್ಷಣದ ಹೆಸರಿನಲ್ಲಿ ಬಡ ಮತ್ತು ಮಧ್ಯಮ ವರ್ಗದ ಜನರನ್ನು ಹೇಗೆ ಹಗಲು ದರೋಡೆ ಮಾಡುತ್ತಿದ್ದಾರೆ ಎಂಬುದನ್ನು ಜನರ ಮುಂದಿಡಲು ಪ್ರಯತ್ನಿಸಿದ್ದಾರೆ. ಆದರೆ ಇಷ್ಟೊಂದು ಗಂಭೀರವಾದ ವಿಷಯವನ್ನು ಕೈಗೆತ್ತಿಕೊಂಡಿರುವ ಅವರು ಇಂದಿನ ಶಿಕ್ಷಣ ವ್ಯವಸ್ಥೆಯ ವಿವಿಧ ಆಯಾಮಗಳನ್ನು ಜನರ ಮುಂದಿಟ್ಟಿದ್ದರೆ ಅವರ ಪ್ರಯತ್ನ ಸಾರ್ಥಕವಾಗಿರುತ್ತಿತ್ತು. ಸಿನಿಮಾವನ್ನು ಕಲಾತ್ಮಕಗೊಳಿಸುವ ಸಲುವಾಗಿ, ಮಾಸ್ ಪ್ರೇಕ್ಷರನ್ನು ಸೆಳೆಯುವ ಸಲುವಾಗಿ ಅವರು ಗಂಭೀರವಾದ ಅಂಶಗಳನ್ನು ಬಿಟ್ಟು ಕೇವಲ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ತಮ್ಮ ಟಾರ್ಗೆಟ್ ಮಾಡಿಕೊಂಡಿದ್ದಾರೆ. ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಪೋಷಕರು ಪಡುವ ಯಾತನೆಯನ್ನು ಮನಮುಟ್ಟುವಂತೆ ಚಿತ್ರೀಕರಿಸಿದ್ದಾರೆ. ಪೋಷಕರು ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಯಾವ ಹಂತಕ್ಕೆ ತಲುಪಬಹುದು ಎಂಬುದನ್ನು ಈ ಚಿತ್ರದಲ್ಲಿ ಚಂದ್ರು ಕುಟುಂಬವನ್ನು ಉದಾಹರಣೆಯಾಗಿ ನೀಡಿ ಹೇಳಿದ್ದಾರೆ. ಚಂದ್ರು ತನ್ನ ಮಗಳನ್ನು ಖಾಸಗಿ ಶಾಲೆಯಲ್ಲಿ ಸೇರಿಸಲು ಎಲ್ಲೂ ಸಾಲ ದೊರೆಯದಿದ್ದಾಗ ತನ್ನ ಕಿಡ್ನಿಯನ್ನು ಮಾರಿ ಹಣ ತರುತ್ತಾನೆ. ಆದರೆ ನಿಗದಿತ ಸಮಯದೊಳಗೆ ಹೇಳಿದಷ್ಟು ಹಣ ಕಟ್ಟಲಿಲ್ಲ ಎಂಬ ಕಾರಣಕ್ಕೆ ಶಾಲೆಯ ಆಡಳಿತ ಮಂಡಳಿ ಮಗುವನ್ನು ಶಾಲೆಯಿಂದ ಹೊರದಬ್ಬುತ್ತಾರೆ. ಈ ಹಂತದಲ್ಲಿ ನಿರ್ದೇಶಕರು ಆರ್.ಟಿ.ಇ. ಬಗ್ಗೆ ಪ್ರಸ್ತಾಪಿಸಬಹುದಿತ್ತು. ಚಂದ್ರು ತನ್ನ ಮಗುವಿನ ಆಸೆಯನ್ನು ಪೂರ್ಣಮಾಡಲು ಸಾಧ್ಯವಾಗಲಿಲ್ಲವೆಂದು ತನ್ನ ಕುಟುಂಬದ ಸಮೇತ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.


ಶಿವಲಿಂಗೇಗೌಡ ಹೆಚ್.ಸಿ.

ಇದರ ಜೊತೆಯಲ್ಲಿ ಅವರು ಸಿನಿಮಾದಲ್ಲಿ ಸರ್ಕಾರದ ಪಾತ್ರವನ್ನು ಮರೆಮಾಚಿದ್ದಾರೆ, ನಮ್ಮ ದೇಶದಲ್ಲಿ ಶೇ. 88ರಷ್ಟು ಮಕ್ಕಳು ಸರ್ಕಾರಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅವರಿಗೆ ಮೂಲಭೂತ ಸೌಕರ್ಯಗಳಿಲ್ಲ ಉತ್ತಮ ಸಲಕರಣೆಗಳಿಲ್ಲ, ಬೋಧಕ ವರ್ಗವಿಲ್ಲ ಎಂಬ ಎಲ್ಲಾ ವಿಷಯಗಳನ್ನು ಪ್ರಸ್ತಾಪಿಸಿರುವ ಅವರು ಸರ್ಕಾರಗಳು ಶಿಕ್ಷಣ ವ್ಯವಸ್ಥೆಯನ್ನು ಉತ್ತಮ ಪಡಿಸುವಲ್ಲಿ ಕೈಗೊಳ್ಳಬೇಕಾದ ಅಂಶಗಳ ಬಗ್ಗೆ ಹಾಗೂ ಸರ್ಕಾರದ ನಿರ್ಲಕ್ಷ್ಯದ ಬಗ್ಗೆ ಅವರು ಪ್ರಸ್ತಾಪವನ್ನು ಮಾಡದೇ ದೂರ ಉಳಿದಿದ್ದಾರೆ. ಇಂದಿನ ಶೈಕ್ಷಣಿಕ ಅಸಮಾನತೆಗೆ ಕೇವಲ ಖಾಸಗಿ ಶಾಲೆಗಳು ಮಾತ್ರ ಹೊಣೆ. ಆ ಶಾಲೆಗಳನ್ನು ಮತ್ತು ಅದರ ಆಡಳಿತ ವರ್ಗವನ್ನು ಬದಲಾಯಿಸಿದರೆ ಈ ಅಸಮಾನತೆ ಸಮಾನತೆ ಕಡೆಗೆ ವಾಲುತ್ತದೆ ಎಂಬ ಸಂದೇಶವನ್ನು ಅವರು ಕೊಡಲು ಹೊರಟಿದ್ದಾರೆ. ನಮ್ಮ ದೇಶದಲ್ಲಿ ಸಮಾನತೆಯನ್ನು ಮೂಡಿಸುವುದು ಸಿನಿಮಾದಲ್ಲಿ ತೋರಿಸಿದಷ್ಟು ಸುಲಭದ ಮಾತಲ್ಲ. ನಮ್ಮನ್ನು ಆಳುತ್ತಿರುವ ಪ್ರಭುತ್ವ ಇನ್ನೂ ಶ್ರೇಣಿಕೃತ ವ್ಯವಸ್ಥೆಯನ್ನು ಜೀವಂತವಾಗಿರಿಸಲು ಪ್ರಯತ್ನಿಸುತ್ತಿದೆ. ಉನ್ನತ ಶಿಕ್ಷಣ ಹಣವುಳ್ಳವರ ಸ್ವತ್ತನ್ನಾಗಿ ಕಾಪಾಡಲು ಸದಾ ಹೋರಾಡುತ್ತಿವೆ ಎಂಬುದು ಕಟು ಸತ್ಯ.

ಸಿನಿಮಾವನ್ನು ಮುಗಿಸುವ ಬರದಲ್ಲಿ ಅವರು ಖಾಸಗಿ ಶಾಲೆಗಳ ಮುಖ್ಯಸ್ಥರ ಮನಸ್ಸುಗಳನ್ನು ಅವರ ಮಕ್ಕಳಿಂದಲೇ(ಸಿನಿಮಾ ನೋಡಿದರೆ ತಿಳಿಯುತ್ತದೆ) ಬದಲಾಯಿಸಿ ಎಲ್ಲಾ ಮಕ್ಕಳಿಗೂ ಏಕರೂಪ ಶಿಕ್ಷಣವನ್ನು ನೀಡಲು ಒಪ್ಪಿದಂತೆ ಚಿತ್ರವನ್ನು ಮುಕ್ತಾಯಗೊಳಿಸಿದ್ದಾರೆ. ಸಿನಿಮಾದ ಮುಕ್ತಾಯದಂತೆ ಇಂದಿನ ದೈತ್ಯ ಶಿಕ್ಷಣ ಸಂಸ್ಥೆಗಳು ಬದಲಾಗುತ್ತವೆ ಎಂದು ನಂಬಿದರೆ ಅದು ಕೇವಲ ಭ್ರಮೆಯಾಗುತ್ತದೆ. ಅಂತಿಮವಾಗಿ ಎಲ್ಲಾ ಮಕ್ಕಳಿಗೂ ಸಮಗ್ರ ಮತ್ತು ಉನ್ನತ ಶಿಕ್ಷಣ ದೊರೆಯಬೇಕಾದರೆ ಸಮರಧೀರ ಹೋರಾಟಗಳಿಂದ ಮಾತ್ರವೇ ಅದು ಸಾಧ್ಯ.

ಗುಣಮಟ್ಟದ ಶಿಕ್ಷಣವೆಂಬುದು ಗಗನ ಕುಸುಮವಾಗುತ್ತಿರುವ ಸನ್ನಿವೇಶದಲ್ಲಿ ಈ ಸಿನಿಮಾದ ಮೂಲಕ ಇಂದಿನ ಶಿಕ್ಷಣ ವ್ಯವಸ್ಥೆಯ ಬಗ್ಗೆ ಬೆಳಕು ಚೆಲ್ಲುವ ನಿರ್ದೇಶಕ, ನಟ ಅರ್ಜುನ್ ಸರ್ಜಾರ ಪ್ರಯತ್ನ ಶ್ಲಾಘನೀಯ.

'ಕಾರ್ಮಿಕರನ್ನು ಜೀತದಾಳುಗಳನ್ನಾಗಿ ಮಾಡುವ ಯತ್ನ ....

ಪುಟ 5 ರಿಂದ

ಮತ್ತು ಸುಧಾರಣೆಯನ್ನು ನಮ್ಮ ಕಾಯ್ದೆಗಳು ಅಳವಡಿಸಿಕೊಳ್ಳಬೇಕಿದೆ. ಕಾರ್ಮಿಕರು ಮೈಮರೆತರೆ ನಾವೆಲ್ಲಾ ಕಾಯಂ ಗುಲಾಮರಾಗುವ ಕಾಲ ದೂರವಿಲ್ಲ. ಎಂದು ವಸಂತ ಕುಮಾರ್ ಹಿಟ್ಟಣಗಿ ಅವರು ಆತಂಕ ವ್ಯಕ್ತಪಡಿಸಿದರು.

ಮೊಮ್ಮಕ್ಕಳಿಗೆ ಪರಿಹಾರ ಸಿಗಲೆಂದು ಬರೆಸಬೇಕಿದೆ !!!

ದಿಲ್ಲಿಯ ಸರಕಾರಿ ಸ್ವಾಮ್ಯದ ಸಂಸ್ಥೆಯ ನೌಕರನೊಬ್ಬ ತನ್ನ ಪುತ್ರನ ಶಾಲಾ ಶುಲ್ಕ ಪಾವತಿಸಲು ಲೆಕ್ಕಪತ್ರ ವಿಭಾಗದಿಂದ ಪಡೆದಿದ್ದ 150 ರೂ. ಅನ್ನು ಜಮ ಮಾಡಿದ. ಇದಕ್ಕಾಗಿ ಆತ ವಜಾಗೊಂಡಿದ್ದ. ಇದನ್ನು ಕೋರ್ಟ್‌ನಲ್ಲಿ ಪ್ರಶ್ನಿಸಿದಾಗ ಹಣ ಕಳ್ಳತನ ಮಾಡದೆ ಪಾವತಿಸಿದ್ದನ್ನು ಗಮನಿಸಿ ಶಿಕ್ಷೆ ಬದಲಿಸುವಂತೆ ತೀರ್ಪು ಹೊರಬಿತ್ತು. ತೀರ್ಪನ್ನು ಸುಪ್ರೀಂಕೋರ್ಟ್ ಎತ್ತಿಹಿಡಿದರೂ ಸಂಸ್ಥೆ ಕ್ಯಾರೆ ಎನ್ನಲಿಲ್ಲ. ನ್ಯಾಯಾಂಗ ನಿಂದನೆ ಅರ್ಜಿ ವಿಚಾರಣೆ ವೇಳೆ ಅರ್ಜಿದಾರ ಸತ್ತಾಗ 18 ವರ್ಷದ ಹೋರಾಟಕ್ಕೆ ಕೊನೆಬಿತ್ತು. ಆಗ ವಿಚಾರಣೆ ನಡೆಸಿದ್ದ ನ್ಯಾ. ಕೃಷ್ಣಅಯ್ಯರ್ ಅವರು "ಇನ್ನು ಮುಂದೆ ಅರ್ಜಿದಾರರು ಪರಿಹಾರದ ಹಣವನ್ನು ತಮ್ಮ ಮೊಮ್ಮಕ್ಕಳಿಗೆ ತಲುಪಿಸಲು ವ್ಯವಸ್ಥೆ ಮಾಡುವಂತೆ ವಕೀಲರ ಬಳಿ ವಿಲ್ ಬರೆಯಿಸಬೇಕಿದೆ." ಎಂದು ವಿಷಾದಿಸಿದ್ದರು ಎಂದು ವಸಂತಕುಮಾರ್ ಹಿಟ್ಟಣಗಿ ಸ್ಮರಿಸಿಕೊಂಡರು.

ಹಾಲಿ ಕಾರ್ಮಿಕ ಕಾಯಿದೆ ಬದಲಾವಣೆಗೆ ಕೈ ಹಾಕಬೇಡಿ ಎಂಬುದಾಗಿ ಲೋಕಸಭೆಯ ಸಿಎಲ್‌ಪಿ ನಾಯಕ ಖರ್ಗೆ ಹೇಳುತ್ತಾರೆ. ಆದರೆ, ಇವರು ಕಾರ್ಮಿಕ ಸಚಿವರಾಗಿದ್ದ ವೇಳೆ ಕಾರ್ಮಿಕ ಸುಧಾರಣೆ ತರದೆ ವಿಳಂಬ ಧೋರಣೆ ಅನುಸರಿಸಿದರು. ಎಂದು ಕಾರ್ಮಿಕ ಮುಖಂಡರಾದ ದೀಪಕ್ ಹೇಳಿದರು.

ಕಾಯಂ-ಗುತ್ತಿಗೆ ಎಂಬುದು ಬೇಡ- ಎಲ್ಲ ಕಾರ್ಮಿಕರು ಒಂದೇ- ಮಂಗಳಾಂಬ ರಾವ್

ಬಿಎಂಎಸ್ ಸಂಘಟನೆಯ ರಾಷ್ಟ್ರೀಯ ಉಪಾಧ್ಯಕ್ಷೆ ಮಂಗಳಾಂಬ ರಾವ್ ಮಾತನಾಡಿ "ದೇಶದಲ್ಲಿರುವ ಕೋಟ್ಯಂತರ ಸಂಖ್ಯೆಯ ದುಡಿಯುವ ವರ್ಗದ ಸಮಸ್ಯೆಗಳ ಪರಿಹಾರಕ್ಕೆ ಆಯಾ ಸರಕಾರಗಳು ಪ್ರಥಮ ಆದ್ಯತೆ ನೀಡಬೇಕು. ಕಾಯಂ ಅಥವಾ ಗುತ್ತಿಗೆ ಎಂಬ ಪದ ಪ್ರಯೋಗ ನಡೆಸದೆ ಎಲ್ಲ ಕಾರ್ಮಿಕರು ಒಂದೇ ಎಂಬ ಕಾರ್ಮಿಕ ನೀತಿ ಜಾರಿ ಮಾಡಬೇಕಿದೆ ಎಂದರು.

ಸಿಐಟಿಯು ಮುಖಂಡರಾದ ಕೆ.ಎನ್. ಉಮೇಶ್, ಐಎನ್‌ಟಿಯುಸಿಯ ಶಾಂತಕುಮಾರ್, ಎಚ್‌ಎಂಎಸ್ ಅಧ್ಯಕ್ಷ ಶ್ರೀಕಂಠಮೂರ್ತಿ ಮತ್ತಿತರರು ವಿಚಾರ ಸಂಕಿರಣದಲ್ಲಿ ಪಾಲ್ಗೊಂಡಿದ್ದರು. ಆರಂಭದಲ್ಲಿ ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಕೆ. ಪ್ರಕಾಶ್ ಅವರು ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಪ್ರಶ್ನೋತ್ತರ

ಸ್ವಿಸ್ ಬ್ಯಾಂಕ್‌ದಲ್ಲಿಟ್ಟಿದ್ದು ಒಟ್ಟು ಎಷ್ಟು?
ನಾವೆಂದೂ ಕಂಡು ಕೇಳರಿಯದಷ್ಟು.
ಹಾಗಿದ್ದರೆ ಅಷ್ಟೊಂದು ಹಣ ಯಾವ ಹಣ?
ಹಣವಲ್ಲ ಬಡರೈತ ದುಡಿಯುವವರ ಹೆಣ.

– ವಿಡಂಬಾರಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಸತ್ ಅಧಿವೇಶನದ ಮೊದಲು ಬಂಡವಾಳಿಗರ ಸಭೆಯಲ್ಲಿ ಜನ–ವಿರೋಧಿ ಕ್ರಮಗಳ ಪ್ರಕಟಣೆ

ಸಂಸತ್ತಿನ ಚಳಿಗಾಲದ ಅಧಿವೇಶನ ಆರಂಭವಾಗುವ ಮೊದಲೇ ಹಣಕಾಸು ಮಂತ್ರಿಗಳು ಹಲವಾರು ಆರ್ಥಿಕ 'ಸುಧಾರಣೆ'ಗಳನ್ನು ಪ್ರಕಟಿಸಿದ್ದಾರೆ. ಅದನ್ನು ಪ್ರಕಟಿಸಿರುವುದು ದೇಶಿ–ವಿದೇಶಿ ಬಂಡವಾಳಶಾಹಿಗಳ ಸಂಸ್ಥೆಗಳು ಏರ್ಪಡಿಸಿದ್ದ ಒಂದು ಆರ್ಥಿಕ 'ಶೃಂಗ ಸಭೆ'ಯಲ್ಲಿ.

'ವಿಶ್ವ ಆರ್ಥಿಕ ವೇದಿಕೆ'(ವರ್ಲ್ಡ್ ಇಕನಾಮಿಕ್ ಫೋರಂ–ಡಬ್ಲ್ಯುಇಎಫ್) ಮತ್ತು ಭಾರತೀಯ ಉದ್ದಿಮೆಗಳ ಮಹಾಒಕ್ಕೂಟ(ಕಾನ್ಫೆಡರೇಶನ್ ಆಫ್ ಇಂಡಿಯನ್ ಇಂಡಸ್ಟ್ರಿ–ಸಿಐಐ) ಜಂಟಿಯಾಗಿ ಈ 'ಶೃಂಗ ಸಭೆ'ಯನ್ನು ಏರ್ಪಡಿಸಿದ್ದವು. ಸಹಜವಾಗಿಯೇ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಿಗರಿಗೆ ತಮ್ಮ ಲಾಭಗಳನ್ನು ಗರಿಷ್ಟ ಪ್ರಮಾಣಕ್ಕೇರಿಸುವ ಒಳ್ಳೆಯ ದಿನಗಳನ್ನು ಮೋದಿ ಸರಕಾರ ತರುತ್ತಿರುವುದಾಗಿ ಭರವಸೆ ನೀಡಿದ್ದಾರೆ. ರಕ್ಷಣಾ ವಲಯ, ರೈಲ್ವೆ ಮತ್ತು ರಿಯಲ್ ಎಸ್ಟೇಟ್ ವಲಯದಲ್ಲಿ ವಿದೇಶಿ ಹೂಡಿಕೆಯನ್ನು ಸರಳಗೊಳಿಸುವ ಭರವಸೆಯನ್ನೂ ನೀಡಿದ್ದಾರೆ. ಇತ್ತೀಚಿನ ಸಂಪುಟ ವಿಸ್ತರಣೆಯಲ್ಲಿ ರೈಲ್ವೇ ಇಲಾಖೆಯನ್ನು ಕರ್ನಾಟಕದ ಸದಾನಂದ ಗೌಡರನ್ನು ತೆಗೆದು ಶಿವಸೇನೆಯಿಂದ ಹಿಂದಿನ ದಿನವೇ (ಅದೂ ಆನ್‌ಲೈನ್‌ನಲ್ಲಿ– ಮೋದಿ ಸಂಪುಟ ವಿಸ್ತರಣೆಯ ಕುರಿತ ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಸೀತಾರಾಂ ಯೆಚುರಿಯವರ ಲೇಖನವನ್ನು ನೋಡಿ) ಬಿಜೆಪಿ ಸೇರಿದ ಮುಖಂಡರಿಗೆ ಕೊಡಲು ಇದೂ ಒಂದು ಕಾರಣ ಎನ್ನಲಾಗಿದೆ.

ವಿಶ್ವ ವ್ಯಾಪಾರ ಸಂಘಟನೆಯಲ್ಲಿ ಸದ್ಯಕ್ಕೆ ತಾನು ಸಹಿ ಹಾಕದಿರುವ 'ವ್ಯಾಪಾರ ಸೌಕರ್ಯ ಒಪ್ಪಂದ'(ಟಿಎಫ್‌ಎ)ದ ಬಗ್ಗೆ ತಮ್ಮ ಸರಕಾರಕ್ಕೆ 'ಸೈದ್ಧಾಂತಿಕ' ವಿರೋಧವೇನೂ ಇಲ್ಲ ಎಂಬ ಭರವಸೆಯನ್ನೂ ಮೋದಿ ಸರಕಾರದ ಹಣಕಾಸು ಮಂತ್ರಿಗಳು ಕೊಟ್ಟಿದ್ದಾರೆ. ಇನ್ನೊಂದೆಡೆಯಲ್ಲಿ, ಹಣಕಾಸು ಮಂತ್ರಿಗಳು ಸಬ್ಸಿಡಿಗಳನ್ನು 'ತರ್ಕಬದ್ಧ'ಗೊಳಿಸುವ ಹೆಸರಿನಲ್ಲಿ ಬಡಜನರಿಗೆ ನೀಡುವ ಅಲ್ಪ–ಸ್ವಲ್ಪ ಸಬ್ಸಿಡಿಗಳನ್ನು ಕಡಿತ ಮಾಡುವ ಧೋರಣೆಯನ್ನು ಅನುಸರಿಸಲಿದ್ದಾರೆ ಎಂಬುದರಲ್ಲಿ ಸಂದೇಹವಿಲ್ಲ.

ತಮ್ಮ ಸರಕಾರ ಆರ್ಥಿಕ ಸುಧಾರಣೆಗಳ ದೀರ್ಘ ಪ್ರಯಾಣವನ್ನು ಆರಂಭಿಸಿದೆ ಎನ್ನುತ್ತ ಇದನ್ನು ಪೂರ್ಣಗೊಳಿಸಲು ಸಾಕಷ್ಟು ಸಮಯ ತೆಗೆದುಕೊಳ್ಳಬಹುದು, ತುಸು ತಾಳ್ಮೆಯಿಂದಿರಿ ಎಂದು ಬಂಡವಾಳಿಗರಿಗೆ ಅವರು ಸಂಕೇತ ನೀಡಿದಂತಿತ್ತು. ವಾಸ್ತವವಾಗಿ ಇದು ಕಾಂಗ್ರೆಸ್ ಆದಾಗಲೇ ಆರಂಭಿಸಿರುವ ಪ್ರಯಾಣ, ಬಿಜೆಪಿ ನೇತೃತ್ವದ ಸರಕಾರ ಅದನ್ನು ಮುಂದೊಯ್ಯುತ್ತಿದೆ, ಭಾರೀ ಆಕ್ರಮಣಕಾರಿಯಾಗಿ ಮುಂದೊಯ್ಯುವ ಸಂಕೇತ ನೀಡುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಈಗಾಗಲೇ ಈ ಅಂಕಣದಲ್ಲಿ ಹೇಳಿರುವಂತೆ ಸಂಸತ್ತಿನ ಒಂದು ಶಾಸನದ ಪ್ರಕಾರ ಕಲ್ಲಿದ್ದಲು ಉದ್ದಿಮೆಯನ್ನು ರಾಷ್ಟ್ರೀಕರಿಸಿದ್ದರೂ, ದೇಶದ ಈ ಅಮೂಲ್ಯ ಸಂಪನ್ಮೂಲವನ್ನು ಇ–ಹರಾಜು ಮೂಲಕ ಖಾಸಗಿಯವರಿಗೆ ಕೊಡುತ್ತಿದೆ. ಕಲ್ಲಿದ್ದಲು ಮಾತ್ರವಲ್ಲ, ದೇಶದ ಸಂಪತ್ತಾದ ಇತರ ಖನಿಜಗಳನ್ನೂ ಇದೇ ರೀತಿ ಖಾಸಗಿಯವರು ಕೊಳ್ಳೆ ಹೊಡೆಯಲು ಈ ಸರಕಾರ ಅನುಕೂಲ ಮಾಡಿಕೊಡುತ್ತದೆ ಎಂದು ಸಿಪಿಐ(ಎಂ) ಖಂಡಿಸಿದೆ. ಈ ಗಣಿಗಾರಿಕೆಯನ್ನು ಸಾರ್ವಜನಿಕ ವಲಯಕ್ಕೆ ಸೀಮಿತಗೊಳಿಸಿ ಇವನ್ನು ದೇಶದೊಳಗೆ ಉದ್ಯೋಗನಿರ್ಮಾಣಕ್ಕೆ, ದೇಶೀ ಉದ್ದಿಮೆಗಳನ್ನು ಬೆಳೆಸಲು ಮತ್ತು ದೇಶದ ಆರ್ಥಿಕ ಬೆಳವಣಿಗೆಗೆ ಬಳಸುವ ಬದಲು ಖಾಸಗಿಯವರು ತಮ್ಮ ಲಾಭಗಳನ್ನು ಗರಿಷ್ಟ ಮಟ್ಟಕ್ಕೇರಿಸಿಕೊಳ್ಳಲು ಒದಗಿಸಲಾಗುತ್ತಿದೆ ಎಂದು ಅದು ಹೇಳಿದೆ.

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಕಾನೂನಿನ ಮೇಲೆ ದಾಳಿಯ ನಂತರ ಈಗ ಈ ಸರಕಾರ ರೈತರ ಭೂಮಿಯ ಮೇಲೆ ಕಣ್ಣು ಹಾಕಿದೆ. ಭೂಸ್ವಾಧೀನ ಮಸೂದೆಯಲ್ಲಿ ತಿದ್ದುಪಡಿ ತಂದು ಸರಕಾರ ಸಾರ್ವಜನಿಕ ಹಿತಾಸಕ್ತಿಯ ಹೆಸರಿನಲ್ಲಿ ಸ್ವಾಧೀನ ಮಾಡಿಕೊಳ್ಳುವ ಭೂಮಿಯನ್ನು ಖಾಸಗಿ ಶಾಲೆಗಳು, ಖಾಸಗಿ ಆಸ್ಪತ್ರೆಗಳು, ಹೊಟೇಲುಗಳು ಇತ್ಯಾದಿಗಳಿಗೆ, ಮತ್ತು 'ಸ್ಮಾರ್ಟ್ ಸಿಟಿ' ಯೋಜನೆಗಳಿಗೆ ಕೊಡುವುದಾಗಿ ಹಣಕಾಸು ಮಂತ್ರಿಗಳು ಪ್ರಕಟಿಸಿದ್ದಾರೆ. ಇದು ಇನ್ನಷ್ಟು ರೈತಾಪಿ ಜನಗಳ ಜೀವನಾಧಾರಗಳನ್ನು ಕಸಿದುಕೊಂಡು ಅವರನ್ನು 'ಹತಾಶ ಆತ್ಮಹತ್ಯೆ'ಗಳತ್ತ ತಳ್ಳುವ ಕ್ರಮ ಎಂದು ಸಿಪಿಐ(ಎಂ) ವರ್ಣಿಸಿದೆ.

'ಸ್ವಚ್ಛ ಭಾರತ ಅಭಿಯಾನ'ದ ರೂವಾರಿಯ ರಾಜ್ಯದಲ್ಲೇ ಶುಚಿತ್ವ ಕಾರ್ಯಕ್ರಮದ ಕಳಪೆ ಜಾರಿಗೆ ಸಿಎಜಿ ತರಾಟೆ

ಈ ವರ್ಷ ಗಾಂಧೀಜಯಂತಿಯಂದು ಅವರ ಹೆಸರಿನಲ್ಲಿ ಪ್ರಧಾನ ಮಂತ್ರಿಗಳು ಅದ್ದೂರಿಯಾಗಿ 'ಸ್ವಚ್ಛ ಭಾರತ ಅಭಿಯಾನ' ಎಂಬುದನ್ನು ಆರಂಭಿಸಿದರು. ಆನಂತರ ಆ ಬಗ್ಗೆ ಟಿವಿ, ರೇಡಿಯೋಗಳಲ್ಲಿ ಪ್ರತಿದಿನದ ಸದ್ದು–ಗದ್ದಲವಲ್ಲದೆ, ಆ ಬಗ್ಗೆ ಹಾಸ್ಯಾಸ್ಪದವೆನಿಸುವಷ್ಟು ಸುದ್ದಿಗಳು ಪತ್ರಿಕೆಗಳಲ್ಲಿ ಪ್ರತಿದಿನ ಪ್ರಕಟವಾಗುತ್ತಿವೆ. ವ್ಯಂಗ್ಯಚಿತ್ರಗಾರರಿಗಂತೂ ಇದೀಗ ಬಹಳ ಪ್ರೀತಿಯ ವಸ್ತುವಾಗಿ ಬಿಟ್ಟಿದೆ. (ಅದರ ಮೂರು ಅಂಶಗಳನ್ನು ಬಿಂಬಿಸುವ ಮಾದರಿಗಳು ಈ ಕೆಳಗಿವೆ). ನಿಜವಾಗಿ ಇದು ಗಾಂಧೀಜಿಯ ವಿಚಾರಗಳನ್ನು ಕೇವಲ 'ಶುಚಿತ್ವ'ದ ಮಟ್ಟಕ್ಕೆ ಇಳಿಸುವ ಪ್ರಯತ್ನ ಎಂಬುದು ಕೆಲವರ ವಿಶ್ಲೇಷಣೆ.

ಇತ್ತೀಚೆಗಂತೂ ದಿಲ್ಲಿಯ ಬಿಜೆಪಿ ಮುಖಂಡರೇ ಈ 'ಅಭಿಯಾನ'ದ ಗೋಸುಂಬೆತನವನ್ನು ಬಯಲಿಗೆಳೆದಿದ್ದಾರೆ. ದಿಲ್ಲಿ ಅಸೆಂಬ್ಲಿಗೆ ಹೊಸ ಚುನಾವಣೆಗಳು ನಡೆಯಲಿದೆ ಎಂದು ಗೊತ್ತಾದ ಮೇಲೆ ದಿಲ್ಲಿಯ ಬಿಜೆಪಿ ಮುಖ್ಯಸ್ಥ ಸತೀಶ್ ಉಪಾಧ್ಯಾಯ ಸೇರಿದಂತೆ ಹಲವು ಮುಖಂಡರು, ಜತೆಗೆ ಹಿಂದೆ ಆಮ್ ಆದ್ಮಿ ಪಕ್ಷದಲ್ಲಿ ಸದ್ದು ಮಾಡುತ್ತಿದ್ದ ಶಾಝಿಯಾ ಇಲ್ಮಿ ದಿಲ್ಲಿಯ ಒಂದು ಶ್ರೀಮಂತ ಬಡಾವಣೆಯ ಲೋಧಿ ರಸ್ತೆಯಲ್ಲಿ ಪೊರಕೆ ಹಿಡಿದು ಕಸ ಗುಡಿಸುವ ಕಾರ್ಯಕ್ರಮ ಟಿವಿ ಪರದೆಗಳ ಮೇಲೆ ಎಂದಿನಂತೆ ಪ್ರಚಾರ ಪಡೆಯಿತು. ಆದರೆ ಅವರು ಗುಡಿಸಿದ ಕಸ ವಾಸ್ತವವಾಗಿ ಮುನಿಸಿಪಾಲಿಟಿಯ ಕೆಲಸಗಾರರು ಈ ಕಾರ್ಯಕ್ರಮಕ್ಕೆಂದೇ ಆ ರಸ್ತೆಗೆ ತಂದು ಚೆಲ್ಲಿದ್ದಾಗಿತ್ತು ಎಂದು ಕಂಡು ಬಂತು. ಇದನ್ನೂ ವೀಕ್ಷಕರು ಟಿವಿ ಪರದೆಗಳ ಮೇಲೆ ನೋಡಿ ನಕ್ಕರು.

ಗಮನಾರ್ಹ ಸಂಗತಿ ಎಂದರೆ ನಮ್ಮ ಹೊಸ ಪ್ರಧಾನ ಮಂತ್ರಿಗಳ ಈ ಅಪೂರ್ವವೆನಿಸಿಕೊಂಡಿರುವ ಕಾರ್ಯಕ್ರಮ ಕೂಡ,

ಪುಟ 15 ನೋಡಿ



ಎರಡು ವ್ಯಂಗ್ಯಚಿತ್ರಗಳು : ಎಡಗಡೆಯದ್ದು ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಪಿ.ಮಹಮ್ಮದ್ ರವರದ್ದು.
ಬಲಗಡೆಯದ್ದು ಡಿಎನ್‌ಎ ಪತ್ರಿಕೆಯಲ್ಲಿ ಮಂಜುಳ್ ಅವರದ್ದು– ಮೋದಿಯವರ ಅಭಿಯಾನವನ್ನು ಸೇರಿಕೊಳ್ಳಿ ಎಂಬ ಬ್ಯಾನರ್ ಎದುರು ಫೋಟೋ ತೆಗೆಸಿಕೊಳ್ಳಲು ಕ್ಯೂ.



'ಒಳ್ಳೆಯ ದಿನ'ಗಳ ಡೈರಿ

ವೇದರಾಜ ಎನ್.ಕೆ.



ಅಡುಗೆ ಅನಿಲ ಸಬ್ಸಿಡಿಯ ಮೇಲೆ ಮಿತಿ!

ಹಣಕಾಸು ಮಂತ್ರಿಗಳು ಇಂತಹ ಪ್ರಕಟಣೆಗಳ ಬೆನ್ನ ಹಿಂದೆಯೇ, ಕೇಂದ್ರ ಪೆಟ್ರೋಲಿಯಂ ಮಂತ್ರಿಗಳು "ಅಡುಗೆ ಅನಿಲದ ಮೇಲೆ ಸಬ್ಸಿಡಿಯ ಮೇಲೆ ಕೆ.ಜಿ.ಗೆ 20ರೂ. ಮಿತಿ ಹಾಕಲು ಸಂಪುಟ ನಿರ್ಧರಿಸಿದೆ" ಎಂದಿದ್ದಾರಂತೆ. ಇದರಿಂದ ಸದ್ಯಕ್ಕೆ ಅಡುಗೆ ಅನಿಲ ಸಿಲಿಂಡರಿನ ಬೆಲೆಯೇನೂ ಏರುವುದಿಲ್ಲ. ಆದರೆ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಇಳಿಕೆ ತಳ ಮುಟ್ಟಿದೆ, ಇನ್ನು ಮುಂದೆ ಅದು ಇಳಿಯುವ ಬದಲು ಏರುವ ಸಂಭವವೇ ಹೆಚ್ಚು ಎಂದೂ ವರದಿಯಾಗಿದೆ. ಆದರೆ ಸಬ್ಸಿಡಿ ಈ ತಳಮಟ್ಟದಲ್ಲೇ ಇರುತ್ತದೆ. ಅಂದರೆ ಮುಂದಿನ ಹೆಚ್ಚಳಗಳ ಸಂಪೂರ್ಣ ಹೊರೆಯನ್ನು ಅಡುಗೆ ಅನಿಲ ಬಳಕೆದಾರರೇ ಹೊರಬೇಕಾಗುತ್ತದೆ.

ಎಂದಿನಂತೆ ಇದರಲ್ಲಿಯೂ ಈ ಸರಕಾರ ಚಾಲಾಕಿತನ ಪ್ರದರ್ಶಿಸಿದೆ. 5ಕೆ.ಜಿ.ಯ ಸಣ್ಣ ಸಿಲಿಂಡರುಗಳನ್ನು ಬಳಸುವವರಿಗೂ ಈ ಸಬ್ಸಿಡಿ ಸಿಗುವಂತೆ ಮಾಡಲು ಈ ರೀತಿ ಇಡೀ ಅಡುಗೆ ಅನಿಲ ಸಿಲಿಂಡರಿಗೆ ಸಬ್ಸಿಡಿ ಕೊಡುವ ಬದಲು, ಕೆ.ಜಿ.ಗೆ 20ರೂ.ನಂತೆ ಗರಿಷ್ಟ ಮಿತಿ ಹಾಕಲಾಗಿದೆ ಎಂದು ಬಿಂಬಿಸಲು ಪ್ರಯತ್ನಿಸಿದ್ದಾರೆ.

ಇದಲ್ಲದೆ ಯುಪಿಎ–2 ಸರಕಾರ ಭಾರೀ ಪ್ರತಿಭಟನೆಯ ಹಿನ್ನೆಲೆಯಲ್ಲಿ ಕೈಬಿಟ್ಟ ಸಬ್ಸಿಡಿ ಮೊತ್ತವನ್ನು ನೇರವಾಗಿ ಬಳಕೆದಾರರ ಬ್ಯಾಂಕ್ ಖಾತೆಗೆ ವರ್ಗಾಯಿಸುವ ಕ್ರಮವನ್ನು ಈ ಸರಕಾರ ಮತ್ತೆ ತರಲು ನಿರ್ಧರಿಸಿದೆಯಂತೆ. ಅಂದರೆ ಇನ್ನು ಮುಂದೆ ಅಡುಗೆ ಅನಿಲ ಬಳಕೆದಾರರು ಮಾರುಕಟ್ಟೆ ಬೆಲೆಯನ್ನು ತೆರಬೇಕು, ಮಿತಿ ಹೇರಲ್ಪಟ್ಟ ಸಬ್ಸಿಡಿ ಮೊತ್ತವನ್ನುಸರಕಾರ ಅದನ್ನು ಅವರ ಖಾತೆಗೆ ವರ್ಗಾಯಿಸಿದಾಗಲಷ್ಟೇ ಪಡೆಯಬೇಕು!

'ಅಭಿವೃದ್ಧಿ' ಅಜೆಂಡಾದ ಆಚೆ

ಸುದ್ದಿ: 'ಆರೆಸ್ಸೆಸ್ ವ್ಯಕ್ತಿ' ನಾಗಪುರ ಎನ್‌ಐಟಿಗೆ ಮುಖ್ಯಸ್ಥ



ಇದು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಪ್ರಕಟವಾಗಿರುವ ಇ.ಪಿ.ಉನ್ನಿಯವರ ವ್ಯಂಗ್ಯ ಚಿತ್ರದ ಒಕ್ಕಣಿಕೆ. ಇದಕ್ಕೆ ಪ್ರೇರಣೆಯಾದ ಸುದ್ದಿಯೆಂದರೆ "ತನ್ನನ್ನು ಆರೆಸ್ಸೆಸ್ ವ್ಯಕ್ತಿಯೆಂದು ಹೇಳಿಕೊಂಡ ಅರ್ಜಿದಾರನಿಂದ ಇರಾನಿಯವರಿಗೆ ಹೊಗಳಿಕೆ, ವಾರದ ನಂತರ ಆತ ನಾಗಪುರ ಎನ್‌ಐಟಿ ಮುಖ್ಯಸ್ಥ". ಇದು ಅದೇ ಪತ್ರಿಕೆಯಲ್ಲಿ ಪ್ರಕಟವಾಗಿರುವ ಸುದ್ದಿ(http://indianexpress.com/article/india/india-others).

ಆತ ಸ್ಮೃತಿ ಇರಾನಿಯವರು ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಾಗ ಅವರನ್ನು ಅಭಿನಂದಿಸುತ್ತ ತನ್ನ ಕೆಲಸದ ಅರ್ಜಿಯನ್ನು ಆಕೆಗೆ ಕಳಿಸಿದರು, ಜತೆಗೆ ತಾನೊಬ್ಬ 'ಆರೆಸ್ಸೆಸ್ ವ್ಯಕ್ತಿ', ಇರಾನಿಯವರು ನಾಗಪುರದಲ್ಲಿ ಇದ್ದಾಗ ಒಮ್ಮೆ ತನ್ನ ಮನೆಯಲ್ಲಿ ತಂಗಿದ್ದರು ಎಂದು ನೆನಪಿಸಿದ್ದರು. ಅವರೀಗ ನಾಗಪುರದ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ(ಎನ್‌ಐಟಿ)ಯ ಅಧ್ಯಕ್ಷರು. ಅವರ ಹೆಸರು ವಿಶ್ರಾಮ್ ಜಮಾದಾರ್. ಅವರು ಅದೇ ಸಂಸ್ಥೆಯಲ್ಲಿ ಶಿಕ್ಷಣ ಪಡೆದು 2002ರಿಂದ 2012ರ ವರೆಗೆ ಆ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾಗಿದ್ದವರು.


ಕರ್ನಾಟಕದ ಸುರತ್ಕಲ್‌ನಲ್ಲಿರುವ ಎನ್‌ಐಟಿ ಸೇರಿದಂತೆ 12 ಎನ್‌ಐಟಿಗಳ ಅಧ್ಯಕ್ಷರ ಹುದ್ದೆಗಳಿಗೆ ನೇಮಕವಾಗಬೇಕಾಗಿದೆ. ಈ ಎನ್‌ಐಟಿಗಳು ಕೇಂದ್ರ ಸರಕಾರದ ಅಡಿಯಲ್ಲಿರುವ ಉನ್ನತ ತಂತ್ರಜ್ಞಾನ

ಪುಟ 15 ನೋಡಿ

10.7 ವರ್ಷಗಳ ಕಾಲ 600 ಕೋಟಿ ಕಿ.ಮೀ. ದೂರ ಕ್ರಮಿಸಿದ ರೋಸೆಟ್ಟಾ ಗಗನನೌಕೆ

ಧೂಮಕೇತುವಿನ ಮೇಲೆ ಪಾದರ್ಪಣೆ ಮಾಡಿದ ಉಪಗ್ರಹ ರೋಸೆಟ್ಟಾ ಗಗನನೌಕೆಯ ದೀರ್ಘ ಪಯಣ

ರೋಸೆಟ್ಟಾ ಎಂಬ ಗಗನನೌಕೆಯು ಸುಮಾರು 10.7ವರ್ಷಗಳ ಕಾಲ 600 ಕೋಟಿ ದೂರವನ್ನು ಗಗನದಲ್ಲಿ ಕ್ರಮಿಸಿ, ಮೊದಲಬಾರಿಗೆ ಮೊನ್ನೆಯಷ್ಟೇ ಧೂಮಕೇತುವಿನ ಅತಿ ಸನಿಹಕ್ಕೆ ತಲುಪಿತು. ತನ್ನಲ್ಲಿದ್ದ ಫಿಲೈ ಎಂಬ ರೋಬೋಟ್ ಲ್ಯಾಂಡರ್‌ನ್ನು ಹೊರಬಿಟ್ಟದಾಕ್ಷಣ ಅದು ಆ ಧೂಮಕೇತುವಿನ ಚಿತ್ರಗಳನ್ನು ಚಕಚಕನೆ ಕ್ಲಿಕ್ಕಿಸಿ ಭೂಮಿಯಲ್ಲಿನ ನಿಯಂತ್ರಣ ಕೇಂದ್ರಕ್ಕೆ ಕಳುಹಿಸಿಕೊಟ್ಟಿತು. ನಂತರ ಕೆಲವೇ ಕ್ಷಣಗಳಲ್ಲಿ ಈ ಲ್ಯಾಂಡರ್ ಧೂಮಕೇತುವಿನ ಮೇಲೆ ಪಾದರ್ಪಣೆ ಮಾಡಿತು. ಪ್ರಥಮ ಬಾರಿಗೆ ಧೂಮಕೇತುವಿನ ಮೇಲೆ ಪಾದರ್ಪಣೆ ಮಾಡಿದ ಲ್ಯಾಂಡರ್ ಇದು. ಧೂಮಕೇತುವು ಘಂಟೆಗೆ 35,000 ಕಿ.ಮೀ. ವೇಗದಲ್ಲಿ ಚಲಿಸುತ್ತಿದ್ದರೆ, ಗಗನನೌಕೆಯು ಘಂಟೆಗೆ 1.35 ಲಕ್ಷ ಕಿ.ಮೀ. ವೇಗದಲ್ಲಿ ಅದನ್ನು ಬೆಂಬತ್ತಿ ತಲುಪಿದೆ.




67ಪಿ ಎಂಬ ಹೆಸರಿನ ಈ ಧೂಮಕೇತುವನ್ನು ಮೊದಲಿಗೆ 1969ರಲ್ಲಿ ಸೋವಿಯತ್ ವಿಜ್ಞಾನಿಗಳಾದ ಚ್ಯುರಿಮೊವ್ ಮತ್ತು ಗೆರೆಸಿಮೆಂಕೋರವರು ಪತ್ತೆ ಹಚ್ಚಿದರು. ಇದರ ಅಧ್ಯಯನಕ್ಕಾಗಿ ಯೂರೋಪ್ ಬಾಹ್ಯಾಕಾಶ ಸಂಸ್ಥೆಯು 2004ರ ಮಾರ್ಚ್ ತಿಂಗಳಲ್ಲಿ ರೋಸೆಟ್ಟಾ ಎಂಬ ಗಗನನೌಕೆಯನ್ನು ಫಿಲೈ ಎಂಬ ರೋಬೋಟ್ ಲ್ಯಾಂಡರ್ ನೊಂದಿಗೆ ಸುಮಾರು 11 ಇತರೆ ಉಪಕರಣಗಳ ಸಮೇತ ಉಡಾವಣೆ ಮಾಡಿತ್ತು. ಮೊನ್ನೆಯಷ್ಟೇ ಅಂದರೆ ಸುಮಾರು 10.7 ವರ್ಷಗಳ ಸುದೀರ್ಘ ಪಯಣದ ನಂತರ ಇವುಗಳು ಧೂಮಕೇತುವನ್ನು ತಲುಪಿವೆ. ಗಗನನೌಕೆ ಮತ್ತು ಉಪಗ್ರಹಗಳ ನಿಯಂತ್ರಣ ಕಾರ್ಯವನ್ನು ಜರ್ಮನಿಯಲ್ಲಿರುವ ಯೂರೋಪ್ ಬಾಹ್ಯಾಕಾಶ ಸಂಸ್ಥೆಯ ನಿಯಂತ್ರಣ ಕೇಂದ್ರದಿಂದ ನಿರ್ವಹಿಸಲಾಗುತ್ತಿದೆ. ರೋಸೆಟ್ಟಾ ಗಗನನೌಕೆಗೆ ಅದರಲ್ಲಿರುವ 1500 ವ್ಯಾಟ್ ಸಾಮರ್ಥ್ಯದ ಸೌರ ಪ್ಯಾನೆಲ್‌ಗಳಿಂದ ವಿದ್ಯುತ್ ಪೂರೈಕೆಯಾಗುತ್ತದೆ. ಗಗನನೌಕೆಯನ್ನು ಹೊತ್ತಿದ್ದ ರಾಕೆಟ್ ಸುಮಾರು 1,670 ಕೆ.ಜಿ. ಇಂಧನವನ್ನು ಕೊಂಡೊಯ್ದಿತ್ತು. ಫಿಲೈ ಲ್ಯಾಂಡರ್ ಸುಮಾರು 100 ಕೆಜಿ ತೂಕವಿದೆ.

ಗಗನನೌಕೆಯ ಉದ್ದೇಶ :

ರೋಸೆಟ್ಟಾ-ಫಿಲೈ ಗಗನನೌಕೆ ಉಪಗ್ರಹಗಳ ಉದ್ದೇಶ ನಮ್ಮ ಸೌರವ್ಯೂಹ ಇತಿಹಾಸ ಕುರಿತ ದೊಡ್ಡ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು. ಮೊದಲಿಗೆ ಸೂರ್ಯನಿಂದ 80 ಕೋಟಿ ಕಿ.ಮೀ. ದೂರ ಕ್ರಮಿಸಿದ ಈ ಗಗನನೌಕೆಯು ಎರಡು ಕ್ಷುದ್ರಗಹಗಳನ್ನು ಬೆಂಬತ್ತುವ ಕಾರ್ಯ ನಿಮಿತ್ತ ಗುರುಗ್ರಹದ ಕಕ್ಷೆಯನ್ನು ದಾಟಿ ಭೂಮಿಯನ್ನು ಮೂರು ಸಲ ಮಂಗಳ ಗ್ರಹ ಕಕ್ಷೆಯನ್ನು ಒಂದು ಬಾರಿ ದಾಟಿದೆ.

ಧೂಮಕೇತುಗಳ ಅಧ್ಯಯನದ ಪ್ರಾಮುಖ್ಯತೆ :

ಧೂಮಕೇತುಗಳೆಂದರೆ ಅತಿ ಭಯಪಡುತ್ತಿದ್ದ ಕಾಲವೊಂದಿತ್ತು. ಧೂಮಕೇತುಗಳು ಅನ್ಯ ಗ್ರಹ ಜೀವಿಗಳೆಂದೂ, ಅವು ಭೂಗ್ರಹದ ಜೀವಿಗಳ ಮೇಲೆ ಧಾಳಿ ಇಡುತ್ತವೆಂದೂ, ಅವು ಅಪಶಕುನಗಳ ಸಂಕೇತವೆಂದೂ, ಇತ್ಯಾದಿ ನಂಬಿಕೆಗಳಿದ್ದವು. ಆದರೆ ಧೂಮಕೇತುಗಳು ನಮ್ಮ ಸೌರವ್ಯೂಹದಲ್ಲಿನ





ಅತಿ ಶೀತಲ ಪ್ರದೇಶದಲ್ಲಿ ರೂಪುಗೊಂಡ ವಸ್ತುಗಳು. ಅವುಗಳು ಮಂಜುಗಡ್ಡೆ, ನೀರು ಮತ್ತು ಧೂಳಿನಿಂದ ಕೂಡಿದ್ದು, ಅವುಗಳು ಭೂಮಿಯ ಮೇಲೆ ಬಿದ್ದ ಕಾರಣ ಕೋಟ್ಯಾನುಕೋಟಿ ವರ್ಷಗಳ ಹಿಂದೆ ಭೂಮಿಯ ವಿಕಾಸದಲ್ಲಿ ಮತ್ತು ಹಲವು ಮೂಲಧಾತುಗಳನ್ನು ಭೂಮಿಗೆ ನೀಡಿರುವುದರಲ್ಲಿ ಮಹತ್ತರ ಪಾತ್ರ ವಹಿಸಿವೆ ಎನ್ನಲಾಗುತ್ತದೆ. ಇಂದಿಗೆ ಸುಮಾರು 5200 ಧೂಮಕೇತುಗಳನ್ನು ಗುರುತಿಸಲಾಗಿದೆ. ಧೂಮಕೇತುಗಳ ಅಧ್ಯಯನ ನಡೆಸಲು ಅವುಗಳು ಕಾಣಿಸಿಕೊಂಡಾಕ್ಷಣ ಅವುಗಳ ಚಿತ್ರಗಳು, ಅವುಗಳು ಹೊಂದಿರುವ ವಸ್ತುಗಳ ಸ್ಯಾಂಪಲ್ ಮಾದರಿಗಳನ್ನು ಕಲೆಹಾಕಿ ಖಗೋಳವಿಜ್ಞಾನಿಗಳು ವಿಶ್ಲೇಷಣೆ ಮಾಡುತ್ತಾ ಬಂದಿದ್ದಾರೆ.

460 ಕೋಟಿ ವರ್ಷಗಳ ಹಿಂದೆ ಸೌರವ್ಯೂಹವು ರೂಪುಗೊಂಡ ಸಂದರ್ಭಕ್ಕೂ ಮುಂಚಿನ ಸೌರ-ಗರ್ಭಾವಸ್ಥೆಯ ಸಂರಚನೆಯನ್ನು ಈ ಧೂಮಕೇತುಗಳು ಹೊಂದಿವೆ. ಇದ-ರಿಂದ ನಮ್ಮ ಸೌರವ್ಯೂಹ ಮತ್ತು ಭೂಮಿಯ ವಿಕಾಸದ ಕುರಿತು ಮಾಹಿತಿಗಳಿಗಾಗಿ ಧೂಮಕೇತುಗಳ ಅಧ್ಯಯನ ಪ್ರಾಮುಖ್ಯತೆ ಪಡೆದಿದೆ. ಇದಕ್ಕೂ ಮುನ್ನವೇ ಸೌರವ್ಯೂಹವು ಉಗಮಗೊಂಡ ಬಾಲ್ಯಾವಸ್ಥೆಯಲ್ಲಿ ಯಾವ ರೀತಿಯ ಪರಿಸ್ಥಿತಿ ಇದ್ದವು? ಸೌರವ್ಯೂಹ ವಿಕಾಸದಲ್ಲಿ ಧೂಮಕೇತುಗಳ ಪಾತ್ರವೇನು? ಧೂಮಕೇತುಗಳು ಹೇಗೆ ಕಾರ್ಯನಿರ್ವಹಿಸುತ್ತವೆ? ಎಂಬುದು ಸಂಶೋಧನೆಯ ವಿಷಯವಾಗಿದೆ.



ದೇಶದ ಆದಿವಾಸಿ-ಬುಡಕಟ್ಟು ಜನಸಮುದಾಯಗಳು ತಾವು ಪಾರಂಪರಿಕವಾಗಿ ಅನುಭೋಗಿಸಿಕೊಂಡು ಬರುತ್ತಿದ್ದ ಅರಣ್ಯ ಭೂಮಿಯನ್ನು ಕಳೆದುಕೊಂಡು ನಿರ್ಗತಿಕರಾಗುತ್ತಿದ್ದಾರೆ. ಉ.ಕ. ಜಿಲ್ಲೆಯ ಸಿದ್ದಿ, ಕುಣಬಿ, ಹಾಲಕ್ಕಿ, ಕುಂಬ್ರಿ ಮರಾಠಿ, ಗೌಳಿ ಜನಸಮುದಾಯ ಸಂಕಷ್ಟದಲ್ಲಿದ್ದಾರೆ. ಸರಕಾರದ ವಿವಿಧ ಯೋಜನೆಗಳು ರಾಷ್ಟ್ರೀಯ ಉದ್ಯಾನವನ, ಹುಲಿ ಯೋಜನೆ, ಜೀವ ವೈವಿಧ್ಯತೆಯ ರಕ್ಷಣೆ-ಯ ಹೆಸರಿನಲ್ಲಿ ಪಶ್ಚಿಮ ಘಟ್ಟದಿಂದ ಒಕ್ಕಲೆಬ್ಬಿಸುವ ಕಸ್ತೂರಿ ರಂಗನ್ ವರದಿ ಅನುಷ್ಠಾನ, ರಸ್ತೆ ನಿರ್ಮಾಣ, ರೈಲ್ವೆ ಹಳಿ, ಅಣೆಕಟ್ಟು ನಿರ್ಮಾಣ, ವಿದ್ಯುತ್ ಯೋಜನೆಗಳು, ಗಣಿಗಾರಿಕೆ ಮತ್ತು ಕೈಗಾರಿಕಾ ಘಟಕಗಳಿಗೆ, ಅಭಿವೃದ್ಧಿ ಯೋಜನೆಗಳಿಗೆ ಮೊದಲ ಬಲಿಗಳು ಆದಿವಾಸಿ ಸಮುದಾಯಗಳೇ ಆಗಿವೆ. ಇದಲ್ಲದೆ ಲೇವಾದೇವಿಗಾರರು, ಅರಣ್ಯ ಕಂಟ್ರಾಕ್ಟ್‌ದಾರರು ಹಾಗೂ ಇನ್ನಿತರೆ ಮಧ್ಯವರ್ತಿಗಳ ಸುಲಿಗೆ, ವಂಚನೆಗಳಿಗೂ, ಸಾಲದ ಶೂಲಕ್ಕೂ ಬಲಿ ಬಿದ್ದು ತಮ್ಮ ಅನುಭೋಗದ ಭೂಮಿಯನ್ನು ಕಳೆದುಕೊಂಡು ನಿರ್ಗತಿಕವಾಗಿ, ಜೀತದಾಳುಗಳಂತೆ ಅತಂತ್ರದ ಬದುಕು ಸಾಗಿಸುತ್ತಿದ್ದಾರೆ. ಆದಿವಾಸಿ-ಬುಡಕಟ್ಟು ಜನರ ರಕ್ಷಣೆಗೆಂದು ತರಲಾದ ಅರಣ್ಯ ಹಕ್ಕುಗಳ ಕಾಯ್ದೆ 2006ರ ಸಮರ್ಪಕ ಜಾರಿಯಾಗುತ್ತಿಲ್ಲ.

ಈ ಹಿನ್ನೆಲೆಯಲ್ಲಿ ಅಕ್ಟೋಬರ್ 6ರಂದು ಉತ್ತರ ಕನ್ನಡ ಜಿಲ್ಲಾ ಮಟ್ಟದ ಆದಿವಾಸಿಗಳ ಸಮಾವೇಶ ಜೋಯಿಡಾದಲ್ಲಿ ನಡೆಯಿತು. ಈ ಸಮಾವೇಶವನ್ನು ಉದ್ಘಾಟಿಸಿ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಸಹ ಸಂಚಾಲಕರಾದ ಎಸ್.ವೈ. ಗುರುಶಾಂತ ಮಾತನಾಡಿದರು. ಅತಿಥಿಗಳಾಗಿ ರಾಜ್ಯ ಸಂಚಾಲಕರಾದ ವೈ.ಕೆ. ಗಣೇಶ, ಸಹ ಸಂಚಾಲಕರಾದ ಕೃಷ್ಣಪ್ಪ ಕೊಂಚಾಡಿ ಭಾಗವಹಿಸಿ ಮಾತನಾಡಿದರು. ಅಧ್ಯಕ್ಷತೆಯನ್ನು ಜಿಲ್ಲಾ ಸಂಚಾಲಕರಾದ ಪ್ರೇಮಾನಂದ ವೇಳಿಪ ವಹಿಸಿದ್ದರು. ಪ್ರಾಸ್ತಾವಿಕ ಮಾತನ್ನು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ ಆಡಿದರು.

ವೇದಿಕೆಯಲ್ಲಿ ಉಪಸ್ಥಿತರಿದ್ದ ಸಿ.ಐ.ಟಿ.ಯು. ಜಿಲ್ಲಾ ಕಾರ್ಯದರ್ಶಿ ಯಮುನಾ ಗಾಂವಕರ, ದೇವಿ ಗೌಡ ಅಂಕೋಲಾ, ದಯಾನಂದ ಗಾವುಡ ಜೋಯಿಡಾ, ಮಹೇಶ ಪಾಟೀಲ ಜೋಯಿಡಾ, ಕೃಷ್ಣ ಗಾಂವಕರ ಕಾರವಾರ ಮುಂತಾದವರು ಮಾತನಾಡಿದರು.

ನೂತನ ಸಮಿತಿ ರಚನೆ

ಜಿಲ್ಲಾ ಮಟ್ಟದ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಗೆ ಸಂಚಾಲಕರಾಗಿ ಪ್ರೇಮಾನಂದ ವೇಳಿಪ ಜೋಯಿಡಾ ಆಯ್ಕೆಯಾದರು. ಸಹ ಸಂಚಾಲಕರಾಗಿ ದೇವಿ ಗೌಡ ಅಂಕೋಲಾ, ಮಹೇಶ ಪಾಟೀಲ ಜೋಯಿಡಾ, ಕೃಷ್ಣಾ ಗಾಂವಕರ ಕಾರವಾರ, ಸಮಿತಿ ಸದಸ್ಯರಾಗಿ ರಾಜೇಶ ಗಾವುಡ ಜೋಯಿಡಾ, ಬಾಳಸೋ ವೇಳಿಪ ಕುಂಡಲ, ನಾಗೇಶ ಗೌಡ ಬೇಲೆಕೇರಿ, ರಾಜು ಜಿ. ಗೌಡ ಅಂಕೋಲಾ, ನಾಗೇಂದ್ರ ಸಿದ್ದಿ ಯಲ್ಲಾಪುರ, ಚಂದ್ರಕಾಂತ ಮರಾಠಿ ಆಯ್ಕೆಯಾದರು.

ಎಡ ಅಧ್ಯಕ್ಷೆ ದಿಲ್ಮಾ ಪುನರಾಯ್ಕೆ...

ಪುಟ 16 ರಿಂದ

ಇದರಿಂದಾಗಿ ಬ್ರೆಜಿಲ್ ದೇಶದ ಮಟ್ಟದಲ್ಲೂ, ಲ್ಯಾಟಿನ್ ಅಮೆರಿಕ ಖಂಡದ ಮಟ್ಟದಲ್ಲೂ ಜಾಗತಿಕ ಬಂಡವಾಳಶಾಹಿಯ ವಿರುದ್ಧ ಹೋರಾಟ ಮುಂದುವರೆಸುವುದು ಸಾಧ್ಯವಾಗುತ್ತದೆ.

ಇದರರ್ಥ ಬ್ರೆಜಿಲ್ ಮತ್ತು ಲ್ಯಾಟಿನ್ ಅಮೆರಿಕದಲ್ಲಿ ಜಾಗತಿಕ ಬಂಡವಾಳಶಾಹಿ ಸೋತಿದೆ. ಅದು ಕೈಚೆಲ್ಲಿ ಕೂರುತ್ತದೆ ಎಂದಲ್ಲ. ರಾಜಕೀಯವಾಗಿ ಸೋತಿರಬಹುದು. ಅದು ಆರ್ಥಿಕವಾಗಿ ಈ ಸರಕಾರವನ್ನು ಮಣಿಸಲು ಎಲ್ಲಾ ಪ್ರಯತ್ನ ಮಾಡುತ್ತದೆ. ದಿಲ್ಮಾ ವಿಜಯ ಘೋಷಣೆ ಆಗುತ್ತಿದ್ದಂತೆ ಬ್ರೆಜಿಲ್‌ನ ಪ್ರಮುಖ ಷೇರು ಮಾರುಕಟ್ಟೆ ಕೇಂದ್ರವಾದ 'ಸಾವೋ ಪೊಲೊ'ದ ಶೇರು ಪೇಟೆ ಬೆಲೆಗಳು ಬಿದ್ದು ಹೋದವು. ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟು ಬ್ರೆಜಿಲ್ ಸರಕಾರದ ಜನ-ಪರ ನೀತಿ ಮುಂದುವರೆಸುವ ಶಕ್ತಿಯನ್ನು ಕುಗ್ಗಿಸುತ್ತಾ ಹೋಗುತ್ತದೆ.

ಅದರಲ್ಲೂ ಚವೇಝ್, ಇವೊ ಮೊರಾಲೆಸ್ ಅವರಿಗೆ ಮತ್ತು ಅವರ ಪಕ್ಷಗಳಿಗೆ ಬಂಡವಾಳಶಾಹಿ ವ್ಯವಸ್ಥೆಯನ್ನು ಬದಲಾಯಿಸಬೇಕು ಎಂಬ ಕಣ್ಣೋಟ ಅಷ್ಟು ಸ್ಪಷ್ಟವಾಗಿ ಇಲ್ಲದಿರುವುದೂ ಮುಂದಿನ ದಿನಗಳಲ್ಲಿ ಒಂದು ಸವಾಲು ಆಗಬಹುದು. ಆದರೆ ಬ್ರೆಜಿಲ್‌ನ ಜನತೆ ಮತ್ತು ಎಡಶಕ್ತಿಗಳು ಇಂತಹ ಸಂದರ್ಭ ಒದಗಿದಾಗ ಈ ಸವಾಲನ್ನು ಎದುರಿಸಲು ಸಮರ್ಥವಾಗುವವು ಎಂಬ ಆಶಾಭಾವನೆಯೂ ಇದೆ. ಸದ್ಯಕ್ಕಂತೂ ಇದೊಂದು ಅತ್ಯಂತ ಸಕಾರಾತ್ಮಕ ಜಾಗತಿಕ ಬೆಳವಣಿಗೆ.

ರೂವಾರಿಯ ರಾಜ್ಯದಲ್ಲೇ ಸಿಎಜಿ ತರಾಟೆ

ಪುಟ 13 ರಿಂದ

ಅವರ ಇತರ ಹಲವು ಇಂತಹ 'ಅಪೂರ್ವ' ಘೋಷಣೆಗಳಂತೆ ಹಿಂದಿನ ಸರಕಾರಗಳು ಆರಂಭಿಸಿದ್ದ ಕಾರ್ಯಕ್ರಮಗಳ ಹೊಸ ಪ್ಯಾ–ಕೇಜಿಂಗ್ ಅಷ್ಟೇ. 1999ರಲ್ಲಿ ಕೇಂದ್ರ ಗ್ರಾಮೀಣ ಅಭಿವೃದ್ಧಿ ಮಂತ್ರಾಲಯ 'ಸಂಪೂರ್ಣ ಶುಚಿತ್ವ ಪ್ರಚಾರಂದೋಲನ'(ಟಿಎಸ್‌ಸಿ) ಎಂಬುದನ್ನು ಆರಂಭಿಸಿತು. 2012ರಲ್ಲಿ ಯುಪಿಎ–2 ಸರಕಾರ ಇದಕ್ಕೆ 'ನಿರ್ಮಲ ಭಾರತ ಅಭಿಯಾನ' ಎಂದು ಮರುನಾಮಕರಣ ಮಾಡಿತು. ಅದನ್ನೇ ಈಗ 'ಈ ಬಾರಿ'ಯ ಸರಕಾರ 'ಸ್ವಚ್ಛ ಭಾರತ ಅಭಿಯಾನ' ಎಂದು ಪ್ರಚಾರ ಮಾಡುತ್ತಿದೆ. ನಿಜ, ಹೆಸರು ಬದಲಿಸಿದಾಗಲೆಲ್ಲ ಏನೋ ಒಂದು ಔಪಚಾರಿಕ ಬದಲಾವಣೆ ಮಾಡಲಾಗಿರುತ್ತದೆ.

ಈ ವಿಷಯದಲ್ಲಿ ಮತ್ತೊಂದು ರೋಚಕ ಸಂಗತಿ ಕಳೆದ ವಾರ ವರದಿಯಾಗಿದೆ. ಕಳೆದ ಮಂಗಳವಾರ ಗುಜರಾತ್ ವಿಧಾನ ಸಭೆಯಲ್ಲಿ 2008ರಿಂದ 2013ರ ಅವಧಿಯಲ್ಲಿ ಆ ರಾಜ್ಯದಲ್ಲಿ ಈ ಟಿಎಸ್‌ಸಿ ಕಾರ್ಯಕ್ರಮದ ಜಾರಿಯ ಬಗ್ಗೆ ಭಾರತದ ಮಹಾ ಲೆಕ್ಕ ಪರಿಶೋಧಕರ(ಸಿಎಜಿ) ವರದಿಯನ್ನು ಮಂಡಿಸಲಾಯಿತು. ಇದು ಗುಜರಾತಿನಲ್ಲಿ ಈ ಅವಧಿಯಲ್ಲಿ ಈ ಕಾರ್ಯಕ್ರಮವನ್ನು ಬಹಳ ಕಳಪೆ ರೀತಿಯಲ್ಲಿ ಜಾರಿ ಮಾಡಿರುವುದಾಗಿ ಸರಕಾರವನ್ನು ತರಾಟೆಗೆ ತೆಗೆದುಕೊಂಡಿದೆ. ಮುನಿಸಿಪಲ್ ಘನತ್ಯಾಜ್ಯ ವಿಲೇವಾರಿಯನ್ನು ಕೆಟ್ಟದಾಗಿ ನಿರ್ವಹಿಸಲಾಗಿದೆಯಷ್ಟೇ ಅಲ್ಲ, ಈ ಪ್ರಾಜೆಕ್ಟಿಗೆ ನೀಡಿದ ಕೇಂದ್ರ ಸರಕಾರ ಅನುದಾನದ ದುರುಪಯೋಗವಾಗಿದೆ ಎಂದೂ ಅದು ಹೇಳಿದೆ. ಈ ಕಾರ್ಯಕ್ರಮದ 'ವಿಸ್ಮಯಕಾರಿ' ಪ್ರಾಜೆಕ್ಟ್ ಅನುಷ್ಠಾನ ಯೋಜನೆಗಳನ್ನು ತಯಾರಿಸಲಾಗಿದ್ದರೂ ರಾಜ್ಯದ ಸುಮಾರು 5000 ಅಂಗನವಾಡಿಗಳಲ್ಲಿ ಶೌಚಾಲಯಗಳೇ ಇಲ್ಲ ಎಂದು ಈ ಸಿಎಜಿ ವರದಿ ಟಿಪ್ಪಣಿ ಮಾಡಿದೆ. ಅಹಮದಾಬಾದ್ ಮತ್ತು ಪೋರ್‌ಬಂದರ್ ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಈ ದಿಸೆಯಲ್ಲಿ ಮಾಡಿದ ದುಂದುವೆಚ್ಚಗಳ ಬಗ್ಗೆ ಯಾರನ್ನೂ ಹೊಣೆಗಾರರನ್ನಾಗಿ ಮಾಡಲಾಗಿಲ್ಲ ಎಂದೂ ಸಿಎಜಿ ವರದಿ ಬೊಟ್ಟು ಮಾಡಿದೆ(ಎಕನಾಮಿಕ್ ಟೈಮ್ಸ್ ಬ್ಯೂರೊ, ನವಂಬರ್ 12).

ವಿಐಪಿ ನೇತಾರರ ಸ್ವಚ್ಛತಾ ಅಭಿಯಾನದ ಮೊದಲು ಹರಡಿಸಲು **ಸುವಾಸನೆಯ ಕಸ** ಕೆ.ಜಿ.ಗೆ ರೂ.150



ಕೃಪೆ: ಬಾಮುಲಾಹಿಜಾ. ಕಾಂ

ಇದು ವಾಸ್ತವವಾಗಿ ಈಗ 'ಸ್ವಚ್ಛ ಭಾರತ ಅಭಿಯಾನ'ದ ರೂವಾರಿಯ ಪ್ರಾಮಾಣಿಕತೆಯ ಮೇಲೆ ಮಾಡಿರುವ ಟಿಪ್ಪಣಿ ಎಂದು ಬೇರೆ ಹೇಳಬೇಕಾಗಿಲ್ಲ. ಏಕೆಂದರೆ ಈ 2008–13ರ ಅವಧಿಯಲ್ಲಿ ಆ ರಾಜ್ಯದ ಮುಖ್ಯಮಂತ್ರಿಯಾಗಿದ್ದವರು ಅವರೇ!

ಇದೂ ಸಾಲದೆಂಬಂತೆ, ಗುಜರಾತ್ ಈ ವರ್ಷ 'ಮುನಿಸಿಪಾಲಿಕಾ 2014' ಎಂಬ ಹೆಸರಿನಲ್ಲಿ ರಾಜಧಾನಿ ಗಾಂಧಿನಗರದಲ್ಲಿ ಒಂದು ಅಂತರ್ರಾಷ್ಟ್ರೀಯ ಸಮ್ಮೇಳನವನ್ನು ನಡೆಸುತ್ತಿದೆಯಂತೆ. ಅದರ ಕೇಂದ್ರ ಬಿಂದು ಈ ಒಳ್ಳೆಯ ದಿನಗಳ ಸರಕಾರದ ಅದೇ 'ಸ್ವಚ್ಛ ಭಾರತ ಅಭಿಯಾನ'! ●

ಸುದ್ದಿ: 'ಆರೆಸ್ಸೆಸ್ ವ್ಯಕ್ತಿ' ನಾಗಪುರ ಎನ್‌ಐಟಿಗೆ ಮುಖ್ಯಸ್ಥ.............

ಪುಟ 13 ರಿಂದ

ಶಿಕ್ಷಣ ಸಂಸ್ಥೆಗಳು. ಇವುಗಳ ಅಧ್ಯಕ್ಷರನ್ನು ಮಾನವ ಸಂಪನ್ಮೂಲ ಇಲಾಖೆ ಸೂಚಿಸುವ ಹೆಸರುಗಳ ಪಟ್ಟಿಯಿಂದ ರಾಷ್ಟ್ರಪತಿಗಳು ನೇಮಿಸುತ್ತಾರೆ.

ಕಳೆದ ಜೂನ್ ತಿಂಗಳಿಂದ 12 ಎನ್‌ಐಟಿಗಳ ಅಧ್ಯಕ್ಷರ ನೇಮಕದ ವಿಷಯ ಮಂತ್ರಿಗಳ ಮುಂದೆ ಇದೆ. ಆಗಸ್ಟ್ 29ರಂದು ಮಂತ್ರಿಗಳು ಕೇವಲ ನಾಗಪುರ ಎನ್‌ಐಟಿಯ ಅಧ್ಯಕ್ಷರ ನೇಮಕದ ಶಿಫಾರಸನ್ನು ರಾಷ್ಟ್ರಪತಿಗಳಿಗೆ ಕಳಿಸಿದರು. ಅದ–ಕ್ಕೆ ಕೊಟ್ಟ ಕಾರಣ: 'ಆ ಸಂಸ್ಥೆ ಸತತವಾಗಿ ಈ ಹುದ್ದೆಯನ್ನು ಬೇಗನೇ ತುಂಬಬೇಕೆಂದು ಒತ್ತಾಯಿಸುತ್ತಾ ಬಂದಿದೆ.'

ಉದ್ಯೋಗಕ್ಕೆ ಸಂದರ್ಶನಗಳು:
ಬಹುಶಃ ನಾವೆಲ್ಲ ಮನೆಗೆ ಹಿಂದಿರುಗಬೇಕಾದ ಸಮಯ ಬಂತು!
–ಡಿಎನ್‌ಎ ಯಲ್ಲಿ ಮಂಜುಳ್



ಮಾನವ ಸಂಪನ್ಮೂಲ ಇಲಾಖೆ ಈ ಹುದ್ದೆಗೆ ನಾಲ್ಕು ಹೆಸರುಗಳನ್ನು ಸೂಚಿಸಿತ್ತು. ಡಾ.ಶ್ರೀರಾಮ್ ಇನಾಂದಾರ್, ಡೆಲವೆರ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರು, ಬಿ.ಎಂ.ಮುಂಜಲ್, ಹೀರೋ ಹೊಂಡಾ ಮೋಟರ್ಸ್ ಅಧ್ಯಕ್ಷರು, ಎಂ.ಜಿ.ಪರಮೇಶ್ವರನ್, ಉಲ್ಕ ಅಡ್ವರ್ಟೈಸಿಂಗ್ ಕಂಪನಿಯ ಕಾರ್ಯಕಾರಿ ನಿರ್ದೇಶಕರು ಮತ್ತು ಅರ್ಜುನ್ ಜೈನ್, ಪೊಲರಿಸ್ ಸಾಫ್ಟ್‌ವೇರ್ ಲ್ಯಾಬ್ ಅಧ್ಯಕ್ಷರು. ಇದಲ್ಲದೆ ಮಂತ್ರಿಗಳು ತಾವೇ ಯಾವುದಾದರೂ ಸೂಕ್ತ ಹೆಸರನ್ನು ಸೂಚಿಸಬಹುದು ಎಂದು ಇಲಾಖೆ ಮಂತ್ರಿಗಳಿಗೆ ಆಯ್ಕೆ ನೀಡಿತ್ತು. ಒಂದು ವಾರದ ನಂತರ ಮಂತ್ರಿಗಳು ವಿಶ್ರಾಮ್ ಇನಾಂದಾರ್ ಅವರ ಹೆಸರನ್ನು ರಾಷ್ಟ್ರಪತಿಗಳಿಗೆ ಕಳಿಸಿದರು. ಸಪ್ಟಂಬರ್ 15ರಂದು ಮಂಜೂರು ಮಾಡಿದರು.

ಮಂತ್ರಿಗಳ ಸೂಚನೆಯಲ್ಲಿ ಇವರು 'ಲಘು ಉದ್ಯೋಗ್ ಭಾರತಿ' ಎಂಬ ಸಂಸ್ಥೆಯ ಅಧ್ಯಕ್ಷರು. ಈ ಸಂಸ್ಥೆಗೆ ನವದೆಹಲಿಯ ದೀನ್ ದಯಾಳ್ ಉಪಾಧ್ಯಾಯ ಮಾರ್ಗದಲ್ಲಿ ಒಂದು ಸಾಂಸ್ಥಿಕ ಪ್ಲಾಟನ್ನು 2003ರಲ್ಲಿ ಅಧಿಕಾರದಲ್ಲಿದ್ದ ಎನ್‌ಡಿಎ ಸರಕಾರ ಕೊಡಮಾಡಿದೆ ಎಂದು ಈ ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಹೇಳುತ್ತದೆ. ●

ಕಡಲತಡಿ ....

ಪುಟ 6 ರಿಂದ

ಬಸ್ ಪ್ರಯಾಣ ದರವನ್ನು ನಿಗದಿಪಡಿಸುವ ಸಲುವಾಗಿ ಸಾರಿಗೆ ಪ್ರಾಧಿಕಾರದ ಸಭೆಯನ್ನು ತಕ್ಷಣ ಕರೆಯಬೇಕು ಎಂದು ಆಗ್ರಹಿಸಿ ಡಿವೈಎಫ್ಐ



ಮತ್ತು ಎಸ್‌ಎಫ್‌ಐ ನೇತೃತ್ವದಲ್ಲಿ ನವಂಬರ್ 7 ರಂದು ಮಂಗಳೂರು ಆರ್‌ಟಿಓ ಕಚೇರಿಯ ಮುಂದೆ ಪ್ರತಿಭಟನೆ ನಡೆಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಡಿವೈಎಫ್ಐ



ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ದಯಾನಂದ ಶೆಟ್ಟಿ, ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ನಿತಿನ್ ಕುತ್ತಾರ್ ಮಾತನಾಡಿದರು. ಪ್ರತಿಭಟನೆಯ ನೇತೃತ್ವವನ್ನು ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ಚರಣ್ ಪಂಜಿಮೊಗರು, ಹಂಝ ಕಿನ್ಯಾ, ಮಾಧುರಿ ಬೋಳಾರ್, ಅಜಯ್, ಅಶ್ವಿದ್ ಉಳ್ಳಾಲ್, ಡಿವೈಎಫ್ಐ ಮುಖಂಡರಾದ ರಫೀಕ್ ಹರೇಕಳ, ಪ್ರಮೀಳಾ ಶಕ್ತಿ ನಗರ ಮತ್ತಿತರರು ವಹಿಸಿದ್ದರು.

ಗ್ರಾಮ ಪಂಚಾಯತ್ ನೌಕರರ ಖಾಯಮಾತಿಗಾಗಿ ಪ್ರತಿಭಟನೆ; ಫಲಪ್ರದ ಮಾತುಕತೆ

ಗ್ರಾಮ ಪಂಚಾಯತುಗಳಲ್ಲಿ ಹಲವಾರು ವರ್ಷಗಳಿಂದ ಕೆಲಸ ಮಾಡುತ್ತಿರುವ ನೌಕರರನ್ನು ಖಾಯಂಗೊಳಿಸುವಂತೆ ಆಗ್ರಹಿಸಿ ರಾಜ್ಯ ಗ್ರಾ.ಪಂ.ನೌಕರರ ಸಂಘ (ಸಿಐಟಿಯು)ದ ನೇತೃತ್ವದಲ್ಲಿ ನವಂಬರ್ 1 ರಿಂದ ಅನಿರ್ದಿಷ್ಟಾವಧಿ ಸತ್ಯಾಗ್ರಹ ದ.ಕ.ಜಿಲ್ಲಾ ಪಂಚಾಯತು ಕಚೇರಿ ಬಳಿ ಆರಂಭವಾಗಿದ್ದು ದ.ಕ.ಜಿಲ್ಲೆಯ ಇನ್ನೂರರಷ್ಟು ಗ್ರಾ.ಪಂ.ನೌಕರರು ಇದರಲ್ಲಿ ಭಾಗವಹಿಸಿದ್ದರು.

ಗ್ರಾಮ ಪಂಚಾಯತು ನೌಕರರನ್ನು ಖಾಯಂಗೊಳಿಸಲು ಒಪ್ಪಿದ ರಾಜ್ಯ ಸರ್ಕಾರ ಇದೀಗ ಅನೇಕ ಷರತ್ತುಗಳನ್ನು ವಿಧಿಸುವ ಮೂಲಕ ಗುತ್ತಿಗೆ ಆಧಾರದ ನೌಕರರಲ್ಲಿ ಹೆಚ್ಚಿನವರಿಗೆ ಇದರ ಪ್ರಯೋಜನ ಸಿಗುವಂತೆ ಮಾಡುತ್ತಿದೆ ಎಂದು ಸಂಘಟನೆಯ ಜಿಲ್ಲಾಧ್ಯಕ್ಷ ಯಾದವ ಶೆಟ್ಟಿ ಹೇಳಿದರು.

ಸಿಐಟಿಯು ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಸತ್ಯಾಗ್ರಹವನ್ನು ಉದ್ಘಾಟಿಸಿ ಮಾತನಾಡಿದರು.

ಪ್ರತಿಭಟನೆಯು ಎರಡನೇ ದಿನಕ್ಕೆ ಮುಂದುವರಿದಾಗ ಪ್ರತಿಭಟನಾಕಾರರನ್ನುದ್ದೇಶಿಸಿ ರಾಜ್ಯ ಗ್ರಾ.ಪಂ.ನೌಕರರ ಸಂಘದ ರಾಜ್ಯಾಧ್ಯಕ್ಷ ಮಾರುತಿ ಮಾನ್ಪಡೆ, ಸಿಐಟಿಯು ದ.ಕ.ಜಿಲ್ಲಾ ಮುಖಂಡರಾದ ಸುನಿಲ್ ಕುಮಾರ್ ಬಜಾಲ್, ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ಕರ್ನಾಟಕ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಉಪಾಧ್ಯಕ್ಷ ಕೃಷ್ಣಪ್ಪ ಸಾಲ್ಯಾನ್ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದರು.

ದ.ಕ.ಜಿಲ್ಲಾ ಪಂಚಾಯತು ವ್ಯಾಪ್ತಿಯಲ್ಲಿ 2 ಸಾವಿರ ಪಂಚಾಯತು ನೌಕರರಿದ್ದಾರೆ. ಗುತ್ತಿಗೆ ಆಧಾರದ ನೌಕರರನ್ನು ಖಾಯಂಗೊಳಿಸುವ ಶಿಫಾರಸು ಮಾಡುವ ವೇಳೆ 1500 ಮಂದಿಯ ಹೆಸರನ್ನು ಅನುಮೋದನೆಯ ಪಟ್ಟಿಯಿಂದ ಕೈಬಿಡಲಾಗಿದೆ. ಈ ಅನ್ಯಾಯವನ್ನು ಸರಿಪಡಿಸಬೇಕಾಗಿ ಮಾರುತಿ ಮಾನ್ಪಡೆ ಒತ್ತಾಯಿಸಿದರು.

ಬಳಿಕ ದ.ಕ.ಜಿಲ್ಲಾ ಪಂಚಾಯತು ಮುಖ್ಯ ಕಾರ್ಯನಿರ್ವಹಣಾಧಿಕಾರಿಯೊಂದಿಗೆ ಮಾತುಕತೆ ನಡೆದು, ಪರಿಶೀಲಿಸಿ ಸರಿಪಡಿಸುವುದಾಗಿ ಅಧಿಕಾರಿಗಳು ನೀಡಿದ ಭರವಸೆಯ ಮೇಲೆ ಪ್ರತಿಭಟನೆಯನ್ನು ಹಿಂತೆಗೆದುಕೊಳ್ಳಲಾಯಿತು. ⬢

JANASHAKTHI KANNADA VARA PATRIKE NOV 23, 2014 Price : Rs. 10/-
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO
RNI No. KARKAN /2006/17926 Posted on every Satuarday
Licensed to Post without prepayment License No. WPP-283

ಜಗದಗಲ

ಶರತ್‌ಚಂದ್ರ





ಬ್ರೆಜಿಲ್: ಎಡ ಅಧ್ಯಕ್ಷೆ ದಿಲ್ಮಾ ಪುನರಾಯ್ಕೆ

ಬ್ರೆಜಿಲ್ ದೇಶದ ಜನ ವರ್ಕರ್ಸ್ ಪಾರ್ಟಿಯ ಈಗಿನ ಅಧ್ಯಕ್ಷೆ ದಿಲ್ಮಾ ರೂಸೆಫ್ ಅವರನ್ನು ಪುನರಾಯ್ಕೆ ಮಾಡಿ, ಲ್ಯಾಟಿನ್ ಅಮೆರಿಕದ 'ಎಳೆಗೆಂಪು ಅಲೆ'ಯನ್ನು ಮುಂದುವರೆಸಿದ್ದಾರೆ. ಇತ್ತೀಚೆಗೆ ಚಿಲಿ ದೇಶದಲ್ಲಿ ಮಿಶೆಲ್ ಬೆಶೆಲೆ, ಇಕ್ವಡೋರ್ ದೇಶದಲ್ಲಿ ರಾಫೆಲ್ ಕೊ–ರಿಯಾ, ಬೊಲಿವಿ ಯಾ ದೇಶದಲ್ಲಿ ಇವೊ ಮೊರಾಲೆಸ್‌ರವರ ವಿಜಯದೊಂದಿಗೆ 1998ರಲ್ಲಿ ವೆನೆಜುವೆಲಾದಲ್ಲಿ ಚವೇಝ್ ವಿಜಯದೊಂದಿಗೆ ಆರಂಭವಾದ 'ಎಳೆಗೆಂಪು ಅಲೆ' ಎರಡನೇ 'ಪೀಳಿಗೆ'ಗೆ ಹೋಗಿದೆ. 'ಎಳೆಗೆಂಪು ಅಲೆ' ಆರಂಭಿಸಿದ ಮೊದಲ ಪೀಳಿಗೆಯ ಚವೇಝ್, ಲುಲಾ(ಬ್ರೆಜಿಲ್), ಕಿರ್ಚ್ನರ್(ಅರ್ಜೆಂಟಿನಾ) ನಂತರವೂ ಮುಂದುವರೆದಿದೆ.

ಹೆಚ್ಚಿನ ದೇಶಗಳಲ್ಲಿ ಎಡ ಅಧ್ಯಕ್ಷರೂ ಸರಕಾರಗಳೂ ಮೂರು ಅಥವಾ ಹೆಚ್ಚು ಬಾರಿ ಪುನರಾಯ್ಕೆ ಆಗಿವೆ. ನಮ್ಮ ಬೂರ್ಜ್ವಾ ಮೀಡಿಯಾ ಪಂಡಿತರ 'ಎಂಟಿ–ಇಂಕಂಬೆನ್ಸಿ' ಅಂದರೆ ('ಆಡಳಿತ ವಿರೋಧಿ ಅಲೆ') ನೀತಿ ಈ ಸರಕಾರಗಳಿಗೆ ತಟ್ಟಿಲ್ಲ. ಏಕೆಂದರೆ ಉತ್ತರ ಅಮೆರಿಕ ಲ್ಯಾಟಿನ್ ಅಮೆರಿಕದ ಮೇಲೆ 1980, 1990ರ ದಶಕಗಳುದ್ದಕ್ಕೂ ಹೊರಿಸಿದ ಜಾಗತೀಕರಣದ ನೀತಿಗಳನ್ನು ಬೆಂಬಲಿಸುವ ಬಲಂಥೀಯ ಪಕ್ಷ–ವ್ಯಕ್ತಿಗಳನ್ನು ಜನ ಹೊರಗಿಡಬಯಸುತ್ತಾರೆ. ಸಾಮಾಜಿಕ ಕಲ್ಯಾಣ, ಬಡತನ ನಿವಾರಣೆ ಮತ್ತು ಉದ್ಯೋಗ ಸೃಷ್ಟಿಸುವ ನೀತಿ ಹೊಂದಿರುವ ಪಕ್ಷ–ವ್ಯಕ್ತಿಗಳನ್ನು ಬೆಂಬಲಿಸುತ್ತಾರೆ. ಲ್ಯಾಟಿನ್ ಅಮೆರಿಕ ಖಂಡದ ಅತೀ ದೊಡ್ಡ ದೇಶ ಬ್ರೆಜಿಲಿನಲ್ಲಿ ಮತ್ತೆ ಇದನ್ನು ಸ್ಪಷ್ಟ ಪಡೆಸಿದ್ದಾರೆ.

ಎರಡನೇ ಸುತ್ತಿನಲ್ಲಿ ವಿಜಯ

ವರ್ಕರ್ಸ್ ಪಾರ್ಟಿಯ ದಿಲ್ಮಾ ಅವರಿಗೆ ಮೊದಲ ಸುತ್ತಿನಲ್ಲಿ, ಬ್ರೆಜಿಲ್ ಕಮ್ಯುನಿಸ್ಟ್ ಮತ್ತು ಇತರ ಎಡ ಪಕ್ಷಗಳು ಸೇರಿದಂತೆ 10 ಎದುರಾಳಿಗಳು ಇದ್ದರು, ಮೊದಲ ಸುತ್ತಿನಲ್ಲಿ ದಿಲ್ಮಾ ಅವರಿಗೆ ಶೇ. 42 ಮತ ಸಿಕ್ಕಿತು. ಅವರ ಸಮೀಪದ ಬಲಪಂಥೀಯ ಸೋಶಿಯಲ್ ಡೆಮೊಕ್ರಾಟಿಕ್ ಪಕ್ಷದ (ಬ್ರೆಜಿಲ್ ಬದಲಾವಣೆ ಒಕ್ಕೂಟ ಬೆಂಬಲಿತ) ಪ್ರತಿಸ್ಪರ್ಧಿ ಎಸಿಯೊ ನೆವೆಸ್ ಅವರು ಶೇ. 34 ಮತ ಗಳಿಸಿದರು. ಮೂರನೇ ಸ್ಥಾನವನ್ನು ನಡುಪಂಥೀಯ ಸೋಶಲಿಸ್ಟ್ ಪಾರ್ಟಿಯ (ಬ್ರೆಜಿಲ್ ಐಕ್ಯತೆ ಒಕ್ಕೂಟ ಬೆಂಬಲಿತ) ಅಭ್ಯರ್ಥಿ ಮರಿನಾ ಸಿಲ್ವಾ ಶೇ. 21 ಮತ ಪಡೆದರು. ನಡುಪಂಥೀಯ ಮರಿನಾ ಸಿಲ್ವಾ ಎರಡನೇ ಸ್ಥಾನ ಗಳಿಸಿ ದಿಲ್ಮಾ ಅವರಿಗೆ ಎರಡನೇ ಸುತ್ತಿನಲ್ಲೂ ತೀವ್ರ ಪ್ರತಿಸ್ಪರ್ಧೆ ನೀಡುತ್ತಾರೆ ಎಂದು ನಿರೀಕ್ಷಿಸಲಾಗಿತ್ತು.

ಎರಡನೇ ಸುತ್ತಿನಲ್ಲಿ ದಿಲ್ಮಾ ನಡುಪಂಥೀಯ ಕೂಟದ ಹೆಚ್ಚಿನ ಮತಗಳನ್ನು ಪಡೆದು ಸುಲಭದಲ್ಲಿ ಗೆಲ್ಲುತ್ತಾರೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ನಡುಪಂಥೀಯ ಕೂಟದ ಮತಗಳು ಇಬ್ಬರಿಗೂ ಸಮಾನವಾಗಿ ಹಂಚಿಹೋದಂತೆ ಕಾಣುತ್ತದೆ. ದಿಲ್ಮಾ ಅವರಿಗೆ ಶೇ. 52 ಮತ ಬಂದ–ರೆ ಬಲಪಂಥೀಯ ಎಸಿಯೊ ನೆವೆಸ್ ಅವರು ಶೇ.48 ಮತ ಗಳಿಸಿದರು. ಇದರ ಜತೆಗೆ ನಡೆದ ಪಾರ್ಲಿಮೆಂಟು ಚುನಾವಣೆಯಲ್ಲಿ ವರ್ಕರ್ಸ್ ಪಾರ್ಟಿಯ ನಾಯಕತ್ವದ 'ಜನಶಕ್ತಿ ಒಕ್ಕೂಟ') ಪಾರ್ಲಿಮೆಂಟಿನ ಕೆಳಸದನದಲ್ಲಿ 513ರಲ್ಲಿ 304 ಮತ್ತು ಮೇಲ್ಸದನದಲ್ಲಿ 81ರಲ್ಲಿ 53 ಸೀಟು ಗೆದ್ದು ಬಹುಮತ ಪಡೆದಿದೆ. ಬಲಪಂಥೀಯ ಬ್ರೆಜಿಲ್ ಬದಲಾವಣೆ ಒಕ್ಕೂಟ ಅನುಕ್ರಮವಾಗಿ 128 ಮತ್ತು 19 ಸೀಟು ಗಳಿಸಿದೆ. ನಡುಪಂಥೀಯ ಬ್ರೆಜಿಲ್ ಐಕ್ಯತೆ ಒಕ್ಕೂಟ ಅನುಕ್ರಮವಾಗಿ 53 ಮತ್ತು 7 ಸೀಟು ಗಳಿಸಿದೆ.

ದಿಲ್ಮಾ ಪುನರಾಯ್ಕೆಗೆ ಏನು ಕಾರಣ?

ಲ್ಯಾಟಿನ್ ಅಮೆರಿಕದಲ್ಲಿ ಜಾಗತಿಕ ಬಂಡವಾಳಶಾಹಿ ವ್ಯವಸ್ಥೆಯೊಂದಿಗೆ ಅತ್ಯಂತ ನಿಕಟ ಸಂಬಂಧ ಇರುವ ಬ್ರೆಜಿಲಿನಲ್ಲಿ ನವ–ಉದಾರವಾದಿ ಬಲಪಂಥೀಯ ಸರಕಾರವನ್ನು ಗೆಲ್ಲಿಸಬೇಕು ಎಂದು ಶತಾಯ ಗತಾಯ ಪ್ರಯತ್ನಿಸಿತು. 2013ರಲ್ಲಿ ಸರಕಾರದ ಕೆಲವು ನೀತಿಗಳ ವಿರುದ್ಧ ತೀವ್ರ ಚಳುವಳಿ ನಡೆದಿದ್ದು ದಿಲ್ಮಾ ಸರಕಾರದ ಜನಪ್ರಿಯತೆ ಅಷ್ಟೇನೂ ಹೆಚ್ಚಿರಲಿಲ್ಲ. ಹಾಗಾದರೆ ದಿಲ್ಮಾ ಪುನರಾಯ್ಕೆಗೆ ಏನು ಕಾರಣ?

ಕಳೆದ 12 ವರ್ಷಗಳ ವರ್ಕರ್ಸ್ ಪಾರ್ಟಿಯ ಆಡಳಿತದಲ್ಲಿ ಸುಮಾರು 4 ಕೋಟಿ ಜನರನ್ನು ಬಡತನದಿಂದ ಮೇಲಕ್ಕೆತ್ತಲಾಗಿದೆ. ಹಸಿವು ಅಳಿಸಿಹಾಕಲಾಗಿದೆ. ನಿರುದ್ಯೋಗ ಅತ್ಯಂತ ಕೆಳ ಮಟ್ಟದಲ್ಲಿದೆ. ಇದು ಸಾಧ್ಯವಾಗಿದ್ದು ಬಡವರಿಗೆ 'ಕ್ಯಾಶ್ ಟ್ರಾನ್ಸ್ ಫರ್" ಯೋಜನೆಯಿಂದಾಗಿ. ಸದ್ಯ ಬ್ರೆಜಿಲ್ ಮೇಲೆ ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟು ತೀವ್ರ ಪರಿಣಾಮ ಬೀರಿದ್ದರೂ ಜನ ವರ್ಕರ್ಸ್ ಪಾರ್ಟಿಯ ಜನ–ಪರ ನೀತಿಗಳಲ್ಲಿ ಬದಲಾವಣೆ ಬಯಸುವುದಿಲ್ಲ. ಬಲಪಂಥೀಯ ನೆವೆಸ್ ಆಯ್ಕೆಯಾದರೆ ಶ್ರೀಮಂತರಿಗೆ 'ಕ್ಯಾಶ್ ಟ್ರಾನ್ಸ್ ಫರ್" ಮಾಡುತ್ತಾನೆ ಎಂದು ಅವರಿಗೆ ಗೊತ್ತು.

ಮತದಾನ ಹಿಂದೆಂದಿಗಿಂತಲೂ ಹೆಚ್ಚಾಗಿ ವರ್ಗ ಆಧಾರದ ಮೇಲೆ ಮತದಾನವಾಗಿದೆ. ಸರಕಾರದ ಸಾಮಾಜಿಕ ಕಲ್ಯಾಣ ನೀತಿಗಳಿಂದ ಪ್ರಯೋಜನ ಪಡೆದ ಬಡವರು ಮತ್ತು ಕಾರ್ಮಿಕರು ದಿಲ್ಮಾಗೆ ಮತ ನೀಡಿದ್ದಾರೆ. ಮಧ್ಯಮ ಮತ್ತು ಶ್ರೀಮಂತ ವರ್ಗದ ಜನ ಬಲಪಂಥೀಯ ನೆವೆಸ್‌ಗೆ ಮತ ಹಾಕಿದ್ದಾರೆ.

ದಿಲ್ಮಾ ಪುನರಾಯ್ಕೆಯ ಮಹತ್ವ

ನವ–ಉದಾರವಾದಿ ನೀತಿಗಳು ಮಾರಕ ನಿಜ. ಆದರೆ ಇಂದಿನ ಜಾಗತಿಕ ಪರಿಸ್ಥಿತಿಯಲ್ಲಿ ಬೇರೆ ಅದನ್ನು ಅಕ್ಷರಶಃ ಪಾಲಿಸುವುದು ಬಿಟ್ಟರೆ ಬೇರೆ ಯಾವುದೇ 'ದಾರಿ' ಇಲ್ಲ ಎಂಬ ರಾಜಕೀಯ ವಾದ ಪೊಳ್ಳು ಎಂದು ಕಳೆದ 12 ವರ್ಷಗಳ ವರ್ಕರ್ಸ್ ಪಾರ್ಟಿಯ ಆಡಳಿತ ತೋರಿಸಿಕೊಟ್ಟಿದೆ. ಬಡವರು ಮತ್ತು ಕಾರ್ಮಿಕರಿಗೆ ತಮ್ಮ ಹಿತಾಸಕ್ತಿಯ ಅರಿವು ಇಲ್ಲ ಎಂಬ ಕೆಲವರ ವಾದವೂ ಹುರುಳಿಲ್ಲದ್ದು, ಸ್ಪಷ್ಟ ಬದಲಿ ನೀತಿಗಳನ್ನು ತೋರಿಸಿದರೆ ಜನ ಅದನ್ನು ಬೆಂಬಲಿಸುತ್ತಾರೆ ಎಂಬುದೂ ಸ್ಪಷ್ಟವಾಗಿದೆ.

ಲ್ಯಾಟಿನ್ ಅಮೆರಿಕದ ಅತಿ ದೊಡ್ಡ ಮತ್ತು ಪ್ರಮುಖ ದೇಶದಲ್ಲಿ ಜನ–ಪರ ನೀತಿ ಮುಂದುವರೆಸಲು ಜನಾದೇಶ ದೊರಕಿದ್ದು ಮತ್ತು ಮೇಲೆ ಹೇಳಿದ ಹಾಗೆ ಇತರ ಹಲವು ದೇಶಗಳಲ್ಲೂ ಎಡ ಸರಕಾರಗಳಿಗೆ ಭಾರೀ ಬೆಂಬಲ ದೊರಕಿದ್ದು ಜಾಗತಿಕ ಬಂಡವಾಳಶಾಹಿಗೆ ಸೆಡ್ಡು ಹೊಡೆದು ಇವನ್ನು ಮುಂದುವರೆಸಲು ಸಾಧ್ಯವಾಗುವ ವಾತಾವರಣ ಮುಂದುವರೆದಿದೆ.

ಪುಟ 14 ಕ್ಕೆ



"ಏಕರೂಪ ಮತ್ತು ಗುಣಮಟ್ಟದ ಶಿಕ್ಷಣ ಪ್ರತಿ ಮಗುವಿನ ಹಕ್ಕು"

'ಅಭಿಮನ್ಯು' (ಪುಟ 12 ಕ್ಕೆ)



JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**